# ನಿಸರ್ಗೋಪಚಾರ ಚಿಕಿತ್ಸಾ ತಜ್ಞರ ಮಧ್ಯದಲ್ಲಿ

ಡಾ। 'ಜೀವಿ' ಕುಲಕರ್ಣಿ

ಮುಂಬೈಯಲ್ಲಿ 'ಅಸೋಸಿಯೇಶನ್ ಆಫ್ ನ್ಯಾಚುರೋಪಾಥ್ಸ್' ಎಂಬ ಸಂಸ್ಥೆಯಿದೆ. ಬೃಹನ್ ಮುಂಬೈಯಲ್ಲಿ ವಾಸಿಸುವ ಸುಮಾರು 150 ಜನ ನಿಸರ್ಗ ಚಿಕಿತ್ಸಾ ತಜ್ಞ ಡಾಕ್ಟರರು ಸದಸ್ಯರಾಗಿದ್ದಾರೆ. ಮರಾಠಿ ಲೇಖಕ ಡಾಕ್ಟರ್ ಪ್ರಕಾಶ ಕೊಂಡೇಕರ್ ಅವರು ನನ್ನ ಮಿತ್ರರು ಹಾಗೂ ಈ ಸಂಸ್ಥೆಯ ಕಾರ್ಯದರ್ಶಿ. ಇದರ ಸಂಸ್ಥಾಪಕರು ವಿಶ್ವವಿಖ್ಯಾತ ನಿಸರ್ಗೋಪಚಾರ ತಜ್ಞ ಡಾ। ಪಿ. ಕೆ. ಬೋಳಾರ ಅವರು. ಸ್ವಾತಂತ್ರ್ಯದ ಐವತ್ತು ವರುಷಗಳನ್ನು ಆಚರಿಸುವ ನಿಮಿತ್ತ ಒಂದು ಸಭೆ ಕರೆದು ನನ್ನನ್ನು ಅತಿಥಿ ಭಾಷಣಕಾರನೆಂದು ಆಹ್ವಾನಿಸಿದರು. ಡಾ। ಬೋಳಾರರು ಅಧ್ಯಕ್ಷತೆ ವಹಿಸಿದ್ದರು. ನನ್ನ ಭಾಷಣದ ವಿಷಯ 'ನಿಸರ್ಗೋಪಚಾರ ಹಾಗೂ ಯೋಗ ಚಿಕಿತ್ಸೆ - ಇಂದಿನ ಅವಶ್ಯಕತೆ'

ಸಭಿಕರೆಲ್ಲ ತಜ್ಞ ಡಾಕ್ಟರರು. ನಾನು ಈ ವಿಷಯದ ವಿದ್ಯಾರ್ಥಿ. ಬಹುಶಃ ನನ್ನ ಪರೀಕ್ಷೆ ಮಾಡಲು ಡಾ। ಬೋಳಾರರು ನನ್ನನ್ನು ಆಮಂತ್ರಿಸಿದ್ದರೆಂದು ಭಾವಿಸಿದ್ದೆ. ನನ್ನ ಭಾಷಣವಾದ ಮೇಲೆ ಅನೇಕರು ಪ್ರಶ್ನೆ ಕೇಳಿದರು. ಒಬ್ಬ ಮಹಿಳಾ ಡಾಕ್ಟರರು ಕೇಳಿದರು, "ನಾವೆಲ್ಲಾ ನಿಸರ್ಗ ಚಿಕಿತ್ಸಾ ತಜ್ಞರು. ಯೋಗ ಅಷ್ಟೊಂದು ಮುಖ್ಯವಲ್ಲ. ರೋಗ ನಿವಾರಣೆಗೆ 'ನಿಸರ್ಗ ಚಿಕಿತ್ಸೆಯೇ' ಮುಖ್ಯ. ಯೋಗಾಭ್ಯಾಸ ಸಹಕಾರಿಯಾಗಬಹುದು ಆದರೆ ಅದರಿಂದ ಯಾವ ರೋಗ ನಿವಾರಣೆಯಾಗುತ್ತದೆ?" ಎಂದು ಪ್ರಶ್ನಿಸಿದರು. ನಾನು ಅವರಿಗೆ ವಿಶ್ವವಿಖ್ಯಾತ ಯೋಗ ಶಿಕ್ಷಕ ಬಿ. ಕೆ. ಎಸ್. ಅಯ್ಯಂಗಾರರ ಪುಸ್ತಕದ ಬಗ್ಗೆ ಹೇಳಿದೆ. ಅದು ಈ ಕ್ಷೇತ್ರದಲ್ಲಿಯ ಪ್ರಮಾಣ ಗ್ರಂಥ. ಶ್ರೀ ಅಯ್ಯಂಗಾರರು ಅನೇಕ ರೋಗಗಳ ಪಟ್ಟಿಯನ್ನೇ ಕೊಟ್ಟು ಅವನ್ನೆಲ್ಲ ಯೋಗಾಭ್ಯಾಸದಿಂದ ಹೇಗೆ ಗುಣಪಡಿಸಬಹುದು ಎಂಬುದನ್ನು ತೋರಿಸಿದ್ದಾರೆ.

ಮುಂಬೈಯಲ್ಲಿ ಅಂಬಿಕಾ ಯೋಗ ಕುಟೀರದ ಸಂಸ್ಥಾಪಕ ಪುಂಡಲೀಕ ನಿಕಮ್ ಗುರೂಜಿ ಅನೇಕ ರೋಗಗಳನ್ನು ಯೋಗಾಭ್ಯಾಸದಿಂದ ಹೇಗೆ ಗುಣಪಡಿಸಿದ್ದಾರೆಂಬುದನ್ನು ಹೇಳಿದೆ. 1992ರಲ್ಲಿ ನನಗೆ 'ಸಂಧಿವಾತ' (Arthritis) ಬಾಧೆಯಾದಾಗ, ಸರ್ಜನರು ಶಸ್ತ್ರ ಚಿಕಿತ್ಸೆಯಿಂದ ಮಾತ್ರ ಪರಿಹಾರ ಸಾಧ್ಯವೆಂದಾಗ, ನಾನು ನಿಕಮ್ ಗುರೂಜಿಯವರ ಮಾರ್ಗದರ್ಶನದಲ್ಲಿ ಯೋಗಾಭ್ಯಾಸದಿಂದ ಐದು ತಿಂಗಳಲ್ಲಿ ಪೂರ್ತಿ ಗುಣಮುಖ ಹೊಂದಿದ ಉದಾಹರಣೆ ಹೇಳಿ, ಆರು ಮೈಲು ಸೈಕಲ್ ಸವಾರಿ ಮಾಡಿದ ರೋಮಾಂಚಕ ಘಟನೆಯನ್ನು ವಿವರಿಸಿದ್ದೆ. ಆಗ 'ಗುಡ್ ಬೈ ಡಾಕ್ಟರ್' ಎಂಬ ಪತ್ರಿಕೆ (ಯೋಗ ಚಿಕಿತ್ಸೆ ಹಾಗೂ ನಿಸರ್ಗೋಪಚಾರಕ್ಕೆ ಮೀಸಲಾದ ಪತ್ರಿಕೆ) ಪ್ರಾರಂಭಿಸಿದ್ದ ಸಂಗತಿ ತಿಳಿಸಿದೆ. ಈ ಪತ್ರಿಕೆಯಲ್ಲಿ ಯೋಗಾಭ್ಯಾಸದಿಂದ ಅನೇಕ ರೋಗಗಳಿಂದ ಮುಕ್ತಿ ಪಡೆದವರ ಪತ್ರಗಳನ್ನು ಪ್ರಸಿದ್ಧಿಸಿದ

ಹರ್ಷವರ್ಧನ ಪ್ರಕಾಶನ, ಬೋರಿವಿಲಿ ಪಶ್ಚಿಮ, ಮುಂಬೈ – 400 092



ಬಗ್ಗೆ ಹೇಳಿ ಆ ಪತ್ರಗಳನ್ನೆಲ್ಲ ಓದಿ ತೋರಿಸಿದೆ. ಅದರಲ್ಲಿ ಮೂರು ಅತ್ಯಂತ ಮಹತ್ವದ ಪತ್ರಗಳಿದ್ದವು. 1) ಸೈನಸ್‌ನಿಂದ ವಿಪರೀತ ಬಾಧೆಯಾದಾಗ 'ಜಲನೇತಿ'ಯಿಂದ ಪೂರ್ತಿ ಗುಣಮುಖಗೊಂಡ ಕೆ. ಜಿ. ಕೆ. ಅವರ ಪತ್ರ 'otorrhoea' (a chronic infection of the middle ear) ಎಂಬ ಕಿವಿಯ ಪೀಡೆಯಿಂದ ಬಳಲಿ ಸಹಸ್ರಾರು ರೂಪಾಯಿ ಖರ್ಚು ಮಾಡಿ ಮುಂಬೈಯ ಅನೇಕ ಕಿವಿ - ಮೂಗು - ಗಂಟಲು ತಜ್ಞರ ಬಾಗಿಲು ಬಡಿದು ಗುಣ ಪಡೆಯದೆ, ನನ್ನ ಸಲಹೆ ಪಡೆದ ವಿದ್ಯಾರ್ಥಿ ಮಿಲಿಂದ ಕುಲಕರ್ಣಿ ಎಂಬವ ಸಾಂತಾಕ್ರೂಜ್ ಯೋಗ ಸೆಂಟರ್‌ನಲ್ಲಿ ಎಂಟು ದಿನದ ವಾಸ್ತವ್ಯದಲ್ಲಿ, ಚಿಕಿತ್ಸೆ ಪಡೆದು ಪೂರ್ತಿ ಗುಣ ಪಡೆದ ಹೃದಯಂಗಮ ಪತ್ರ ಓದಿದೆ. ಇನ್ನೊಂದು ಪತ್ರ ಬೊರಿವಿಲಿ ಶಾಲೆಯ ಇಂಗ್ಲಿಷ್ ಟೀಚರ್ ಶ್ರೀಮತಿ ಮಿನಿಪ್ರಿನ್ಸ್ ಅವರದು. ಅವರಿಗೆ ಮೂಲವ್ಯಾಧಿಯ ವಿಪರೀತ ತೊಂದರೆಯಿತ್ತು. ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳುವುದು ನಿಶ್ಚಿತವಾಗಿತ್ತು. ಮಗಳ ಪರೀಕ್ಷೆ ಬಂದುದರಿಂದ ನಾಲ್ಕು ತಿಂಗಳು ಮುಂದೆ ಹಾಕಲಾಯ್ತು. ಅಷ್ಟರಲ್ಲಿ ಅಂಬಿಕಾ ಯೋಗ ಕುಟೀರದವರು ನಡೆಸುವ ಉಚಿತ ಯೋಗ ಪ್ರತಿಕ್ಷಣ ಮೂರು ತಿಂಗಳು ಪಡೆದಾಗ ಮೂಲವ್ಯಾಧಿ ಪೂರ್ತಿ ಗುಣಮುಖವಾಗಿತ್ತು. ಈ ಪತ್ರಗಳು ನಾನು ಸಂಪಾದಿಸುತ್ತಿದ್ದ 'Goodbye Doctor' ಪತ್ರಿಕೆಯಲ್ಲಿ ಪ್ರಕಟವಾಗಿದ್ದವು. ಇವನ್ನೆಲ್ಲ ಕೇಳಿದ ಡಾಕ್ಟರರಿಗೆ ಒಂದು ಹೊಸ ಅನುಭವವಾಯ್ತು.

ಚೀನ ದೇಶದಲ್ಲಿರುವ ಜಗತ್ತಿನಲ್ಲೇ ಅತಿದೊಡ್ಡ ಔಷಧ ರಹಿತ ಆಸ್ಪತ್ರೆಯ ಬಗ್ಗೆ ಕೆಲವು ವಿವರ ಹೇಳಿದಾಗ ಶ್ರೋತೃಗಳಿಗೆಲ್ಲ ಅಚ್ಚರಿಯಾಯ್ತು. 1988ರಲ್ಲಿ ಪ್ರಾರಂಭಗೊಂಡ 'ವೆಜೆನ್ ಜಿಂಗ್ ಚಿಂಗಾಂಗ್ ಕ್ಲಿನಿಕ್ ಆ್ಯಂಡ್ ಟ್ರೇನಿಂಗ್ ಸೆಂಟರ್' ಎಂಬ ಔಷಧ ರಹಿತ ಆಸ್ಪತ್ರೆ 1962ರಲ್ಲಿ ಬೀಜಿಂಗ್‌ಗೆ ಸಮೀಪದಲ್ಲಿರುವ ಕ್ವಿನ್ ಹ್ಯಾಗ್‌ಡೋ ಎಂಬ ಪಟ್ಟಣದ ಹಳೆಯ ನೆಪ್ಪಿ ಆಸ್ಪತ್ರೆಗೆ ಸ್ಥಳಾಂತರಿಸಲ್ಪಟ್ಟಿತ್ತು. ಇದರ ಸಂಸ್ಥಾಪಕರು ಡಾ। ಪ್ಯಾಂಗ್ ಮಿಂಗ್ (Dr. Pang Ming) ಅವರು ಪಾಶ್ಚಾತ್ಯ ಹಾಗೂ ದೇಶೀಯ ಚಿಕಿತ್ಸಾ ವಿಧಾನದಲ್ಲಿ ತಜ್ಞರು. ಇಲ್ಲಿ ರೋಗಿಗಳು, ಡಾಕ್ಟರರು, ಸಹಾಯಕ ಸಿಬ್ಬಂದಿಯವರು ಸೇರಿ ಸುಮಾರು 4,000 ಜನರು ವಾಸಿಸುತ್ತಾರೆ. ಈ ಆಸ್ಪತ್ರೆಯಲ್ಲಿ 180 ರೋಗಗಳಿಗೆ ಉಪಚಾರ ಕೈಕೊಳ್ಳಲಾಗುತ್ತದೆ. ಪ್ರತಿಶತ 95ರಷ್ಟು ಯಶಸ್ಸು ದೊರೆತಿದೆ ಎಂದು ಹೇಳಲಾಗುತ್ತದೆ.

ಒಬ್ಬ ರೋಗಗ್ರಸ್ತ ತಾಯಿ ತನ್ನ ಕಾಯಿಲೆಯಿಂದ ತಾನೇ ಬೇಸತ್ತು ಅಡುಗೆ ಮನೆಯ ಚಾಕುವಿನಿಂದ ಇರಿದುಕೊಂಡು ಸಾಯಲು ಪ್ರಯತ್ನಿಸಿ ವಿಫಲವಾದಾಗ, ಅಮರಣ ಉಪವಾಸ ಕೈಕೊಳ್ಳುವ ನಿರ್ಧಾರ ಕೈಗೊಂಡಳಂತೆ. ಆಗ ಆರು ವರ್ಷದ ಮಗು "ಸಾಯಬೇಡ ಅಮ್ಮ" ಎಂದು ರೋದಿಸುತ್ತ ಒಂದು ಬಟ್ಟಲಲ್ಲಿ ಹಾಲು ತಂದು ಚಮಚೆಯಿಂದ ಕುಡಿಸಲು ಪ್ರಯತ್ನಿಸುತ್ತಿತ್ತು. ಹನ್ನೊಂದು ವರ್ಷದ ಇನ್ನೊಂದು ಮಗು ಬಾಯಿಯಿಂದ ಹೊರಗೆ ತೊಟ್ಟಿಕ್ಕುತ್ತಿದ್ದ ಹಾಲನ್ನು ವಸ್ತ್ರದಿಂದ ಒರೆಸುತ್ತಿತ್ತಂತೆ. ಮಕ್ಕಳ ಪ್ರೀತಿಯಿಂದ ಕರಗಿ ಹೋದ ತಾಯಿ ಬದುಕಲು ನಿರ್ಧರಿಸಿದಳು. ಔಷಧ ರಹಿತ ಆಸ್ಪತ್ರೆಯ 'ಸೆಂಟರ್'ಗೆ ಬಂದಳು, ಪೂರ್ತಿ ಗುಣ ಪಡೆದಳು. ಅಷ್ಟೇ ಅಲ್ಲ ಅಲ್ಲಿ ಸಹಾಯಕಳಾಗಿ ಸೇವೆ ಸಲ್ಲಿಸಲು ನಿರ್ಧರಿಸಿದಳು. ಇಲ್ಲಿ ಉಪಚಾರ ಪದ್ಧತಿ 5 ಸಾವಿರ ವರ್ಷ ಹಳೆಯದಾದ ದೇಶೀ ಪದ್ಧತಿ. ಇದಕ್ಕೆ 'ಚೀಲೆಲ್'

(Chi Lel) ಅನ್ನುತ್ತಾರೆ. ಇದನ್ನು ವ್ಯವಸ್ಥಿತವಾಗಿ ಆಚರಣೆಗೆ ತಂದವರು ಡಾ। ಫ್ಯಾಂಗ್. ಈ ಪದ್ಧತಿಯಲ್ಲಿ ನಾಲ್ಕು ಮಹತ್ವದ ಅಂಶಗಳಿವೆ. 1) ನಂಬಿಕೆ ಅರ್ಥದ ಈ ಪದ್ಧತಿಯಲ್ಲಿ ಅಸೀಮ ಶ್ರದ್ಧೆ (Shan Shin), ಈ ವಿಶ್ವದಲ್ಲಿ ಜೀವಶಕ್ತಿ ಇದೆ. (Chi) ಅದು ಎಲ್ಲ ಕಾಯಿಲೆಗಳನ್ನು ಗುಣಪಡಿಸಲು ಶಕ್ತವಾಗಿದೆ ಎಂಬ ದೃಢ ವಿಶ್ವಾಸ. 2) ಸಮೂಹ ಚಿಕಿತ್ಸೆ (Chuchong). ಒಂದೇ ರೋಗದಿಂದ ಬಳಲುವ 30 ರಿಂದ 40 ರೋಗಿಗಳನ್ನು ಒಂದೇ ಕಡೆಗೆ ವಾಸಿಸಲು ಇಟ್ಟು ಅವರಿಗೆ ಜೀವಶಕ್ತಿ ಪಡೆಯುವ ಪ್ರಶಿಕ್ಷಣ ನೀಡುವುದು. 3) ಚೀ ಚಿಕಿತ್ಸೆ (Fa Chi) ಇಲ್ಲಿ ಶಿಕ್ಷಕರು, ವಿಶ್ವದಲ್ಲಿ ಧಾರಾಳವಾಗಿ ದೊರೆಯುವ ಜೀವ ಶಕ್ತಿಯನ್ನು ಪ್ರತಿಯೊಬ್ಬ ರೋಗಿ ಪಡೆಯುವಂತೆ ತರಬೇತಿ ನೀಡುವುದು. 4) ನಿರಂತರ ಅಭ್ಯಾಸ (Lan Gong) ಒಂದು ಗ್ಲಾಸಿನಿಂದ ರಸವನ್ನು ಇನ್ನೊಂದು ಗ್ಲಾಸಿಗೆ ಹಾಕುವಂತೆ (Lift Chi up and pour Chi down) ಪದ್ಧತಿಯಿಂದ ಶಿಕ್ಷಕರು ಪ್ರಶಿಕ್ಷಣ ನೀಡುವರು.

ಇಲ್ಲಿಯ ಡಾಕ್ಟರರಿಗೆಲ್ಲ 'ಟೀಚರ್' ಎಂದೇ ಕರೆಯುತ್ತಾರೆ. ಎಲ್ಲ ರೋಗಿಗಳಿಗೂ 'ವಿದ್ಯಾರ್ಥಿ' ಎಂದೇ ಸಂಬೋಧಿಸುತ್ತಾರೆ. ಡಾಕ್ಟರ್ ಹಾಗೂ ರೋಗಿಯ ಸಂಬಂಧ ಗುರುಶಿಷ್ಯ ಸಂಬಂಧ. ಚೀ ಲೆಲ್ ಪದ್ಧತಿಯನ್ನು ದಿನಕ್ಕೆ ಎಂಟು ತಾಸು ಅಭ್ಯಾಸ ಮಾಡಿಸುತ್ತಾರೆ. ಇದನ್ನು ಹಾಸಿಗೆಯಲ್ಲಿ ಮಲಗಿಕೊಂಡು, ಕುರ್ಚಿಯಲ್ಲಿ ಕುಳಿತು, ತೋಟದಲ್ಲಿ ನಿಂತು ಕೂಡ ಅಭ್ಯಾಸ ಮಾಡಬಹುದು.

ಈ ಚಿಕಿತ್ಸಾ ಪದ್ಧತಿಯು ಶ್ರದ್ಧೆಯನ್ನು ಬೆನ್ನೆಲುಬಾಗಿ ಬಳಸುವುದರಿಂದ ಪತ್ರಿಕೆಯಲ್ಲಿ ಜಾಹೀರಾತು ಮಾಡುವುದಿಲ್ಲ. ಪ್ರಚಾರ ಮಾಧ್ಯಮ ಬಳಸುವುದಿಲ್ಲ. ಗುಣಮುಖವಾದ ರೋಗಿಗಳೇ ಹತ್ತಾರು ಮಿತ್ರರನ್ನು ಇಲ್ಲಿಗೆ ಕರೆ ತರುತ್ತಾರೆ.

ಕ್ಯಾನ್ಸರ್‌ನಂತಹ ರೋಗಗಳನ್ನು ಗುಣಪಡಿಸುವ ವಿಧಾನ ಕಂಡು ಹಿಡಿದಿದ್ದಾರಂತೆ. ಬ್ಲಾಡರ್ ಕ್ಯಾನ್ಸರ್ ಆಗಿದ್ದ ಒಬ್ಬ ರೋಗಿಯನ್ನು ಆಲ್‌ಟ್ರಾ ಸೌಂಡ್ ಯಂತ್ರದ ಸ್ಕ್ರೀನ್ ಮೇಲೆ ಇಬ್ಬರು ತಜ್ಞರು ವೀಕ್ಷಿಸುತ್ತಿದ್ದರು. ಹಿರಿಯ ಡಾ। 'ಚೀ' ಶಕ್ತಿಯನ್ನು ಆಹ್ವಾನಿಸಿದಾಗ ಕ್ಯಾನ್ಸರ್ ವ್ರಣ ಮಾಯವಾಯ್ತಂತೆ. ಇದನ್ನು ಜರ್ಮನಿಯ ಟಿವಿಯವರು ವಿಡಿಯೋ ಟೇಪ್ ಮಾಡಿದರಂತೆ.

ಯಾವುದೇ ರೋಗವಿರಲಿ ಚಿಕಿತ್ಸೆ 24 ದಿನಗಳವರೆಗೆ ಮಾತ್ರ ಇರುತ್ತದೆ. 40-50 ಜನ ಒಂದೆಡೆ ಇರುವುದರಿಂದ ಅವರಲ್ಲಿ ರೋಗ ಪ್ರತಿರೋಧ ಶಕ್ತಿ ಅಧಿಕಗೊಳ್ಳುತ್ತದೆ. ಎಲ್ಲರಿಗೂ ಒಬ್ಬ ವೈರಿ, ಅದುವೆ ರೋಗ. ಎಲ್ಲರೂ ಒಂದಾಗಿ ಅದನ್ನು ಎದುರಿಸುವುದರಿಂದ ಅವರಲ್ಲಿ ಎದುರಿಸುವ ಶಕ್ತಿ ಹೆಚ್ಚಾಗುತ್ತದೆ. ಇಲ್ಲಿ ಒಂದು ತಿಂಗಳ ವೆಚ್ಚ ಪ್ರತಿಯೊಬ್ಬರಿಗೆ 70 ಡಾಲರ್ ಮಾತ್ರ. ಇಲ್ಲಿಯ ಚಿಕಿತ್ಸೆ ಹಾಗೂ ಪರಿಣಾಮದ ಬಗ್ಗೆ ಸಂಶೋಧನೆ ನಡೆಸಿದ್ದು, ಆ ಲೇಖನಗಳ ಎರಡು ಸಂಪುಟ (ಟೆಲಿಫೋನ್ ಡೈರೆಕ್ಟರಿ ಗಾತ್ರದ್ದು) ಪ್ರಕಟವಾಗಿವೆಯಂತೆ. ಇಲ್ಲಿ ವಾಸಿಸುವ ರೋಗಿಗಳನ್ನು ದಿನಪತ್ರಿಕೆ, ರೇಡಿಯೋ, ಟೆಲಿವಿಜನ್ ವೀಕ್ಷಣೆಯಿಂದ ದೂರ ಇಡಲಾಗುತ್ತದೆ. ನಾನು ಇದನ್ನೆಲ್ಲ ಹೇಳುತ್ತಿರುವಾಗ ಪ್ರೇಕ್ಷಕರು ನಿಮಗೆ ಮಾಹಿತಿ ಎಲ್ಲಿಂದ ದೊರೆಯಿತು ಎಂದು ಕೇಳಿದರು "Health Freedom News" ಪತ್ರಿಕೆಯಲ್ಲಿ ಪ್ರಕಟವಾದ Luke Chan ಅವರ ಲೇಖನವನ್ನು ಡಾ। ಪಿ. ಕೆ. ಬೋಳಾರ ನನಗೆ ಕಳುಹಿಸಿದ್ದರು. ಎಲ್ಲ ನಿಸರ್ಗ ತಜ್ಞ



ಡಾಕ್ಟರರು ಈ ಲೇಖನ ಓದಬೇಕು ಎಂದು ಹೇಳಿದೆ.

ಇಂದು ಡಾಕ್ಟರರು ಹೇಳಿದ್ದನ್ನು ರೋಗಿಗಳು ಅನುಸರಿಸುವುದಿಲ್ಲ. ಅದರಿಂದಾಗಿ ರೋಗ ನಿವಾರಣೆ ಸಾಧ್ಯವಾಗುತ್ತಿಲ್ಲ. ಡಾಕ್ಟರರು ಗುರುಸ್ಥಾನದಲ್ಲಿರಬೇಕು. ಸಮಾಜ ಸೇವೆಯ ಪವಿತ್ರ ಕರ್ತವ್ಯ ಪ್ರಜ್ಞೆ ಇದ್ದರೆ ಒಳ್ಳೆಯದು. ಅನೇಕ ರೋಗಿಗಳು ಮಾನಸಿಕವಾಗಿ ತೊಳಲಾಡುತ್ತಿರುತ್ತಾರೆ. ಎರಡು ತಾಸು ಚೆನ್ನಾಗಿ ಮಾತಾಡಿದರೆ ಅವರ ಅರ್ಧ ಪೀಡೆ ಪರಿಹಾರ ಪಡೆಯುತ್ತದೆ ಎಂದು ಹೇಳಿ ನನ್ನ ಭಾಷಣ ಮುಗಿಸಿದ್ದೆ. ಮೋಜಿನ ಸಂಗತಿ ಎಂದರೆ ಕೆಲವು ಡಾಕ್ಟರರು ಕೆಲವು ಜನರನ್ನು ನನ್ನೆಡೆಗೆ ಕಳಿಸಲು ಪ್ರಾರಂಭಿಸಿದರು. ಇದೂ ಒಂದು ಅನನ್ಯ ಅನುಭವವಾಯ್ತು.

ಸಭೆ ಮುಗಿದ ಮೇಲೆ ಚಹದ ವ್ಯವಸ್ಥೆಯಾಗಿತ್ತು. ನಾನು ಚಹ - ಕಾಫಿ ಕುಡಿಯುವುದಿಲ್ಲವೆಂದು ಹೇಳಿದೆ. "ಎಂದೂ ಕುಡಿಯುವುದಿಲ್ಲವೋ, ಈಗ ಮಾತ್ರ ಕುಡಿಯುವುದಿಲ್ಲವೋ" ಎಂದು ಡಾ। ಫತೇಹಂಘೀರ್ ಮಲಾನಿ ಕೇಳಿದರು. "ಮೂರು ವರ್ಷದಿಂದ ಬಿಟ್ಟಿರುವೆ ಸಕ್ಕರೆ ಕಾಯಿಲೆಯೇನಿಲ್ಲ. 10-15 ಕಪ್ ಚಹ ದಿನಕ್ಕೆ ಕುಡಿಯುತ್ತಿದ್ದೆ. ಇದು ಅನವಶ್ಯಕ. ಯೋಗಾಭ್ಯಾಸ ಮಾಡುವವರು ಚಹ ಬಿಡೋದು ಒಳ್ಳೇದು. ಬೇಕಾದರೆ ಒಂದು ಸಲ ಕಷಾಯ ಕುಡಿಯಬಹುದು ಎಂದು ನಿಕಮ್ ಗುರೂಜಿ ಹೇಳಿದ್ದರು. ಈಗ ನನಗೆ ಚಹದ ಅವಶ್ಯಕತೆ ಅನ್ನಿಸುವುದೇ ಇಲ್ಲ" ಎಂದೆ. "ನಾವು ಕೊಡುವ ಚಹ ಅಂದರೆ ಇದಕ್ಕೆ ಪರ್ಯಾಯ ನಾಮ ಕಷಾಯ. ನಮ್ಮ ಮೀಟಿಂಗ್ ಆದಾಗೊಮ್ಮೆ ನಾವು ಎಲ್ಲರಿಗೂ ಇದನ್ನೇ ಕೊಡುತ್ತೇವೆ" ಅಂದರು. ಡಾಕ್ಟರ್ ಮಂಘೀರ್ ಮಲಾನಿ ಅವರು ಅಸೋಸಿಯೇಶನ್ ಆಫ್ ನೆಚರೋಪಾಥ್ಸ್‌ನ ಅಧ್ಯಕ್ಷರು. ಸುವರ್ಣ ಪದಕ ಗಳಿಸಿದ ನಿಸರ್ಗೋಪಚಾರ ತಜ್ಞರು, ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಸೇನಾನಿ, ಅಕುಪ್ರೆಶರ್ ಹಾಗೂ ಮೆಗ್ನೆಟೋ ಥೇರಪಿಯಲ್ಲಿ ವಿಶೇಷತಜ್ಞರು. ಚೆಂಬೂರಿನಲ್ಲಿ 'ಸನಾತನ ಧರ್ಮ ವಿದ್ಯಾಲಯ'ದಲ್ಲಿ ಹಾಗೂ ಬಾಂದ್ರಾದ ನ್ಯಾಶನಲ್ ಕಾಲೇಜಿನಲ್ಲಿ ನಿಸರ್ಗ ಚಿಕಿತ್ಸೆಯ ಕ್ಲಾಸು ನಡೆಸುತ್ತಾರೆ. ಇಂದು ಮುಂಬೈಯಲ್ಲಿ ನಿಸರ್ಗೋಪಚಾರ ತಜ್ಞರಲ್ಲಿ ಹೆಚ್ಚಿನವರು ಅವರ ವಿದ್ಯಾರ್ಥಿಗಳು. ನನಗೆ ಅವರ ವಿಶೇಷ ಪರಿಚಯದ ಲಾಭವಾಯಿತು. ಇಂದು ಔಷಧಿ ಕಂಪನಿಗಳ ಜಾಹೀರಾತಿನ ಮುಂದೆ ಹೊಸ ಪೀಳಿಗೆಯ ಡಾಕ್ಟರರ ಮುಂದೆ, ಉತ್‌ಶೃಂಖಲ ಜೀವನ ರೀತಿನೀತಿಗಳ ಮಧ್ಯೆ ನಿಸರ್ಗೋಪಚಾರ ಹಾಗೂ ಯೋಗ ಚಿಕಿತ್ಸೆಯ ಬಗ್ಗೆ ಮಾತಾಡುವುದೆಂದರೆ 'ಅರಣ್ಯರೋದನ'ದಂತೆ ನಿರರ್ಥಕ. ಆದರೆ ಈ ಕ್ಷೇತ್ರದಲ್ಲಿ ಪಡೆದ ಸಿದ್ಧಿಗಳ ವಿಷಯದಲ್ಲಿ ಪ್ರಚಾರ ಅವಶ್ಯ ಎಂದು ನಾನು ಹೇಳಿದ ಮಾತು ಅವರಿಗೆ ಬಹಳ ಹಿಡಿಸಿತ್ತು. ಈ ದಿಶೆಯಲ್ಲಿ ಪುಸ್ತಕ ಬರೆಯುವುದು, ಕೇಸ್ - ಸ್ಟಡಿಗಳನ್ನು ಪ್ರಕಟಿಸುವುದು, ರೋಗಿಗಳಿಗಾಗಿ ವಿಶೇಷ ಶಿಬಿರಗಳನ್ನು, ಕಮ್ಮಟಗಳನ್ನು ಸಂಘಟಿಸಬೇಕೆಂಬ ನನ್ನ ಅಭಿಪ್ರಾಯವನ್ನು ಅವರು ಅನುಮೋದಿಸಿದರು. ಒಬ್ಬ ರೋಗಿ ಎಲ್ಲ ಮಾರ್ಗ ಮುಚ್ಚಿದಾಗ ಈ ಕಡೆಗೆ ಹೊರಳುತ್ತಾನೆ, ಮೊದಲೇ ಆಕರ್ಷಿತನಾಗಿದ್ದರೆ ಹೆಚ್ಚು ಯಶ ತೋರಿಸಬಹುದು ಎಂಬ ವಿಚಾರ ಮಾನ್ಯವಾಯ್ತು.

(ಮುಂದುವರಿಯುವುದು)

ಪ್ರಕರಣ ಗ್ರಂಥಗಳು - ಸಾರ ಸಂಗ್ರಹ

# ಮಾಯಾವಾದಖಂಡನ

ಪ್ರೊ। ಎಸ್. ವೆಂಕಟೇಶ ಮೂರ್ತಿ

**ನರಸಿಂಹೋऽಖಿಲಾಜ್ಞಾನಮತಧ್ವಾಂತದಿವಾಕರಃ ।**

**ಜಯತ್ಯಮಿತಸಜ್ಜ್ಞಾನಸುಖಶಕ್ತಿಪಯೋನಿಧಿಃ ॥**

ವಿವಿಧ ರೀತಿಯ ಸಾಂಸಾರಿಕ ದುಃಖದರ್ಶನದಿಂದ ವಿರಕ್ತನಾದ ಶಮದಮಾದಿಯುತನಾದ ಮುಮುಕ್ಷುವೇ ತತ್ವಜ್ಞಾನಕ್ಕೆ ಅಧಿಕಾರಿ. ಅಂಥಹ ಅಧಿಕಾರಿ ಜೀವನಿಗೆ ಸಾಂಸಾರಿಕ ಕ್ಲೇಶವನ್ನು ನಿವೃತ್ತಿಗೊಳಿಸಿ ಪರಮಾನಂದಕರವಾದ ಮೋಕ್ಷವನ್ನು ನೀಡಲು ಶಾಸ್ತ್ರಗಳು ಪ್ರವೃತ್ತವಾಗಿವೆ. ಜೀವಜಡಾತ್ಮಕ ಪ್ರಪಂಚಕ್ಕಿಂತ ಅತ್ಯಂತ ಭಿನ್ನನಾದ ನಿಖಿಲಗುಣಪರಿಪೂರ್ಣನಾದ ಹಾಗೂ ಸಮಸ್ತ ದೋಷದೂರನಾದ ಪರಬ್ರಹ್ಮನನ್ನು ಪ್ರತಿಪಾದಿಸುವುದೇ ಸಕಲ ಶ್ರುತಿ ಸ್ಮೃತಿಗಳ ತಾತ್ಪರ್ಯ. ಆದರೆ ಮಾಯಾವಾದವು ಇದಕ್ಕೆ ವಿರುದ್ಧವಾಗಿ ಪ್ರತಿಪಾದಿಸುತ್ತದೆ. ಈ ವಾದದ ಪ್ರಕಾರ "ಸ್ವತಃ ಪರಬ್ರಹ್ಮಸ್ವರೂಪನಾದ ಜೀವನಿಗೆ ಸಾಂಸಾರಿಕ ದುಃಖಾದಿಗಳು ಅಜ್ಞಾನ ನಿಮಿತ್ತವಾಗಿದ್ದು, ಈ ಅಜ್ಞಾನವನ್ನು ನಿವೃತ್ತಿಗೊಳಿಸಿ **ನಾನೇ ಬ್ರಹ್ಮ** ಎಂಬ ಐಕ್ಯಜ್ಞಾನವನ್ನು ಉಂಟುಮಾಡುವುದೇ ಶಾಸ್ತ್ರಗಳ ಗುರಿ. "ಈ ಮತವನ್ನು ನಿರಾಕರಿಸಿ ಸ್ವಮತವನ್ನು ಸಮರ್ಥಿಸಲು ಶ್ರೀಮದಾಚಾರ್ಯರು **ಮಾಯಾವಾದಖಂಡನ** ಎಂಬ ಪ್ರಕರಣ ಗ್ರಂಥವನ್ನು ರಚಿಸಿದ್ದಾರೆ.

## ಅದ್ವೈತದಿಂದ ಶಾಸ್ತ್ರಕ್ಕೆ ವೈಯರ್ಥ್ಯ

**ವಿಮತಂ ಅನಾರಂಭಣೀಯಂ। ಅನ್ಯಥಾ ಪ್ರತಿಪಾದಕತ್ವಾತ್ ।**

ಎಂಬುದಾಗಿ ಈ ಪ್ರಕರಣವನ್ನು ಪ್ರಾರಂಭಿಸುತ್ತ ಶ್ರೀ ಮದಾಚಾರ್ಯರು ಅದ್ವೈತ ಸಿದ್ಧಾಂತವನ್ನು ಒಪ್ಪಿದರೆ ಶಾಸ್ತ್ರಕ್ಕೆ ವೈಯರ್ಥ್ಯ ಬರುತ್ತದೆ ಎಂಬುದಾಗಿ ಹೇಳುತ್ತಾರೆ. ಜಗತ್ತು ಅಜ್ಞಾನಕಲ್ಪಿತ ಎಂದು ಹೇಳುವ ಮತವನ್ನು (ಅಂದರೆ ಅದ್ವೈತಮತವನ್ನು) ಒಪ್ಪಲಾಗದು. ಹಾಗೆ ಒಪ್ಪುವುದಾದ ಪಕ್ಷದಲ್ಲಿ ವಿವಾದಕ್ಕೆ ಆಸ್ಪದವಾದ ವೇದಾದಿ ಶಾಸ್ತ್ರಗಳಿಗೆ ಅನಾರಂಭಣೀಯತ್ವವೆಂಬ ದೋಷದಿಂದಾಗಿ ವೈಯರ್ಥ್ಯ ಉಂಟಾಗುತ್ತದೆ. ಅಯಥಾರ್ಥವಾದ ವಿಷಯವನ್ನು ತಿಳಿಸುವ ಶಾಸ್ತ್ರವು ಸ್ವೀಕಾರಾರ್ಹವಲ್ಲ.

ಮಾಯಾವಾದದ ಪ್ರಕಾರ ಯಥಾರ್ಥವಾದ ವಸ್ತು ಆತ್ಮತತ್ವ ಮಾತ್ರ. ಉಳಿದೆಲ್ಲವೂ ಅಯಥಾರ್ಥ ಅಂದರೆ ಸುಳ್ಳು ಎಂದರ್ಥ. ಆದ್ದರಿಂದ ಜೀವ- ಬ್ರಹ್ಮೈಕ್ಯವನ್ನು ಪ್ರತಿಪಾದಿಸುವ ಶಾಸ್ತ್ರವು ಅಗ್ರಾಹ್ಯವಾಗುತ್ತದೆ. ಐಕ್ಯವು ಆತ್ಮತತ್ವಕ್ಕಿಂತ ಭಿನ್ನವೋ ಇಲ್ಲ ಅಭಿನ್ನವೋ ಎಂದು ಸಂದೇಹ ಬಂದರೆ ಅದಕ್ಕೆ ಉತ್ತರ ಹೀಗಿದೆ. ಐಕ್ಯವು ಆತ್ಮತತ್ವಕ್ಕಿಂತ ಬೇರೆಯಾದರೆ ಎರಡು ಸತ್ಯ ವಸ್ತುಗಳನ್ನು ಒಪ್ಪಬೇಕಾಗುತ್ತದೆ. ಆದರಿಂದ ಅದ್ವೈತ ಸಿದ್ಧಾಂತಕ್ಕೆ ಹಾನಿ. ಆತ್ಮಸ್ವರೂಪವೇ ಆಗಿದೆಯೆಂದರೆ, ಅದ್ವೈತ ಸಿದ್ಧಾಂತದ ಪ್ರಕಾರ ಆತ್ಮನು ಸ್ವಪ್ರಕಾಶನಾಗಿರುವುದರಿಂದ ಐಕ್ಯವು ಅನುಭವಸಿದ್ಧವಾಗಬೇಕು. ಇದರಿಂದ ಶಾಸ್ತ್ರ **ಸಿದ್ಧಸಾಧನತಾ** ಎಂಬ ದೋಷ ಬರುತ್ತದೆ. ಅದ್ವೈತವಾದದ ಪ್ರಕಾರ ಆತ್ಮನಲ್ಲಿ ಯಾವ ವಿಶೇಷವೂ ಇಲ್ಲ. ಆದ್ದರಿಂದ ಆತ್ಮಸ್ವರೂಪವು ವಿದಿತವಾದಾಗ ಐಕ್ಯವೂ ತಿಳಿಯಲ್ಪಡಬೇಕು. ಆತ್ಮನ ಸ್ವರೂಪ ಸಿದ್ಧವಾಗಿದ್ದು ಅದರಲ್ಲಿ ಯಾವುದೇ ವಿಶೇಷವಿಲ್ಲದಿರುವುದರಿಂದ ಅದಕ್ಕೆ ಅಜ್ಞಾನದ ಆವರಣ ಒಪ್ಪುವಂತಿಲ್ಲ. ಅಜ್ಞಾನವೇ ಇಲ್ಲದಿದ್ದ ಮೇಲೆ ಶಾಸ್ತ್ರವು ತಿಳಿದಿದ್ದನ್ನೇ ತಿಳಿಸುತ್ತ ನಿರರ್ಥಕವೆನಿಸುತ್ತದೆ. "ತಿಳಿಯದಿದ್ದನ್ನು ತಿಳಿಸುವ ಸಾಧನವೇ ಪ್ರಮಾಣ" ಎಂದು ಅದ್ವೈತಿಗಳು ಒಪ್ಪುವುದರಿಂದ ಅವರ ಮತದಂತೆ ಶಾಸ್ತ್ರಗಳು ಅಪ್ರಮಾಣವಾಗುತ್ತವೆ.

ಆತ್ಮನು ಸ್ವಪ್ರಕಾಶನಾಗಿರುವುದರಿಂದ ಅಜ್ಞಾತನಲ್ಲ. ನಿರ್ವಿಶೇಷನಾದ್ದರಿಂದ ಅಜ್ಞಾನವೆಂಬುದೇ ಇಲ್ಲ. ಅಜ್ಞಾನಿಯೂ ಇಲ್ಲ, ಅಜ್ಞಾತವಾದ ವಸ್ತುವೂ ಇಲ್ಲ. ಅಜ್ಞಾನನಿವೃತ್ತಿಯೇ ಶಾಸ್ತ್ರಗಳ ಗುರಿ. ಇಲ್ಲದ ಅಜ್ಞಾನದ ನಿವೃತ್ತಿ ಎಂದರೆ ಅರ್ಥವೇ ಇಲ್ಲ. ಆದುದರಿಂದ ಶಾಸ್ತ್ರಗಳು ನಿಷ್ಪ್ರಯೋಜಕವಾಗುತ್ತವೆ.

ಮಾಯಾವಾದದ ಪ್ರಕಾರ ಮೋಕ್ಷವು ಆತ್ಮಸ್ವರೂಪವೇ ಆಗಿದೆ. ಶಾಸ್ತ್ರಾಧ್ಯಯನಕ್ಕಿಂತ ಮುಂಚೆಯೇ ಆತ್ಮ ಸ್ವರೂಪ ಸಿದ್ಧವಾಗಿರುವುದರಿಂದ ಆ ತಿಳುವಳಿಕೆಯ ಫಲವಾದ ಮೋಕ್ಷವೂ ಸಿದ್ಧವಾಗಿದೆ. ಆದ್ದರಿಂದಲೂ ಶಾಸ್ತ್ರಕ್ಕೆ ವೈಯರ್ಥ್ಯ ಬರುತ್ತದೆ. ಅದ್ವೈತದ ಪ್ರಕಾರ ಅಜ್ಞಾನವೆಂಬುದು **ಸದಸದ್ವಿಲಕ್ಷಣ**. ಸತ್ ಪದಾರ್ಥವೂ ಅಲ್ಲ, ಅಸತ್ ಪದಾರ್ಥವೂ ಅಲ್ಲ. ಇವೆರಡಕ್ಕಿಂತ ಭಿನ್ನವಾದ ಪ್ರಕಾರವೇ ಸದಸದ್ವಿಲಕ್ಷಣ ಎಂಬುದು ಅವರ ಅಭಿಪ್ರಾಯ. ಅಜ್ಞಾನನಾಶವೆಂಬ ಮೋಕ್ಷವು ಸದಸದ್ವಿಲಕ್ಷಣವಿಲಕ್ಷಣ ಎಂಬ ಐದು ಪ್ರಕಾರಗಳಲ್ಲಿ ಅಜ್ಞಾನವು ನಾಲ್ಕನೆಯ ಪ್ರಕಾರ. ಅಜ್ಞಾನದ ನಿವೃತ್ತಿ ಐದನೆಯ ಪ್ರಕಾರ. ನಾಲ್ಕನೆಯ ಪ್ರಕಾರವಾದ ಅಜ್ಞಾನವೇ ಇಲ್ಲ ಎಂದಾದರೆ ಐದನೆಯ ಪ್ರಕಾರವೂ ನಿರಸ್ತವಾಯಿತು. ಇದನ್ನೇ ಶ್ರೀ ಮದಾಚಾರ್ಯರು **ಅಜ್ಞಾನಾಸಂಭವೇನ ಚತುರ್ಥಪ್ರಕಾರಾಭಾವಾತ್ ಪಂಚಮಪ್ರಕಾರತಾಪಿ ನಿರಸ್ತಾ** ಎಂದು ತಿಳಿಸಿದ್ದಾರೆ. ಹೀಗೆ ಶಾಸ್ತ್ರಕ್ಕೆ ವಿಷಯ, ಪ್ರಯೋಜನಗಳು ಇಲ್ಲವಾಗುವುದರಿಂದ ಅಧಿಕಾರಿಯೂ ಇಲ್ಲ. ಆಗ ಅವುಗಳ ಪರಸ್ಪರ ಸಂಬಂಧವೂ ಇರುವುದಿಲ್ಲ. ಅನುಬಂಧ ಚತುಷ್ಟಯ ಹೊಂದಿರದ ಶಾಸ್ತ್ರ ಅಗ್ರಾಹ್ಯವೆನಿಸುತ್ತದೆ.

ಹೀಗೆ ವೇದಾದಿಗಳು ಜೀವಬ್ರಹ್ಮೈಕ್ಯವನ್ನು ಪ್ರತಿಪಾದಿಸುವುದಾದರೆ ಅವುಗಳಿಗೆ ಅನಾರಂಭಣೀಯತ್ವ ಹಾಗೂ ನಿಷ್ಪ್ರಯೋಜಕತ್ವಗಳು ಬರುವುದರಿಂದ ಐಕ್ಯವನ್ನು ಪ್ರತಿಪಾದಿಸುವುದು ಅವುಗಳ ತಾತ್ಪರ್ಯವಲ್ಲ ಎಂಬುದನ್ನು ಮೇಲೆ ಹೇಳಿದ ರೀತಿಯಲ್ಲಿ ಸಮರ್ಥಿಸಿದ ಆಚಾರ್ಯರು, ಇದಕ್ಕೆ ಸಂವಾದಿಯಾಗಿ ವಿಷ್ಣು ಸರ್ವೋತ್ತಮತ್ವ

ಪವನಜ ಪ್ರಕಾಶನ, 1625, 5ನೇ ಬಿ ಕ್ರಾಸ್, 2ನೇ ಬ್ಲಾಕ್, ಬಿ. ಎಸ್. ಕೆ. Iಸ್ಟೇಜ್, ಬೆಂಗಳೂರು - 560 050

ಪ್ರತಿಪಾದಕವಾದ ಭಗವದ್ಗೀತೆ ಹಾಗೂ ಕಠೋಪನಿಷತ್ತುಗಳ ವಾಕ್ಯಗಳನ್ನು ಈ ಪ್ರಕರಣದ ಕೊನೆಯಲ್ಲಿ ಉಲ್ಲೇಖಿಸಿದ್ದಾರೆ.

“ದ್ವಾವಿಮೌ ಪುರುಷೌ ಲೋಕೇ” ಇತ್ಯಾದಿ ಭಗವದ್ಗೀತೆಯ ಹದಿನೈದನೆಯ ಅಧ್ಯಾಯದ ಕೊನೆಯ ಐದು ಶ್ಲೋಕಗಳಲ್ಲಿ ವಿಷ್ಣುವೇ ಸರ್ವೋತ್ತಮ ಮತ್ತು ಸಕಲವೇದಪ್ರತಿಪಾದ್ಯ ಹಾಗೂ ಈ ರೀತಿ ಅರಿತು ಭಗವಂತನನ್ನು ಆರಾಧಿಸುವುದರಿಂದ ಪರಮಪುರುಷಾರ್ಥವಾದ ಮೋಕ್ಷವು ಲಭ್ಯವಾಗುತ್ತದೆ ಎಂಬುದಾಗಿ ಸ್ವತಃ ಶ್ರೀಕೃಷ್ಣನೇ ಉಪದೇಶಿಸಿದ್ದಾನೆ. “ಇಂದ್ರಿಯೇಭ್ಯಃ ಪರಾಹ್ಯರ್ಥಾ” ಇತ್ಯಾದಿ ವಾಕ್ಯಗಳಲ್ಲಿ ಕಠೋಪನಿಷತ್ತು ದೇವತಾ ತಾರತಮ್ಯವನ್ನು ತಿಳಿಸುತ್ತ ವಿಷ್ಣುವೇ ಸರ್ವೋತ್ತಮ ಹಾಗೂ ಎಲ್ಲರಿಂದಲೂ ಗಮ್ಯ ಎಂಬುದಾಗಿ ತಿಳಿಸುತ್ತದೆ. ಹೀಗೆ ಸಜ್ಜನರ ಸಂಶಯ ಪರಿಹಾರಕ್ಕಾಗಿ ಸರ್ವಜ್ಞಾಚಾರ್ಯರು ಮಾಯಾವಾದವೆಂಬ ಸಮಸ್ತ ತಮಸ್ಸನ್ನೂ ತಮ್ಮ ತತ್ವವಾದವೆಂಬ ಸೂರ್ಯನಿಂದ ನಿರಸ್ತಗೊಳಿಸಿದ್ದಾರೆ.

**ಇತಿ ಸರ್ವಜ್ಞಮುನಿನಾ ಮಾಯಾವಾದತಮೋಽಖಿಲಮ್ ।**
**ನಿರಸ್ತಂ ತತ್ವವಾದೇನ ಸತಾಂ ಸಂಶಯನುತ್ತಯೇ ॥**
**ನಾಸ್ತಿ ನಾರಾಯಣಸಮಂ ನ ಭೂತಂ ನ ಭವಿಷ್ಯತಿ ।**
**ಏ ತೇನ ಸತ್ಯವಾಕ್ಯೇನ ಸರ್ವಾರ್ಥಾನ್ ಸಾಧಯಾಮ್ಯಹಮ್ ॥** ★


NANDAKI
Ph. : 2480248 (5 lines)
Mobile : 9844009894 (Amar)
Tele Fax : 2125099 /2126420
Email : nandaki@vsnl.net

Investments & Holdings (P) Ltd.
ENGINEERS & DEVELOPERS (P) Ltd.

1st floor, CFC Building Annexe, #14/3,
Nrupathunga Road, Bangalore - 560 001

Contact us for advice on your
Investments (Mutual Funds, RBI Bonds, Infrastructure Bonds etc.)
Insurance (Life Insurance & General Insurance)
Home Loans
Construction of Flats & Houses




# ಅನುಪಮ ಔದಾರ್ಯ

**ಬಿ. ಸುಬ್ರಾಯ ಅಡಿಗ**

**ಕ**ಲಕತ್ತಾ ನಗರಿಯಲ್ಲಿ ಒಬ್ಬ ಮನುಷ್ಯ ತಿರುಗಾಡಲು ಹೊರಟಿದ್ದ. ದಾರಿಯಲ್ಲಿ ಆತ ಒಬ್ಬ ಮುದುಕನನ್ನು ಕಂಡ. ಮುದುಕ ಚಿಂತಾಮಗ್ನನಾಗಿ ತಲೆ ತಗ್ಗಿಸಿ ಮೆಲ್ಲನೆ ನಡೆಯುತ್ತಿದ್ದ. “ನಿಮಗೇನು ಕಷ್ಟ?” - ಸಹಾನುಭೂತಿಯಿಂದ ಕೇಳಿದ ಆ ಮನುಷ್ಯ.

ಅಪರಿಚಿತನೆದುರು ತನ್ನ ಕಷ್ಟ ತೋಡಿಕೊಳ್ಳಲು ಮುದುಕನಿಗೆ ಮನಸ್ಸಾಗಲಿಲ್ಲ. ಅವನ ಮೌನವನ್ನು ಕಂಡು ಮನುಷ್ಯ ಇನ್ನಷ್ಟು ಸಹಾನುಭೂತಿ ತೋರ್ಪಡಿಸುತ್ತ - “ಸಾಧ್ಯವಾದರೆ ನಾನು ನಿಮಗೆ ಸಹಾಯ ಮಾಡುವೆ” - ಎಂದ.

“ನಾನೊಬ್ಬ ಬಡ ಬ್ರಾಹ್ಮಣ. ಕಿರಿಮಗಳ ಮದುವೆಗೆ ಒಬ್ಬ ಸಾಹುಕಾರನಿಂದ ಸಾಲ ಪಡೆದಿದ್ದೆ. ಆದರೆ ಅದೆಷ್ಟು ಪ್ರಯತ್ನಿಸಿದರೂ ಸಾಲ ತೀರಿಸಲು ನನ್ನಿಂದಾಗಲಿಲ್ಲ. ಈಗ ಆತ ಕೋರ್ಟಿನಲ್ಲಿ ಕೇಸು ಹಾಕಿದ್ದಾನೆ. ಏನು ಮಾಡಬೇಕೆಂದೇ ತೋಚುತ್ತಿಲ್ಲ” - ಅಳುಮೋರೆಯಿಂದ ನುಡಿದ ಮುದುಕ.

ಆ ಮನುಷ್ಯ ಬಡ ಬ್ರಾಹ್ಮಣನಿಂದ ಪೂರ್ತಿ ವಿವರ ಪಡೆದುಕೊಂಡ. ಕೇಸು ವಿಚಾರಣೆಗೆ ಬರುವ ದಿನಾಂಕ ಹಾಗೂ ನ್ಯಾಯಾಲಯದ ಹೆಸರು ಕೇಳಿ ತಿಳಿದ.

ವಿಚಾರಣೆಯ ನಿಶ್ಚಿತ ದಿನದಂದು ಆ ಬ್ರಾಹ್ಮಣ ಗಾಬರಿಯಿಂದ ಕೋರ್ಟಿಗೆ ಬಂದು ಒಂದು ಮೂಲೆಯಲ್ಲಿ ಮುದುಡಿ ಕುಳಿತ. ತನ್ನ ಹೆಸರು ಯಾವಾಗ ಬರುವುದೆಂದು ಕಾದಿದ್ದ. ಸಾಕಷ್ಟು ವೇಳೆ ಕಳೆದರೂ ಕರೆ ಬರದಾಗ ಆತ ಗುಮಾಸ್ತನ ಬಳಿ ಬಂದು ‘ನನ್ನ ಕೇಸಿನ ವಿಚಾರಣೆ ಯಾವಾಗ?’ - ಎಂದು ಕೇಳಿದ. ಯಾರೋ ಬಂದು ಪೂರ್ತಿ ಸಾಲ ಸಂದಾಯ ಮಾಡಿದುದರಿಂದ ಕೇಸು ವಜಾ ಆಯಿತೆಂದು ನುಡಿದಾತ. ಬ್ರಾಹ್ಮಣನಿಗೆ ಆಶ್ಚರ್ಯದೊಂದಿಗೆ ಆನಂದವೂ ಆಯಿತು. ಒಂದು ದಿನ ರಸ್ತೆಯಲ್ಲಿ ತನ್ನ ಬಗ್ಗೆ ಸಹಾನುಭೂತಿ ಪ್ರದರ್ಶಿಸಿದ ವ್ಯಕ್ತಿಯೇ ಈ ಮಹಾಪುರುಷನೆಂದು ಅವನಿಗೆ ಖಚಿತವಾಯಿತು.

ಅವರೇ ಬಂಗಾಳದ ಮಹಾ ಸಮಾಜಸುಧಾರಕ ಹಾಗೂ ಪರೋಪಕಾರಿಗಳಾದ ಈಶ್ವರಚಂದ್ರ ವಿದ್ಯಾಸಾಗರರು.

(ಸಂಗ್ರಹ)

**ನಿವೃತ್ತ ಅಧ್ಯಾಪಕರು, ಸಂಡೂರು, ಬಳ್ಳಾರಿ ಜಿಲ್ಲೆ. 583 119**



# ಚಿಂಚೋಳಿ ವೇಂಕಣ್ಣಾಚಾರ್ಯ

ಸಗ್ರಿ ರಾಘವೇಂದ್ರ ಉಪಾಧ್ಯಾಯ

**ಚಿಂ**ಚೋಳಿ ವೇಂಕಣ್ಣಾಚಾರ್ಯರು ಮೈಸೂರು ಅರಮನೆಯ ವಿದ್ವಾಂಸರಾಗಿದ್ದರು. ಅವರ ಜೀವಿತಾವಧಿ ಯಾವುದು ? ಯಾರಲ್ಲಿ ವಿದ್ಯಾಭ್ಯಾಸ ನಡೆಸಿದ್ದರು? ಅವರ ಆಧ್ಯಾತ್ಮಿಕ ಕೊಡುಗೆಗಳಾವುವು? ಅವರು ಸಂಸ್ಕೃತ ವಾಙ್ಮಯಕ್ಕೆ ನೀಡಿದ ಕೊಡುಗೆಗಳಾವುವು? ಈ ಬಗ್ಗೆ ವಿಶೇಷ ಮಾಹಿತಿ ದೊರಕಲಾರದಾದರೂ 1921ರಿಂದ 1931ರ ವರೆಗಿನ ಅವಧಿಯಲ್ಲಿ ಅವರು ರಚಿಸಿರುವ ಕೆಲವು ಸಂಸ್ಕೃತ ಶ್ಲೋಕಗಳು ಸಿಕ್ಕಿರುವುದರಿಂದ ಆ ವರ್ಷಗಳ ಸುತ್ತಮುತ್ತಲಲ್ಲಿ ಅವರು ಇದ್ದರೆಂದು ತಿಳಿದು ಬರುವುದು. ಒಂದು ಎಕ್ಸರ್‌ಸೈಜ್ ಪುಸ್ತಕದಲ್ಲಿ ಬೇರೆ ಬೇರೆ ಸಂದರ್ಭದಲ್ಲಿ ತಾವು ರಚಿಸಿರುವ ಸಂಸ್ಕೃತ ಪದ್ಯಗಳನ್ನು ಆಯಾ ದಿನಾಂಕದ ಉಲ್ಲೇಖದೊಂದಿಗೆ ಅವರು ಬರೆದಿರುವರು. ಆ ಪುಸ್ತಕ ದಿ. ಭೀಮ ಭಟ್ಟರ ಬೆಂಗಳೂರಿನ ಈಶಾವಾಸ್ಯದಲ್ಲಿರುವ ಗ್ರಂಥಾಲಯದಲ್ಲಿ ಸಂಗೃಹಿತವಾಗಿದ್ದು, ಅದನ್ನು ಶ್ರೀ ಭೀಮಭಟ್ಟರ ಸುಪುತ್ರ ಶ್ರೀಕೃಷ್ಣಮೂರ್ತಿ ಇವರು ಗಮನಕ್ಕೆ ತಂದಿರುವರು. ಕವಿಗಳಾದ ಚಿಂಚೋಳಿ ವೇಂಕಣ್ಣಾಚಾರ್ಯರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಬೇಕೆಂದು ಅವರು ಯತ್ನಿಸುತ್ತಿರುವರು ಕೂಡಾ.

ಆ ಎಕ್ಸರ್‌ಸೈಜ್ ಪುಸ್ತಕದ ಸಂಸ್ಕೃತ ಪದ್ಯಗಳು ಸೂಚಿಸುತ್ತಿರುವಂತೆ ಶ್ರೀ ವೇಂಕಣ್ಣಾಚಾರ್ಯರು ಆಶುಕವಿಗಳು. ಎಂತೆಂತಹ ಲೌಕಿಕ ಘಟನೆಗಳನ್ನೂ ಸಂಸ್ಕೃತ ಪದ್ಯಗಳಲ್ಲಿ ಸರಳವಾಗಿ ಸೆರೆ ಹಿಡಿಯಬಲ್ಲ ಕೌಶಲ ಸಂಪನ್ನರು. 10-9-1927ರಂದು ಬೆಂಗಳೂರಿನಲ್ಲಿ ನಡೆದ ಸಮಾರಂಭವೊಂದರಲ್ಲಿ ಮಹಾರಾಜರ ಎದುರು ಆ ಸಮಾರಂಭಕ್ಕೆ ಸಂಬಂಧಿಸಿದಂತೆ ಅವರು ರಚಿಸಿ ಪಠಿಸಿದ ಮೂರು ನಾಲ್ಕು ಸಂಸ್ಕೃತ ಶ್ಲೋಕಗಳ ಪೂರ್ಣ ಪಾಠವನ್ನು ಅನುವಾದ ಸಹಿತವಾಗಿ 'ನವಜೀವನ' ಎಂಬ ಪತ್ರಿಕೆ ವರದಿಸಿರುವ ಪತ್ರಿಕೆಯ ಭಾಗ ಈ ಪುಸ್ತಕದಲ್ಲಿ ಲಗತ್ತಿಸಲಾಗಿದೆ.

## ಶ್ರೀ ಸುಧೀಂದ್ರತೀರ್ಥರ ಸಂಪರ್ಕ

ಪುತ್ತಿಗೆ ಮಠದ ಶತಾಯುಷಿ, ಮಹಾತಪಸ್ವಿ, ಸುಧೀಂದ್ರತೀರ್ಥರ ವಿಶೇಷ ಸಂಪರ್ಕ ಅವರಿಗೆ ಇತ್ತೆಂದು ಅವರ ಕೆಲವು ಪದ್ಯಗಳು ಸೂಚಿಸುತ್ತಿವೆ.

29-7-1926ರಲ್ಲಿ ಪುತ್ತಿಗೆ ಸ್ವಾಮಿಗಳು ಬೆಂಗಳೂರಿನಲ್ಲಿ ಪಾಲ್ಗೊಂಡಿದ್ದ ಸಮಾರಂಭವೊದರಲ್ಲಿ ಶ್ರೀ ಚಿಂಚೋಳಿ ಶ್ರೀಪಾದರ ಬಗ್ಗೆ ಹೀಗೆ ಪದ್ಯ ರಚಿಸಿದ್ದರು.

**ಮುನಿರೇಷ ಧರ್ಮರಾಜಃ ಭೀಮೋಽಪಿ ಧನಂಜಯಶ್ಚ ನಕುಲೋಽಸೌ।**

ವೇದಾಂತ ಉಪನ್ಯಾಸಕರು, ಸಂಸ್ಕೃತ ಕಾಲೇಜು, ಉಡುಪಿ



**ಸಹದೇವಶ್ಚಾಯಮಿತಿ ಮತ್ವಾ ಕೃಷ್ಣೋ ವಸತ್ಯತ್ರ ॥**

ಈ ಜ್ಞಾನಿಗಳು ಧರ್ಮರಾಜ, ಭೀಮ, ಅರ್ಜುನ, ನಕುಲ ಹಾಗೂ ಸಹದೇವ - ಹೀಗೆ ಎಲ್ಲಾ ಆಗಿರುವರೆಂದು ಪಾಂಡವ ಪ್ರಿಯ ಕೃಷ್ಣ ಇಲ್ಲಿ ವಿಶೇಷವಾಗಿ ನೆಲೆಸಿರುವನು.

ಶ್ರೀ ಸುಧೀಂದ್ರತೀರ್ಥರು ಯಾಕೆ ಧರ್ಮರಾಜಾದಿಗಳಾಗಿರುವರೆಂಬುದನ್ನು ವೇಂಕಣ್ಣಾಚಾರ್ಯರೇ ಹೀಗೆ ಸಮರ್ಥಿಸಿತೋರಿಸಿರುವರು - **ಧರ್ಮೈಃ ರಾಜತೇ ಇತಿ - ಧರ್ಮರಾಜಃ** ಧರ್ಮಾನುಷ್ಠಾನದಿಂದ ಮೆರೆಯುತ್ತಿರುವ ಪ್ರಯುಕ್ತ ಧರ್ಮರಾಜ ಎನಿಸುವರು. **ಕಾಮಾದಿಷಷ್ಣಾಂ ಶತ್ರೂಣಾಂ ಭೀಮಃ** - ಕಾಮಾದಿ ಆರುಶತ್ರುಗಳಿಗೆ ಭಯಂಕರರಾಗಿರುವ ಪ್ರಯುಕ್ತ ಭೀಮ ಎನಿಸಿರುವವರು. ಧನಂ ಜಯತೀತಿಧನಂಜಯಃ - ಭೌತಿಕ ಹಾಗೂ ಆಧ್ಯಾತ್ಮಿಕ ಹಣವನ್ನು ಗಳಿಸಿರುವುದರಿಂದ ಧನಂಜಯ ಎನಿಸಿರುವರು. ಕುಲಾಭಿಮಾನರಹಿತಃ ನಕುಲಃ - ತಮ್ಮ ಕುಲದ ಬಗ್ಗೆ ದುರಭಿಮಾನ ಇಲ್ಲದ ಪ್ರಯುಕ್ತ ನಕುಲ ಎನಿಸಿರುವವರು.

**ದೇವೈಃ ಸಹ ವರ್ತತೇ ಇತಿ ಸಹದೇವಃ**

ತತ್ವಾಭಿಮಾನಿ ದೇವತೆಗಳ ವಿಶೇಷಸನ್ನಿಧಾನಕ್ಕೆ ಪಾತ್ರರಾಗಿರುವುದರಿಂದ ಸಹದೇವ ಎನಿಸಿರುವರು.

5-8-26ರಂದು ನಡೆದ ಸಮಾರಂಭದಲ್ಲಿ ಪುತ್ತಿಗೆ ಸ್ವಾಮಿಗಳು ಹೇಳಿದ ಕನ್ನಡ ಕಥೆಗೆ ತಕ್ಕ ಶ್ಲೋಕ ಎಂದು ನಮೂದಿಸಿ ಈ ಪದ್ಯವನ್ನು ರಚಿಸಲಾಗಿದೆ.

**ಪರಿಮಲ ಪುಸ್ತಕಮಾನಯ, ಶಿಷ್ಯಾಂತಸ್ಥಂ ಮಮೇತಿ ಗುರುಣೋಕ್ತಃ।**

**ಆಘ್ರಾಯ ಸರ್ವಕೋಶಾನಾಹಸ್ಮ ಪರಿಮಲಂ ನೈವೇತಿ ॥**

ಗುರುಗಳು ಶಿಷ್ಯನಲ್ಲಿ ತಿಳಿಸುವರು. 'ಒಳಗಿರುವ ಪರಿಮಳ ಪುಸ್ತಕವನ್ನು ತಾ' ಆ ಶಿಷ್ಯ ಒಳ ಹೊಕ್ಕು ಎಲ್ಲ ಪುಸ್ತಕಗಳನ್ನು ಮೂಸಿ ನೋಡಿ ಯಾವೊಂದು ಪುಸ್ತಕವೂ ಪರಿಮಳವಿಲ್ಲ ಎಂದು ಉದ್ಗಾರ ಎತ್ತುವನು.

## ಸಂವತ್ಸರನಾಮ ಸ್ತೋತ್ರಮ್

ಹೀಗೆಯೇ ವೇಂಕಣ್ಣಾಚಾರ್ಯರ ವಾಙ್ಮಯ ಬತ್ತಳಿಕೆಯಲ್ಲಿ ಐದು ಪದ್ಯಗಳಲ್ಲಿ ಸಂಗ್ರಹಿಸಿರುವ 'ಸಂವತ್ಸರನಾಮಸ್ತೋತ್ರಮ್' ರಾಮಾಯಣದ ಬಾಲಕಾಂಡ ಸುಂದರ ಕಾಂಡದ ಪ್ರತಿಪದ್ಯಗಳನ್ನು ಸಂಗ್ರಹಿಸಿರುವ ಎರಡುವರೆ ಶ್ಲೋಕಗಳ ಪದ್ಯ, ಶ್ಲಾಘ್ಯ ಎನಿಸಲು ಅಶ್ಲಾಘ್ಯ ಎನಿಸಬೇಕಾದ ಪ್ರವೃತ್ತಿಗಳ ಸಂಗ್ರಹ ಇತ್ಯಾದಿಗಳೆಲ್ಲ ಸೇರಿಕೊಂಡಿದೆ.

( ಆ ಸ್ತೋತ್ರ ಶ್ಲೋಕಾದಿಗಳ ಬಗ್ಗೆ ಮುಂದಿನ ಸಂಚಿಕೆಯಲ್ಲಿ)

### ಉತ್ತರಗಳು :

1. ರತ್ನಾಕರ; 2. ದೂರ್ವಾಸರು; 3. ಶಾಂತಾ; 4. ಆದಿಶೇಷನ; 5. ಸೂರ್ಯ; 6. ¼ (ಕಾಲು ಅಂಶ); 7. ದೇವವ್ರತ; 8. ಗೌತಮನ; 9. ಸುಗಂಧಿನಿ; 10. ಕಬಂಧ; 11. ಅಚ್ಯುತಪ್ರೇಕ್ಷಾಚಾರ್ಯರು; 12. ಮಾಜಿ ಮುಖ್ಯಮಂತ್ರಿ ವೀರಪ್ಪಮೊಯ್ಲಿ; 13. ಅರುವತ್ತು; 14. ಕುಳಕುಂದ ಶಿವರಾವ್; 15. ಜೋಧಾಬಾಯಿ; 16. ಬಿ. ವಿ. ಕಾರಂತ; 17. ಹದಿನೆಂಟು; 18. ಕುಂವೆಂಪು; 19. ಚಕ್ರವ್ಯೂಹ; 20. ಮೌರ್ಯರು.

# ಶಬ್ದ ವ್ಯಾಖ್ಯೆ

**ಮ. ಗೋ. ಹೆಗಡೆ**

**ಒ**ಂದು ಶಬ್ದದ ವ್ಯಾಖ್ಯೆಯನ್ನು ಮನುಷ್ಯರಲ್ಲಿ 'ಪ್ರಾಜ್ಞ' ರೆನಿಸಿದವರು ನೀಡುವುದಕ್ಕೂ ಅದೇ ಶಬ್ದದ ವ್ಯಾಖ್ಯೆಯನ್ನು ಭಗವಂತ ನಿರೂಪಿಸುವುದಕ್ಕೂ ಅದೆಷ್ಟು ಅಜಗಜಾಂತರ!

'ಸ್ತೇನ' ಎಂದರೆ 'ಕಳ್ಳ' ಎಂದರ್ಥ. ಕನ್ನಡದಲ್ಲಿ ಪ್ರಚಲಿತವಿರುವ ಒಂದು ಗಾದೆ : "ಅಡಿಕೆ ಕದ್ದರೂ ಕಳ್ಳ, ಆನೆ ಕದ್ದರೂ ಕಳ್ಳ" ಎಂದು 'ಕಳ್ಳ' ಶಬ್ದದ ಅರ್ಥವ್ಯಾಪ್ತಿಯನ್ನು ತಿಳಿಸುತ್ತದೆ. ಇಲ್ಲಿ ವಸ್ತುವಿನ ಗಾತ್ರ ಮುಖ್ಯವಲ್ಲ; ಆದರೆ ಅದರ ಅಪಹರಣದ ಹಿಂದಿರುವ ಮನೋಧರ್ಮ ಪ್ರಧಾನವಾಗುತ್ತದೆ. ಕನ್ನ ಹಾಕುವವನು, ಕಳವು ಮಾಡುವವನು ಕಳ್ಳನಾಗುತ್ತಾನೆ. ಅದು ಕಾನೂನಿನ ದೃಷ್ಟಿಯಿಂದ ಅಪರಾಧವಾಗುತ್ತದೆ. ಕಳ್ಳತನ ಮಾಡುವವ ಸಿಲುಕಿ ಬಿದ್ದರೆ, ಪೊಲೀಸರ ಅತಿಥಿಯಾಗುತ್ತಾನೆ. ಅದು ಈಗ ಪ್ರಸ್ತುತವಲ್ಲ.

ಭಗವಂತನ ದೃಷ್ಟಿಯಲ್ಲಿ 'ಕಳ್ಳ'ನ ರೂಪರೇಷೆಯೇ ಬೇರೆ. ಪ್ರಕೃತಿಯಿತ್ತ ಫಲವನ್ನು ಅದಕ್ಕರ್ಪಿಸದೆ ಕೇವಲ ತನ್ನ ಹೊಟ್ಟೆಗಾಗಿ ಕೃತಘ್ನತೆಯಿಂದ ಬಳಸಿಕೊಳ್ಳುವವನು ಕಳ್ಳ. ಎಷ್ಟು ಅರ್ಥವತ್ತಾಗಿದೆ ಈ ವ್ಯಾಖ್ಯೆ.

ಪ್ರಕೃತಿ - ಪುರುಷರ ಪರಸ್ಪರ ಸಹಕಾರದಿಂದ ದೊರೆಯುವ ಸಸ್ಯ ಜನ್ಯವಾದ ಆಹಾರ ಪದಾರ್ಥಗಳೆಲ್ಲಾ ಅವರಿಗೆ ಅರ್ಪಿಸಿ, ಅದನ್ನು ಪ್ರಸಾದದ ರೂಪದಲ್ಲಿ ಬಳಸಿದರೆ ಮಾತ್ರ ಸೇವಿಸುವ ಆ ವ್ಯಕ್ತಿ ಕಳ್ಳನಾಗಲಾರ. ಅಂದರೆ ಇಲ್ಲಿ 'ಇದಂ ನ ಮಮ' 'ಇದು ನನ್ನದಲ್ಲ'ವೆಂಬ ಮನೋಧರ್ಮ ರಕ್ತದ ಕಣ ಕಣಗಳಲ್ಲಿ ಅಂತರ್ಗತವಾಗಿ, ಕ್ಷಣ - ಕ್ಷಣಕ್ಕೂ ಕೃತಜ್ಞತಾಭಾವ ಉಕ್ಕಿ ಬಂದರೆ ಮಾತ್ರ ಅವನು 'ಕಳ್ಳ'ನಲ್ಲ. ಭಾವದಲ್ಲಿ ಕೃತಘ್ನತೆಯ ಲವಲೇಶದಷ್ಟು ಕಶ್ಮಲವು ಸಮಾವೇಶವಾದರೂ ಆ ವ್ಯಕ್ತಿ ಖಂಡಿತವಾಗಿ ಕಳ್ಳನಾಗುತ್ತಾನೆ.

ಅತಿ ಸೂಕ್ಷ್ಮವಾದ 'ಕಳ್ಳ'ನ ವಿಚಾರವನ್ನು ಭಗವಂತನು ಪ್ರಪಂಚಕ್ಕೆ ಕೊಟ್ಟು ಮನುಷ್ಯರು ಸಂಭಾವಿತರಾಗಿ ಬದುಕಬೇಕೆಂಬ ತತ್ವವನ್ನು ಮನೋಜ್ಞವಾಗಿ ಸಾದರ ಪಡಿಸುತ್ತಾನೆ.

ಮೂಲತಃ ಮನುಷ್ಯನು ತನ್ನನ್ನು ಶರೀರವೆಂತಲೇ ಗ್ರಹಿಸುವುದರಿಂದ ಹಲವಾರು ತೊಡಕು ತೊಂದರೆಗಳು ಉಂಟಾಗುತ್ತವೆ. ಮನುಷ್ಯನ ಈ 'ಗ್ರಹಣ ಹಿಡಿದ ಬುದ್ಧಿ'ಯಿಂದ ತನ್ನದ್ದಲ್ಲದ್ದನ್ನು ತನ್ನದೆಂದು ಭಾವಿಸುವ ಜಾಯಮಾನ ಈ ಪ್ರಪಂಚದಲ್ಲಿ ಸಾಮಾನ್ಯವಾಗಿ ಹೋಗಿದೆ. ಆದುದರಿಂದ ಸಂಸಾರದ ಜಂಜಾಟದಲ್ಲಿ ಸಿಲುಕಿದವರೆಲ್ಲರು ಕಳ್ಳರಾಗಿದ್ದಾರೆ.

ಕಳ್ಳರನ್ನು ಬಂಧಿಸುವ ಪೊಲೀಸರೂ ಸಹ ಕಳ್ಳರೇ ಆಗಿರುವುದರಿಂದ ವಿಶ್ವದಲ್ಲಿ ಯಾರಿಗೂ ನೆಮ್ಮದಿ ಅಥವಾ ಶಾಂತಿ ದುರ್ಲಭವಾಗಿದೆ.

**ಬಂಕಿಕೊಡ್ಲ - 581 319, ಉತ್ತರಕನ್ನಡ**



ನಿತ್ಯ ಬೆಳಗಾದರೆ ಮನುಷ್ಯನು ಪ್ರಕೃತಿ - ಪುರುಷರ ಸಹಭಾಗಿತ್ವದಲ್ಲಿ ಹೊರ ಹೊಮ್ಮುವ ಶಕ್ತಿಯ ವಿವಿಧ ಮೂಲಗಳನ್ನು ಬಳಸಿಕೊಂಡೇ ಬದುಕಬೇಕಾಗುತ್ತದೆ.

ಹವೆ, ನೀರು, ಬೆಳಕು, ಭೂಮಿ ಮುಂತಾದವುಗಳಿಲ್ಲದ ಸ್ಥಿತಿಯಲ್ಲಿ ಮನುಷ್ಯನ ಜೀವನ ಕ್ಷಣ ಮಾತ್ರವಾದರೂ ಸಾಗಲು ಸಾಧ್ಯವಿದೆಯೇ?

ಶಾಂತಿ ಮಂತ್ರವೊಂದರಲ್ಲಿ -

**ನಮಸ್ತೇ ವಾಯೋ ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸ್ಮಿ...** ಎಂದು ಉಸಿರಾಡಿಸುವ ಹವೆಯ ಆವಿರ್ಭಾವದ ಮೂಲವನ್ನು ನೆನಪಿಸಿಕೊಳ್ಳುತ್ತಾರೆ.

ಉಚ್ಛ್ವಾಸ ಮತ್ತು ನಿಶ್ವಾಸಗಳು ಕ್ರಮಬದ್ಧವಾಗಿ ಸಜೀವಿಯ ಹುಟ್ಟಿನಿಂದ ಸಾವಿನ ಪರ್ಯಂತ, ನಿರಂತರವಾಗಿ ನಡೆಯುವುದನ್ನು ನಾವು ಕಣ್ಣಾರೆ ನೋಡುತ್ತೇವೆ. ಅದನ್ನು 'ಸೋಽಹಂ' ಎಂದು ನಮ್ಮ ಉಪನಿಷತ್ ಕಾಲದ ಋಷಿ ಮುನಿಗಳು ಜಗತ್ತಿಗೆ ತಿಳಿಸಿದ್ದರು.

ಉಸಿರಾಟದಲ್ಲಿಯೂ ಕೃತಜ್ಞತಾ ಭಾವನೆ - ನಮ್ಮ ಉಪನಿಷತ್ ಕಾಲದ ಋಷಿ ಮುನಿಗಳಲ್ಲಿ ರಕ್ತಗತವಾಗಿದ್ದುದರಿಂದಲೇ, ಅವರೆಲ್ಲರೂ 'ಅಶರೀರಿ'ಗಳಾಗಿ ಇಂದಿಗೂ ಬದುಕುತ್ತಿದ್ದಾರೆ. ಅವರು 'ಕಳ್ಳ'ರ ಗುಂಪಿಗೆ ಸೇರುವುದಿಲ್ಲ ಯಾಕೆಂದರೆ ಪ್ರತಿಕ್ಷಣದಲ್ಲಿಯೂ 'ಇದಂ ನ ಮಮ' ಅವರ ಅವಿಭಾಜ್ಯ ಅಂಗವಾಗಿತ್ತು. ಈಗ ಅದು ವಿಭಾಜ್ಯವಾಗಿ 'ಕಳ್ಳ'ರ ವಂಶ ಪರಂಪರೆಯನ್ನೇ ಸೃಷ್ಟಿಸಿದೆ.

**"ತೈರ್ದತ್ತಾನ ಪ್ರದಾಯೈಭ್ಯೋ ಯೋ ಭುಂಕ್ತೇ ಸ್ತೇನ ಏವ ಸಃ"** ಎಂತಹ ಅರ್ಥ ವ್ಯಾಪ್ತಿಯನ್ನು ಪಡೆದಿರುವ ವಿಚಾರ. ನೀರು - ಸತ್ಯ ಹಾಗೂ ಪ್ರಾಣಿಗಳಿಗೆ ತೀರ ಅಗತ್ಯ.

ನೀರಿಲ್ಲದಿದ್ದರೆ ನಾರುವ ದೇಹಕೆ ಹಿಗ್ಗುವೆ ಯಾಕೋ? ಎಂದು ಪುರಂದರ ದಾಸರು ನೀರಿನ ಬಹೂಪಯೋಗವನ್ನು ಪ್ರಪಂಚಕ್ಕೆ ತಿಳಿಸುತ್ತಾರೆ.

'ಓಂ ಅಪಃ' ಎಂದ ಶ್ರಾದ್ಧದ ಸಂದರ್ಭದಲ್ಲಿ ಆಗಾಗ ನೀರಿನ ಪಾತ್ರವನ್ನು ಸ್ಮರಿಸುತ್ತಾರೆ. ಜಲಪಾತ್ರೆ ಯಾರ ಕೈಯಲ್ಲಿರುತ್ತದೋ, ಅವರು ಅಪವಿತ್ರವಾಗಲಾರರು.

ಮನೆಗೆ ಬಂದ ಅತಿಥಿಗಳಿಗೆ ಮೊದಲು ನೀರನ್ನು ಕೊಟ್ಟು ಕೈಕಾಲು ಮುಖಗಳನ್ನು ತೊಳೆದುಕೊಳ್ಳಲು ಹೇಳುವುದು ಸಾಂಪ್ರದಾಯಿಕ ವಿಧಾನ.

ಶವದಹನಕ್ಕಿಂತ ಮೊದಲು ಶವಸಂಸ್ಕಾರ ಮಾಡುವಾಗ ಮೊದಲು ಶವಸ್ನಾನ ಮಾಡಿಸಲು ನೀರನ್ನೇ ಬಳಸುತ್ತಾರೆ.

ಸಸ್ಯಗಳು ದ್ಯುತಿ ಸಂಶ್ಲೇಷಣ ಕ್ರಿಯೆಯಿಂದ ಆಹಾರವನ್ನು ತಯಾರಿಸಿ ಪ್ರಾಣಿಲೋಕಕ್ಕೆ ನೀಡಲು 'ನೀರು' ತೀರ ಅಗತ್ಯ. ರಸಾಯನ ವಿಜ್ಞಾನದಲ್ಲಿ ನೀರನ್ನು 'ಸಾರ್ವತ್ರಿಕ ದ್ರಾವಕ' (Universal Solvent) ಎಂದು ಪರಿಗಣಿಸುತ್ತಾರೆ. ಯಾಕೆಂದರೆ ರಾಸಾಯನಿಕ ಕ್ರಿಯೆಗಳಿಗೆಲ್ಲ ನೀರು ಅವಶ್ಯ. ಅಲ್ಲದೆ ನೀರಿನಲ್ಲಿ ಅನೇಕ ವಸ್ತುಗಳು ಕರಗುತ್ತವೆ.

ಈ ನೀರಿನ ಪೂರ್ವಾಪರವನ್ನು ಪರಿಶೀಲಿಸಿದರೆ ಅದು ಎರಡು ಅನಿಲ ರೂಪದ ಮೂಲವಸ್ತುಗಳ ಸಂಯೋಜನೆಯಿಂದ ದ್ರವರೂಪ ಹೊಂದಿದ 'ಸಂಯುಕ್ತ'ವೆಂದು ವಿಜ್ಞಾನವು ವಿವರಿಸುತ್ತದೆ. ಜಲಜನಕದ (Hydrogen) ಎರಡು ಪರಮಾಣುಗಳು ಹಾಗೂ

ಆಮ್ಲಜನಕದ (Oxygen) ಒಂದು ಪರಮಾಣು ಸೇರಿ ನೀರಿನ ಒಂದು ಅಣು ತಯಾರಾಗುತ್ತದೆ. ಪರಮಾಣುಗಳ ಮಟ್ಟದಲ್ಲಿ, ಎಲೆಕ್ಟ್ರಾನ್‌ಗಳ ಸ್ಥಾನಾಂತರದಿಂದ ನಡೆಯುವ ಆ ರಾಸಾಯನಿಕ ಕ್ರಿಯೆಯಲ್ಲಿ ಪ್ರಾಕೃತಿಕವಾಗಿ ಶಕ್ತಿಯ ವಿನಿಮಯವಾಗುತ್ತದೆ. ಆದರಿಂದ ನೀರು ಉತ್ಪತ್ತಿಯಾಗುತ್ತದೆ. ನಿಷ್ಕಾಮ ಪ್ರೇಮದಿಂದ ನಡೆಯುವ ಆ ಶಕ್ತಿ ಬದಲಾವಣೆಯ 'ಕರ್ಮ ಸಿದ್ಧಾಂತ'ವನ್ನು ಗುರುತಿಸುವವರು ಮನುಷ್ಯರಲ್ಲಿ ತೀರ ವಿರಳ. ನೀರನ್ನು ನಿರಂತರವಾಗಿ ಉಪಯೋಗಿಸಿದರೂ, ನೀರಿನ ಉತ್ಪತ್ತಿಗೆ ಕಾರಣವಾದ ಕರ್ತೃವನ್ನು ಸಂಪೂರ್ಣವಾಗಿ ಮರೆಯುವುದು ಮನುಷ್ಯನ ಸಾಮಾನ್ಯ ವರ್ತನೆಯಾಗಿ ಹೋಗಿದೆ.

"ನಮ್ಮ ಬಾವಿಯ ನೀರು ಚೆನ್ನಾಗಿದೆ; ನಮ್ಮಲ್ಲಿ ನೀರಿಗೇನೂ ಕೊರತೆಯಿಲ್ಲ; ನಮ್ಮ ಬಾವಿಯ ನೀರಿನಲ್ಲಿ ನಮ್ಮ ನೆರೆಯವರಿಗೆ ಹಕ್ಕಿಲ್ಲ" ಮುಂತಾದ ಮಾತುಕತೆಗಳು ನಮ್ಮಲ್ಲಿ ಪ್ರತಿ ನಿತ್ಯ ಕೇಳಿ ಬರುತ್ತವೆ.

ಆದರೆ ನೀರಿನ ಉತ್ಪತ್ತಿಗೆ ಕಾರಣವಾದ 'ಯಜ್ಞ ಪುರುಷ'ನನ್ನು ಯಾರೂ ಅಪ್ಪಿತಪ್ಪಿಯೂ ಸ್ಮರಿಸುವುದಿಲ್ಲ. ಆದುದರಿಂದ **ತೈರ್ದತ್ತಾನ ಪ್ರದಾಯೈಭ್ಯೋ ಯೋ ಭುಂಕ್ತೇ ಸ್ತೇನ ಏವ ಸಃ** ಅಂದರೆ ಕಳ್ಳರಿಂದ ಪಡೆದ ನೀರನ್ನು ಕಳ್ಳರೇ ಬಳಸುವುದು ಈ ಪ್ರಪಂಚದ ನಿತ್ಯ ದೃಶ್ಯ.

'ಸೂರ್ಯೋಪನಿಷತ್'ನಲ್ಲಿ ಸೂರ್ಯನ ವೈವಿಧ್ಯಮಯವಾದ ಉಪಯುಕ್ತತೆಯನ್ನು ವಿವರಿಸಲಾಗಿದೆ. ಪ್ರಪಂಚದ ಮೇಲೆ, ಕೆಳಗೆ, ಒಳಗೆ, ಹೊರಗೆ ಮತ್ತು ಎಲ್ಲಾ ಬದಿಗಳಲ್ಲಿಯೂ, ಸೂರ್ಯನ ಪಾತ್ರವೇ ಮುಖ್ಯವಾಗಿದೆ. ಸಸ್ಯ ಲೋಕಕ್ಕೆ ಅವಶ್ಯವಿರುವ ಶಕ್ತಿಯನ್ನು ಶಾಖದ ರೂಪದಲ್ಲಿ ನಿರಂತರವಾಗಿ ಪೃಥ್ವಿಗೆ ರವಾನಿಸುವ ಪ್ರಕ್ರಿಯೆ ಸೂರ್ಯನಿಂದ ನಡೆಯುತ್ತಲೇ ಇರುತ್ತದೆ. ಮನುಷ್ಯ ಮತ್ತು ಇತರ ಪ್ರಾಣಿಗಳಿಗೆ ವಸ್ತು ಹಾಗೂ ದಾರಿಯನ್ನು ಸರಿಯಾಗಿ ವೀಕ್ಷಿಸಲು ಅವಶ್ಯವಿರುವ ಬೆಳಕೂ ಸಹ ಸೂರ್ಯನಿಂದಲೇ ದೊರೆಯುತ್ತದೆ.

**"ರಸೋಹ ಮಪ್ಸು ಕೌಂತೇಯ ಪ್ರಭಾಸ್ಮಿ ಶಶಿಸೂರ್ಯಯೋಃ"** ಎಂದು ಬೆಳಕಿನ ಮೂಲದ ಪರಿಚಯವನ್ನು ಭಗವಂತನು ವಿಶ್ವಕ್ಕೆ ವಿಶದೀಕರಿಸುತ್ತಾನೆ. ಬೆಳಕಿನ ಉಪಯೋಗ ತೆಗೆದುಕೊಳ್ಳಲು ನಾವೆಲ್ಲರೂ ನಿಸ್ಸೀಮರೇ ವಿನಾ, ಬೆಳಕಿನ ಉತ್ಪತ್ತಿಗೆ ಕಾರಣವಾದ ಶಕ್ತಿಯ ಮೂಲಕ್ಕೆ ನಾವು ಕೃತಜ್ಞರಾಗುವುದಿಲ್ಲ. ಆದುದರಿಂದಲೇ **"ತೈರ್ದತ್ತಾನ ಪ್ರದಾಯೈಭ್ಯೋ ಯೋ ಭುಂಕ್ತೇ ಸ್ತೇನ ಏವ ಸಃ"**

ಭೂಮಿಯಿಂದ ಹಲವು ವಿಧದ ಬೆಳೆಗಳನ್ನು ಬೆಳೆದುಕೊಂಡರೂ ಸಹ, ಭೂಮಾತೆಗೆ ಕೃತಜ್ಞರಾಗಿರುವವರು ನಮ್ಮಲ್ಲಿ ಬಹುಶಃ ಯಾರೂ ಇಲ್ಲ. ಗೇರು, ಹಲಸು, ಮಾವು, ಪೇರು, ದಾಳಿಂಬೆ ಭೂಮಿಯಿಂದ ತಾಯಿಸಸ್ಯದ ಮೂಲಕ ಮನುಷ್ಯಲೋಕಕ್ಕೆ ದೊರೆತಾಗ ಅವುಗಳ ಮೇಲೆ ಮನುಷ್ಯನ 'ಹಕ್ಕು' ಸ್ಥಾಪನೆ ಯಾಗುತ್ತದೆ. "ತನ್ನದು ತಾನು ಮಾಡಿದ್ದು" ಮುಂತಾದ ಕೃತಘ್ನತಾ ಭಾವವನ್ನು ವ್ಯಕ್ತ ಪಡಿಸುವ ವಿಚಾರ ಸಾಹಿತ್ಯ ನಿರ್ಮಾಣವಾಗುತ್ತದೆ.

ಭೂಮಿಯಲ್ಲಿ ಬೆಳೆಯುವ ಸಸ್ಯಗಳಿಗೆ ಪೂರಕವಾಗುವ ಅನೇಕ ಪ್ರಕ್ರಿಯೆಗಳಿಗೆ ಪ್ರಕೃತಿ ಸಹಭಾಗಿತ್ವವನ್ನು ಹೊಂದಿ, ಆಯಾ ಸಸ್ಯಗಳಿಂದ ಮನುಷ್ಯನಿಗೆ ಉಪಯುಕ್ತವಾಗುವ ಫಲಗಳು ದೊರೆಯುತ್ತವೆ. ನೀರು - ಗೊಬ್ಬರಗಳನ್ನು ಪೂರೈಸಿದ ಮಾತ್ರದಿಂದಲೇ ಮನುಷ್ಯನು ಮೂಲ



ಕರ್ತೃವನ್ನು ಮರೆಯುವುದು ಎಂತಹ ಹಾಸ್ಯಾಸ್ಪದವಾದ ಸಂಗತಿ. ನೀರೇ ಇಲ್ಲದಿದ್ದರೆ ಸೂಕ್ಷ್ಮಾಣುಗಳು ಗೊಬ್ಬರವನ್ನೇ ತಯಾರಿಸದಿದ್ದರೆ, ಮನುಷ್ಯ ಮಾಡುವುದೇನಿತ್ತು? ಇಂತಹ ರಚನಾತ್ಮಕ ವಿಚಾರಗಳನ್ನು ಬಿಟ್ಟು ಕೃತಘ್ನತೆಯ ದಿಶೆಯಲ್ಲಿ ಸಾಗುವ ಮನುಷ್ಯರು ನಿಜವಾಗಿಯೂ 'ಸ್ತೇನ'ರೇ.

ಅವ್ಯಕ್ತದಲ್ಲಿ ನಡೆಯುವ ಪ್ರತಿಯೊಂದು ಕ್ರಿಯೆಯಲ್ಲೂ, ವ್ಯಕ್ತಲೋಕದ ಅಭಿವೃದ್ಧಿಯೇ ಮೂಲ ಉದ್ದೇಶವಿದೆ. ಅಂತಹ ಅವ್ಯಕ್ತವನ್ನು ಸ್ಮರಿಸಬೇಕು. ಕೃತಜ್ಞತೆಯಿಂದ ಮನಸ್ಸಿನಲ್ಲಿ ಸದಾ ಪೂಜಿಸಬೇಕು. ಇದರಿಂದ ಭಗವದನುಗ್ರಹ ವೃದ್ಧಿಯಾಗುತ್ತದಲ್ಲದೆ, ಅದರಿಂದ ನಮ್ಮ ಮಾನಸಿಕ ಆರೋಗ್ಯವೂ ಪ್ರಗತಿಹೊಂದುತ್ತದೆ.

"ಎಲ್ಲವೂ ವ್ಯಕ್ತದಲ್ಲಿಯೇ ನಡೆಯಬಹುದಿತ್ತಲ್ಲ" ಎಂದು ಕೆಲವರು ಆಕ್ಷೇಪಣೆ ಮಾಡುತ್ತಾರೆ. ಆದರೆ 'ದೃಶ್ಯ' ಪ್ರಪಂಚ ಪ್ರಾರಂಭವಾದದ್ದೇ ಅವ್ಯಕ್ತದಿಂದ ಎಂದು ಭಗವಾನ್ ಶ್ರೀಕೃಷ್ಣ ಹೇಳುತ್ತಾನೆ.

**ಅವ್ಯಕ್ತಾದೀನಿ ಭೂತಾನಿ, ವ್ಯಕ್ತ ಮಧ್ಯಾನಿ ಭಾರತ।**
**ಅವ್ಯಕ್ತನಿಧನಾನ್ಯೇವ ತತ್ರಕಾ ಪರಿದೇವನಾ ॥**

ಅವ್ಯಕ್ತ ಪ್ರಪಂಚದಲ್ಲಿ ಸೃಷ್ಟಿ ನಿರ್ಮಾಣಕ್ಕೆ ಅಗತ್ಯವಿರುವ ಎಲ್ಲಾ ಅಂಶಗಳು ಲಭ್ಯವಾಗಿರುವುದರಿಂದ ಅವ್ಯಕ್ತ ಲೋಕವು ಮೂಲಾಧಾರವಾಗಿದೆ. 'ಅವ್ಯಕ್ತ'ವನ್ನು ಅನಂತವೆಂತಲೂ ಸಂಬೋಧಿಸುತ್ತಾರೆ. ಅಂದರೆ ಅದಕ್ಕೆ 'ಕೊನೆ'ಯೇ ಇಲ್ಲ. ಆದಿಯಿಲ್ಲದ ಅಂತ್ಯವೂ ಇಲ್ಲದ ಸ್ಥಿತಿಯೊಂದನ್ನು ಊಹಿಸುವುದು ಮನುಷ್ಯನ ಸೀಮಿತ ಬುದ್ಧಿಗೆ ಸುಲಭವಾಗಿ ಸಾಧ್ಯವಾಗುವುದಿಲ್ಲ. ಆದರೆ ಅದು ಖಂಡಿತವಾಗಿ 'ಅನೂಹ್ಯ'ವಲ್ಲ.

ಸಂಖ್ಯಾರೇಖೆಯ ರೂಪರೇಷೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಅವ್ಯಕ್ತ - ಅನಂತ - ಅನಾದಿಗಳ ಅರ್ಥ ಸ್ಪಷ್ಟವಾಗಿ ಗೋಚರಿಸುತ್ತದೆ.

ಶೂನ್ಯದಿಂದ ಬಲಬದಿಗೆ ಬಂದಂತೆ ಧನಾತ್ಮಕ (+) ಸಂಖ್ಯೆಗಳೂ ಎಡಬದಿಗೆ ಹೋದಂತೆ ಋಣಾತ್ಮಕ (-) ಸಂಖ್ಯೆಗಳೂ ಉಂಟಾಗುವುದನ್ನು ನಾವು ಗಣಿತ ಶಾಸ್ತ್ರದಲ್ಲಿ ಅಧ್ಯಯನ ಮಾಡುತ್ತೇವೆ. 'ಶೂನ್ಯ'ದ ಎಡಭಾಗವು ಋಣಾತ್ಮಕವಾಗಿ ಎಲ್ಲಿಂದ ಪ್ರಾರಂಭವಾಗುತ್ತದೆಯೆಂದು ಯಾವುದರಿಂದಲೂ ಹೇಳಲು ಸಾಧ್ಯವಿಲ್ಲ. ಆದುದರಿಂದಲೇ ಅದು 'ಅನಾದಿ'.

ಶೂನ್ಯದ ಬಲಭಾಗವು ಧನಾತ್ಮಕ (+)ವಾಗಿ ಪ್ರಾರಂಭವಾಗಿ ಯಾವ ಬಿಂದುವಿನಲ್ಲಿ ಕೊನೆಗೊಳ್ಳುತ್ತದೆ ಎಂದು ನಿರ್ಣಯಿಸಲು ಯಾರಿಂದಲೂ ಸಾಧ್ಯವಿಲ್ಲ. ಆದುದರಿಂದಲೇ ಅದು 'ಅನಂತ'.

ಹೀಗೆ 'ಅನಾದಿ' ಅನಂತಗಳ ಮಧ್ಯಂತರದಲ್ಲಿ ದೃಶ್ಯ ಪ್ರಪಂಚದ ನಾಟಕವೆಲ್ಲವೂ ನಡೆದು ಹೋಗುತ್ತದೆ. ಆದುದರಿಂದಲೇ ಮನುಷ್ಯನು ತನ್ನ ಪೂರ್ವಜರನ್ನು ಮರೆಯಕೂಡದು ಎಂದು ವೇದೋಪನಿಷತ್ತುಗಳು ಸಾರಿ ಹೇಳುತ್ತವೆ. ವರ್ಷದಲ್ಲಿ ಒಂದು ದಿನವಾದರೂ ನಮ್ಮ ಬದುಕಿಗೆ ಕಾರಣರಾದ ನಮ್ಮ ಪೂರ್ವಜರನ್ನು ನಾವು ಶ್ರದ್ಧೆಯಿಂದ

ಸ್ಮರಿಸಬೇಕು.

ಸ್ತೇನರಾಗದೆ ಬದುಕಲು ಎಲ್ಲರಿಂದಲೂ ಸಾಧ್ಯವಿಲ್ಲದಿದ್ದರೂ, ಸ್ವಲ್ಪವಾದರೂ ಅದರಿಂದ ದೂರವುಳಿಯಲು ಸಾಧ್ಯವಿರುವಾಗ ಅದನ್ನು ನಾವು ಯಾಕೆ ಮಾಡಬಾರದು? ಭಗವಂತನ ಇನ್ನೊಂದು ಅಮೃತವಾಣಿ ನೆನಪಾಗುತ್ತದೆ.

**ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್... ॥**

ಸ್ತೇನರು ತಮ್ಮ ಪಾಲಿನ ಧರ್ಮವನ್ನು ಸ್ವಲ್ಪವಾದರೂ ಕಾಲಾವಕಾಶ ದೊರೆತಾಗಲೆಲ್ಲಾ ನೆರವೇರಿಸಿದರೆ; ಖಂಡಿತವಾಗಿ ಅಂತವರನ್ನು ಧರ್ಮವು ರಕ್ಷಿಸುತ್ತದೆ. ಭವ ಸಾಗರದ ಪಯಣದಲ್ಲಿ ನಮ್ಮ ಊಹೆಗೆ ಮೀರಿದ ಭಯಾನಕ ಘಟನೆಗಳ ವಿಪರೀತ ಪರಿಣಾಮವನ್ನು ಕಡಿಮೆ ಮಾಡಿಕೊಳ್ಳಲು ನಮ್ಮ ಪಾಲಿನ ಧರ್ಮದಾಚರಣೆಯೊಂದೇ ನಮಗೆ ರಕ್ಷಕ ಕವಚವಾಗುತ್ತದೆ.

ಸಮರ್ಪಣಾ ಭಾವದಿಂದ ಮನುಷ್ಯನ ಅಸ್ತಿತ್ವ ಭದ್ರವಾದ ತಳಹದಿಯ ಮೇಲೆ ನೆಲೆಗೊಳ್ಳುತ್ತದೆ. ಮನಸ್ಸಿನಲ್ಲಿ ತುಟಿಯನ್ನು ಬಿಚ್ಚದೇ ಸದಾ ನಡೆಯುತ್ತಿರುವ ಭಗವದ್ ಸ್ಮರಣೆ ಮನುಷ್ಯನನ್ನು ಉದ್ದೀಪನಗೊಳಿಸಿ, ತಾನು ಶರೀರವಲ್ಲ ಆತ್ಮ - ಅಹಮಾತ್ಮಾನ ಶರೀರಮ್‌ವೆಂಬ ಭಾವದಲ್ಲಿ ಚಿರಸ್ಥಾಯಿಗೊಳಿಸುತ್ತದೆ. ಇದು ಉಸಿರಾಟದೊಂದಿಗೆ ತಾದಾತ್ಮ್ಯ ಹೊಂದಬೇಕು ಅದು ಅಸ್ತಿತ್ವದ ಅವಿಭಾಜ್ಯ ಅಂಗವಾಗಬೇಕು;

ಉಸಿರಾಡಿಸುವ ಹವೆ, ಕುಡಿಯುವ ನೀರು, ವಸ್ತುಗಳನ್ನು ನೋಡುವ ಬೆಳಕು.... ಮುಂತಾದ ಭೌತ ಪ್ರಪಂಚದ ಶಕ್ತಿ ಮೂಲಗಳೆಲ್ಲವು ಪ್ರಕೃತಿ ಪುರುಷರ ಯಜ್ಞದ ಆವಿರ್ಭಾವಗಳು ಉಚಿತವಾಗಿ ದೊರೆಯುವ ಶಕ್ತಿಗಳು ಅಮೂಲ್ಯವಾದವುಗಳು.

ಅವುಗಳನ್ನು ನಿತ್ಯ ಬಳಸುವ ಮನುಷ್ಯರು ಪ್ರಕೃತಿಯ ಋಣದಲ್ಲೇ ಬದುಕುವವರು. ಯಾವುದನ್ನು ಪಡೆದುಕೊಂಡ ನಂತರ ಪುನಃ ತಿರುಗಿ ಕೊಡಲು ಸಾಧ್ಯವಿಲ್ಲವೋ ಅದನ್ನೇ ನಾವು 'ಋಣ' ಎಂದು ಕರೆಯುತ್ತೇವೆ. ಅದರ ಪ್ರಜ್ಞೆಯನ್ನು 'ಋಣಪ್ರಜ್ಞೆ' ಎನ್ನುತ್ತಾರೆ.

ಸದಾ ಋಣಪ್ರಜ್ಞೆಯಲ್ಲಿರುವವರು ಆ ಋಣದ ಭಾಗಶಃ ಸಮರ್ಪಣೆ ಮಾಡಿದಂತೆ ಆಗುತ್ತದೆ. ಆ ಪ್ರಜ್ಞೆಯೇ ಇಲ್ಲದವರು ಖಂಡಿತವಾಗಿ ಸ್ತೇನರೇ. ಅದನ್ನು ಭಗವಂತ ಪ್ರಪಂಚದ ಪ್ರತಿಯೊಂದು ಜೀವಿಗೂ, **ತೈರ್ದತ್ತಾನ ಪ್ರಾದಾಯ್ಯೆ ಭ್ಯೋ ಯೋ ಭುಂಕ್ತೇ ಸ್ತೇನ ಏವ ಸಃ** ಎಂದು ಎಚ್ಚರಿಸುತ್ತಿದ್ದಾನೆ.


*With Best Compliments from :*

*Ph.: 2365931, 2216327 (O)*
*2216326, 2247066 (R)*

**SHARMA ENTERPRISES**

*Distributors of Karthikeya Papers & Boards Ltd.*

**Kubsad Galli, HUBLI -580 028**

*Dealers in Papers & Boards, Wedding Cards,*
*Mfg. of Students Note Books & Envelopes*




# ಸಾಂಸ್ಕೃತಿಕ ರಸಪ್ರಶ್ನೆಗಳು


ಡಾ। ಎಚ್. ವಿ. ನರಸಿಂಹ ಮೂರ್ತಿ, ಕುಂದಾಪುರ


1. ವಾಲ್ಮೀಕಿ ಮಹರ್ಷಿಯ ಮೂಲ ಹೆಸರು ಯಾವುದು?
2. ಕುಂತಿಗೆ ಮಕ್ಕಳನ್ನು ಪಡೆಯುವ ವರ ನೀಡಿದವರು ಯಾರು?
3. ಋಷ್ಯಶೃಂಗನನ್ನು ಮದುವೆಯಾದ ದಶರಥನ ಮಗಳ ಹೆಸರೇನು?
4. ಬಲರಾಮನು ಯಾರ ಅವತಾರ?
5. ದ್ರೌಪದಿಗೆ ಅಕ್ಷಯ ಪಾತ್ರೆಯನ್ನಿತ್ತವರು ಯಾರು?
6. ಲಕ್ಷ್ಮಣನಲ್ಲಿದ್ದ ವಿಷ್ಣುವಿನ ದೈವಾಂಶದ ಭಾಗವೆಷ್ಟು?
7. ಪಿತಾಮಹ ಭೀಷ್ಮನ ಮೊದಲ ಹೆಸರೇನು?
8. ಅಹಲ್ಯೆಯು ಯಾರ ಪತ್ನಿ?
9. ವ್ಯಾಸರ ತಾಯಿಯ ಹೆಸರೇನು?
10. ಶ್ರೀರಾಮನು ಕೊಂದ ನೀಳ ಬಾಹುಗಳ ರಾಕ್ಷಸ ಯಾರು?
11. ಶ್ರೀ ಮಧ್ವಾಚಾರ್ಯರಿಗೆ ಸನ್ಯಾಸದೀಕ್ಷೆ ನೀಡಿದವರು ಯಾರು ?
12. ಶ್ರೀ ರಾಮಾಯಣಮಹಾನ್ವೇಷಣಂ ಕೃತಿಯನ್ನು ರಚಿಸಿದ ರಾಜಕಾರಣಿ ಯಾರು?
13. ಸಂವತ್ಸರಗಳು ಎಷ್ಟು?
14. ನಿರಂಜನ ಕಾವ್ಯನಾಮದಿಂದ ಪ್ರಸಿದ್ಧರಾದವರು ಯಾರು?
15. ಅಕ್ಬರ್ ಚಕ್ರವರ್ತಿಯ ಹಿಂದೂ ಪತ್ನಿ ಯಾರು?
16. ದಿಲ್ಲಿಯ ರಾಷ್ಟ್ರೀಯ ನಾಟಕಶಾಲೆಯ ನಿರ್ದೇಶಕರಾಗಿದ್ದ ಏಕಮೇವ ಕನ್ನಡಿಗ ಯಾರು?
17. ಮಹಾಭಾರತದಲ್ಲಿ ಎಷ್ಟು ಪರ್ವಗಳಿವೆ?
18. ಕರ್ನಾಟಕ ರತ್ನ ಪ್ರಶಸ್ತಿ ಪಡೆದ ಮೊದಲ ಕನ್ನಡ ಕವಿ ಯಾರು?
19. ಅಭಿಮನ್ಯು ಭೇದಿಸಿದ ಸೈನ್ಯಮುಖದ ಹೆಸರೇನು?
20. ಸುವರ್ಣ ನಾಣ್ಯವನ್ನು ಮೊದಲಬಾರಿಗೆ ಚಲಾವಣೆಗೆ ತಂದ ಭಾರತದ ರಾಜವಂಶಜರು ಯಾರು?


*With Best Compliments from :*



**LAXMIDAS JEWELLERS**

"Megha Building" Balmatta Road,
Mangalore - 575 001.

**Phone : 2426060, 2421760**



# ಭಗವಾನ್ ವೇದವ್ಯಾಸರು ನಿರ್ದೇಶಿಸಿದ ಗಾಯತ್ರಿ ಜಪ

ಕೋಟೇಶ್ವರ ಸೂರ್ಯನಾರಾಯಣ ರಾವ್

**ಚಾ**ತುರ್ವರ್ಣದಲ್ಲಿ ಬ್ರಾಹ್ಮಣನು ದ್ವಿಜನೆಂದೂ, ಇತರ ವರ್ಣೀಯರಿಗೆ ಮಾರ್ಗದರ್ಶಕನೆಂದೂ ಪ್ರತಿಭಾವಂತನೆಂದೂ ಗುರುತಿಸುವುದು ವಾಡಿಕೆ. ಕೇವಲ ಬ್ರಾಹ್ಮಣ ಕುಲದಲ್ಲಿ ಹುಟ್ಟಿದಾಗ ತಾನು ಉತ್ತಮನಾಗುವುದು ಸಾಧ್ಯವಿಲ್ಲ. ತನ್ನ ಜೀವನದಲ್ಲಿ ಬ್ರಾಹ್ಮಣ್ಯವನ್ನು ಅಳವಡಿಸಿಕೊಂಡು ನಿತ್ಯಾಹ್ನಿಕ, ಕರ್ಮಗಳನ್ನು ನಿರ್ದಿಷ್ಟವಾಗಿ ಮಾಡುತ್ತಾ ತನ್ನಲ್ಲಿ ದ್ವಿಜತ್ವವನ್ನು ಬೆಳೆಸಿಕೊಳ್ಳಬೇಕೆನ್ನುವುದನ್ನು ಭಗವಾನ್ ವೇದವ್ಯಾಸರು ಸ್ಪಷ್ಟ ನಿರ್ದೇಶನದೊಂದಿಗೆ ಜನತೆಗೆ ನೀಡಿದ್ದಾರೆ. ಬ್ರಾಹ್ಮಣನಾದವನು ತ್ರಿಕರಣಶುದ್ಧಿಪೂರ್ವಕ ಆರಾಧಿಸಬೇಕಾದ ದೇವತೆ ಗಾಯತ್ರಿ ಮಾತಾ.

ಓರ್ವ ಉಪನೀತ ಬ್ರಾಹ್ಮಣ ಪುತ್ರನು ನಿತ್ಯಾಹ್ನಿಕವನ್ನು ನಿರಂತರವಾಗಿ ಮಾಡುತ್ತಾ ಗಾಯತ್ರಿ ಜಪವನ್ನು ಪ್ರತಿದಿನವೂ ಮೂರು ಬಾರಿ ಮಾಡಬೇಕೆನ್ನುವುದನ್ನು ನಿರ್ದೇಶಿಸಿದ್ದಾರೆ. ಅವರ ನಿರ್ದೇಶನದಂತೆ ಪ್ರಾತಃಕಾಲ - ಅಷ್ಟೋತ್ತರ ಶತಸಂಖ್ಯಾಕಂ (108 ಬಾರಿ) ಪೂರ್ವಾಭಿಮುಖವಾಗಿ ಗಾಯತ್ರಿ ಜಪ ಮಾಡಬೇಕು. ಮಧ್ಯಾಹ್ನ ಅಷ್ಟ ವಿಂಶತಿ ಸಂಖ್ಯಾಕಂ (28 ಬಾರಿ) ಹಾಗೂ ಸಂಜೆ ವಾಯವ್ಯಾಭಿಮುಖವಾಗಿ ಕಡಿಮೆಯೆಂದರೆ ಹತ್ತು ಬಾರಿಯಿಂದ 28ಬಾರಿ ಮಾಡಬೇಕೆನ್ನುವುದನ್ನು ನಿರ್ದೇಶಿಸಿದ್ದಾರೆ.

**ಪ್ರಾತರ್ನಾಭೌ ಕರೌ ಕೃತ್ವಾ ಮಧ್ಯಾಹ್ನೇ ಹೃದಿ ಸಂಸ್ಥಿತೌ ।**

**ಸಾಯಂ ಜಪತಿ ನಾಸಾಗ್ರೆ ಜಪಸ್ತು ತ್ರಿವಿಧಃ ಸ್ಮೃತಃ ॥**

ಪ್ರಾತಕಾಲ ನಾಭಿಯ ಮೇಲೆ ಎರಡು ಕೈಗಳನ್ನು ಹಿಡಿದು ಮಧ್ಯಾಹ್ನ ಎದೆಯ ಎದುರು ಕೈಗಳನ್ನು ಇರಿಸಿ ಹಾಗೂ ಸಂಜೆ ಮೂಗಿನ ತುದಿಗೆ ಸರಿಯಾಗಿ ಎತ್ತರಿಸಿ ಹಿಡಿದು ಜಪಿಸುವುದು ಜಪದ ಮೂರು ಬಗೆ ಎಂದಿದ್ದಾರೆ.

**ಪಂಚಾವಸಾನಾಂ ಗಾಯತ್ರೀಂ ಜಪೇನ್ನಿತ್ಯಮತಂದ್ರಿತಃ ।**

ಗಾಯತ್ರಿಯನ್ನು ಜಪಿಸುವಾಗ ಒಂದು ಶ್ಲೋಕವನ್ನು ಐದು ಭಾಗಗಳಾಗಿ ಮುಕ್ತಾಯ ಬರುವಂತೆ ಜಪಿಸಬೇಕು. 1) ಓಂ; 2) ಭೂರ್ಭುವಸ್ಸ್ವಃ; 3) ತತ್ಸವಿತುರ್ವರೇಣ್ಯಮ್; 4) ಭರ್ಗೋದೇವಸ್ಯಧೀಮಹಿ; 5) ಧಿಯೋ ಯೋ ನಃ ಪ್ರಚೋದಯಾತ್ ॥

ಇಲ್ಲಿ ನಿರ್ದೇಶಿಸಿದಂತೆ ನಿಲ್ಲಿಸಿ ನಿಲ್ಲಿಸಿ ಜಪಿಸಬೇಕು.

**ಪರ್ವಭಿಸ್ತು ಜಪೇದ್ದೇವೀಂ ನ ಮಾಲಾಭಿಃ ಕದಾಚನ ।**

'ಮಹಾಲಕ್ಷ್ಮೀ ಕೃಪಾ', 25/1, ಡಿ. ವಿ. ಜಿ. ಅಡ್ಡ ರಸ್ತೆ, ಬಸವನಗುಡಿ, ಬೆಂಗಳೂರು – 560 004



**ಸಂಧ್ಯಾಜಪಂ ತು ಗಾಯತ್ರ್ಯಾಃ ಕುರ್ಯಾದಂಗುಲಿಪರ್ವಭಿಃ ।**

**ಸಂಧ್ಯಾತಿರಿಕ್ತಗಾಯತ್ರೀಂ ಜಪೇದ್ವಾ ಜಪಮಾಲಯಾ ॥**

ಕೈಬೆರಳುಗಳ ಗಂಟುಗಳಿಂದ ಎಣಿಸುತ್ತ ಗಾಯತ್ರಿಯನ್ನು ಜಪಿಸಬೇಕು. ಮಾಲೆಗಳನ್ನು ಹಿಡಿದು ಮಣಿಗಳನ್ನು ಎಣಿಸುತ್ತಾ ಜಪಮಾಡಬಾರದು. ಸಂಧ್ಯಾಂಗವಾಗಿ ಮಾಡುವ ಗಾಯತ್ರೀ ಜಪವನ್ನು ಬೆರಳುಗಳ ಗಂಟುಗಳ ಲೆಕ್ಕದಲ್ಲಿಯೇ ಮಾಡಬೇಕು. ಪುನಶ್ಚರಣೆ ರೂಪವಾಗಿ ಮಾಡುವಾಗ ಜಪಮಾಲೆಯನ್ನು ಲೆಕ್ಕಕ್ಕಾಗಿ ಉಪಯೋಗಿಸಬಹುದು.

**ಆರಭ್ಯಾನಾಮಿಕಾಯಾಸ್ತು ಮಧ್ಯಮೇ ಪರ್ವಣೀ ಕ್ರಮಾತ್ ।**

**ತರ್ಜನೀಮೂಲ ಪರ್ಯಂತಂ ಜಪೇತ್‌ದಶಸು ಪರ್ವಸು ॥**

ಉಂಗುರ ಬೆರಳಿನ ನಡುಗಂಟಿನಿಂದ ಆರಂಭಿಸಿ ತೋರುಬೆರಳಿನ ಬುಡದವರೆಗಿನ ಹತ್ತು ಬೆರಳ ಗಂಟುಗಳಲ್ಲಿ ಜಪವನ್ನೆಣಿಸಬೇಕು. ನಡುಬೆರಳ ಎರಡು ಗಂಟುಗಳನ್ನು 'ಮೇರು' ಎಂದು ತಿಳಿಯಬೇಕು. ಜಪದ ಎಣಿಕೆ ಅಡ್ಡದಾಟಬಾರದು.

**ನೆನಪಿಡಿ**

**ಭೋಜನಾಂತೇ ಶತಪದಂ ಗತ್ವಾ ತಾಂಬೂಲ ಭಕ್ಷಣಮ್ ।**

**ಶಯನಂ ವಾಮಕುಕ್ಷೌ ತು ಭೈಷಜ್ಯಾತ್ ಕಿಂ ಪ್ರಯೋಜನಮ್ ॥**

ಉಂಡು ನೂರು ಹೆಜ್ಜೆ ನಡೆ, ತಾಂಬೂಲ ಸವಿ, ಎಡಮಗ್ಗುಲಾಗಿ ಮಲಗುವುದು ಮಾಡಿದರೆ ಔಷಧದ ಉಪಯೋಗವೇ ಬರುವುದಿಲ್ಲ.

**ನ ವಿಶಾಲಾಂ ನ ವಾ ಭಗ್ನಾಂ ನಾಸಮಾಂ ಮಲಿನಾಂ ನ ಚ।**

**ನ ಚ ಜಂತು ಮಯೀಂ ಶಯ್ಯಾಮಧಿತಿಷ್ಠೇದನಾಸ್ತೃತಾಮ್ ।**

ಒದ್ದೆ ಬಟ್ಟೆಯಲ್ಲಿ, ಬೆತ್ತಲಾಗಿ, ಉತ್ತರಕ್ಕೆ ತಲೆಹಾಕಿ ಬರಿದಾದ ಆಕಾಶದಡಿ ಅಶ್ವತ್ಥಮರದ ಬಳಿ, ಹರಿದು ಚಿಂದಿಯಾದ, ಎತ್ತರಕ್ಕೆ ತಗ್ಗಿರುವ, ಮಲಿನವಾದ ಹುಳು ಹುಪ್ಪಟೆ ಇರುವ ಹಾಸಿಗೆಯಲ್ಲಿ ಎಂದೂ ಮಲಗಬಾರದು.

**ವಂದಿತಃ ಪೂಜಿತೋ ವಿಪ್ರಃ ದುಗ್ಧಾ ಗೌರಿವ ಸೀದತಿ ।**

**ಪುನರಾಪ್ಯಾಯತೇ ಧೇನುಃ ಸತೃಣೈಃ ಸಜಲೈರ್ಯಥಾ।**

*With Best Compliments from :*



*"Bedsheet People"*

"In Textile Field Since 1910"

**RAJASHREE TEXTILE TRADERS**

Vasudev Enclave, Maidan 4th Cross Road, Mangalore - 575 001.

Phone : 2426624, 2421216, 5266624.

**ಏವಂ ಜಪೈಶ್ಚ ಹೋಮೈಶ್ಚ ಪುನರಾಪ್ಯಾಯತೇ ದ್ವಿಜಃ ॥**

ಬೇರೆಯವರಿಂದ ವಂದಿಸಲ್ಪಡುವ ವಿಪ್ರನು ಹಾಲುಕರೆದ ಗೋವಿನಂತೆ ಸತ್ವಹೀನನಾಗುತ್ತಾನೆ. ನಮಸ್ಕರಿಸಿಕೊಂಡಾತನಿಂದ ನಮಸ್ಕರಿಸುವವನು ಸತ್ವವನ್ನು ಪಡೆಯುತ್ತಾನೆ. ಹುಲ್ಲು ನೀರು ಸೇವನೆಯಿಂದ ಹಸುವು ಪುಷ್ಟಿಗೊಂಡಂತೆ ಜಪ - ತಪ - ಹೋಮಗಳಿಂದ ಸತ್ವವನ್ನು ಗಳಿಸಿಕೊಳ್ಳಬೇಕು.

**ದೀಪಂ ನ ಸ್ಥಾಪಯೇದ್ಭೂಮೌ ಘತತೈಲೇ ನ ಮಿಶ್ರಯೇತ್**

**ಪಾತ್ರಂ ತಸ್ಯ ನ ಭಗ್ನಂ ಸ್ಯಾತ್ ವರ್ತಿಕಾ ಚಾಪ್ಯದೂಷಿತಾ ॥**

ದೀಪವನ್ನು ನೆಲದಲ್ಲಿಡಬಾರದು. ತುಪ್ಪ ಹಾಗೂ ಎಣ್ಣೆಯನ್ನು ಮಿಶ್ರಗೊಳಿಸಿ ದೀಪ ಹಚ್ಚಬಾರದು. ಎಣ್ಣೆ ಬತ್ತಿ ನಿಲ್ಲುವ ದೀಪದ ಭಾಗ ಒಡೆದಿರಬಾರದು. ಬತ್ತಿಯು ನುಣುಪಾಗಿರಬೇಕು.

**ದೇವಸ್ಯ ದಕ್ಷಿಣೇ ಪಾರ್ಶ್ವೇ ದೀಪಂ ದದ್ಯಾದ್ಯಥಾವಿಧಿ**

**ಘೃತದೀಪಂ ದಕ್ಷಿಣ ತಸ್ಮೈಲದೀಪಂ ಚ ವಾಮತಃ ।**

**ಸಾಧಾರಂ ಸ್ಥಾಪಯೇ ದ್ವೀಪಮನ್ಯಥಾ ಹ್ಯಶುಭಂ ಭವೇತ್ ॥**

ದೇವರ ಬಲಭಾಗಕ್ಕೆ ದೀಪವನ್ನಿಡಬೇಕು. ತುಪ್ಪದ ದೀಪ ದೇವರ ಬಲಕ್ಕೂ ಎಣ್ಣೆಯ ದೀಪ ದೇವರ ಎಡಕ್ಕೂ ಇಡಬೇಕು. ದೀಪಕ್ಕೆ ಭದ್ರ ಆಧಾರವಿರಬೇಕು. ಹೀಗೆ ಮಾಡದಿದ್ದರೆ ಅಶುಭವುಂಟಾಗುವುದು.

**ಭಸ್ಮನಾ ಶುದ್ಧ್ಯತೇ ಕಾಂಸ್ಯಂ ತಾಮ್ರಮಾಮ್ಲೇನ ಶುದ್ಧ್ಯತಿ ।**

**ರಜಸಾ ಶುದ್ಧ್ಯತೇ ನಾರೀ ನದೀ ವೇಗೇನ ಶುದ್ಧ್ಯತಿ ॥**

ಕಂಚಿನ ಪಾತ್ರೆಗಳು ಭಸ್ಮಲೇಪನದಿಂದಲೂ, ತಾಮ್ರಪಾತ್ರೆಗಳು ಹುಣಸೇ ಹಣ್ಣಿನ ಸ್ಪರ್ಶದಿಂದಲೂ, ನಾರಿಯು ರಜಸ್ರಾವದಿಂದಲೂ, ನದಿಯು ಪ್ರವಾಹದಿಂದಲೂ ಶುದ್ಧವೆನಿಸುತ್ತದೆ.

**ವನಿತಾನಾಂ ಗಲೇ ಸೂತ್ರೇ ಮಾಂಗಲ್ಯೇ ಶಿಥಿಲೇ ಪುನಃ ।**

**ಕೃತ್ವಾ ತು ಪೂರ್ವವತ್ಸದ್ಯೋ ಧಾರಯೇತ್ ಪ್ರಥಮೋಪಮಮ್ ॥**

ಸುಮಂಗಲಿಯ ಮಂಗಲ ಸೂತ್ರ ಭಿನ್ನವಾದಾಗ ಮೊದಲಿನಂತೆ ಮಾಡಿಸಿ ದೇವರಿಗೆ ಸಮರ್ಪಿಸಿ ಸ್ವಯಂ ಧರಿಸಬೇಕು.


-: ಶುಭಾಶಯಗಳೊಂದಿಗೆ :-

**ಸದಾನಂದ ಶೇಟ್ ಜುವೆಲ್ಲರ್ಸ್**
ಬಡಗುಪೇಟೆ, ಉಡುಪಿ - 576 101.
ಫೋನ್: 2522667; 2522668

**ನ್ಯೂ ಸದಾನಂದ ಶೇಟ್ ಜುವೆಲ್ಲರ್ಸ್**
ಎಸ್.ಎಂ.ಎಸ್.ಪಿ. ಕಾಂಪ್ಲೆಕ್ಸ್, ಉಡುಪಿ.
ಫೋನ್ : 2522866

# ಶ್ರಾವಣದ ಏಕಾದಶಿಗಳು

ಅಚಿಂಜ್ಯೋ ಬಿಣಗಾ

ಏ ಕಾ ದ ಶಿ ಮ ಹಿ ಮೆ

## ಪುತ್ರದಾ ಏಕಾದಶಿ

ಯುಧಿಷ್ಠಿರನು ಕೇಳಿದ್ದಕ್ಕೆ ಶ್ರೀಕೃಷ್ಣನು ಹೀಗೆ ಹೇಳುತ್ತಾನೆ. "ದ್ವಾಪರಯುಗದ ಆರಂಭಕ್ಕೆ ಮಾಹಿಷ್ಮತಿ ಪುರದಲ್ಲಿ ಮಹಿಜಿತ ಅರಸನು ತನ್ನ ರಾಜ್ಯವನ್ನು ಆಳುತ್ತಿದ್ದನು. ಅವನಿಗೆ ಮಕ್ಕಳಿಲ್ಲದಿದ್ದರಿಂದ ಅವನ ರಾಜ್ಯವು ದುಃಖಮಯವು, ತನ್ನ ಈ ಅವಸ್ಥೆಗೆ ರಾಜನು ತುಂಬಾ ಕೊರಗುತ್ತಿದ್ದನು.

ಒಮ್ಮೆ ಆತನು "ಎಲೈ ಪ್ರಜಾಜನರೇ ಈ ಜನ್ಮದಲ್ಲಿ ನನ್ನಿಂದ ಯಾವ ಪಾಪವು ಸಂಭವಿಸಿಲ್ಲ ನನ್ನ ಖಜಾನೆಯಲ್ಲಿ ಅನ್ಯಾಯದಿಂದ ಗಳಿಸಿದ ಧನವಿಲ್ಲ. ಬ್ರಾಹ್ಮಣರ ಅಥವಾ ದೇವರ ಹಣವನ್ನು ಕದಿಯಲಿಲ್ಲ. ಪ್ರಜೆಗಳನ್ನು ಮಕ್ಕಳಂತೆ ಪಾಲಿಸಿದ್ದೇನೆ. ಧರ್ಮದಿಂದ ಪೃಥ್ವಿಯ ಮೇಲೆ ಅಧಿಕಾರ ಚಲಾಯಿಸಿದ್ದೇನೆ. ದುರ್ಜನರನ್ನು ದಂಡಿಸುತ್ತ ಶಿಷ್ಟರನ್ನು ರಕ್ಷಿಸಿದ್ದೇನೆ. ಆದರೂ ನನ್ನ ಮನೆಯಲ್ಲಿ ಮಗನು ಹುಟ್ಟಲಿಲ್ಲ. ತಾವು ವಿಚಾರ ಮಾಡಬೇಕು" ಎಂದು ಹೇಳಿದಾಗ ಪ್ರಜಾ ಮತ್ತು ಪುರೋಹಿತರೊಂದಿಗೆ ಬ್ರಾಹ್ಮಣರು ದಟ್ಟಡವಿಗೆ ಪ್ರವೇಶಿಸಿ ಮುನಿಗಳತ್ತ ಹೆಜ್ಜೆ ಹಾಕಿದರು. ಅಷ್ಟರಲ್ಲಿ ಲೋಮಶರೆಂಬ ಮುನಿಗಳ ದರ್ಶನವು ಲಭಿಸಿತು.

ಧರ್ಮ ಶಾಸ್ತ್ರ ತತ್ವಗಳನ್ನು ಅರಿತವನೂ ದೀರ್ಘಾಯುವೂ, ಮಹಾತ್ಮನೂ ಆಗಿರುವ ಲೋಮಶನು ಬ್ರಹ್ಮನಂತೆ ತೇಜಸ್ವಿಯಾಗಿದ್ದನು. ಒಂದೊಂದು ಕಲ್ಪ ಕಳೆದ ನಂತರ ದೇಹದ ಒಂದೊಂದು ರೋಮವು ಉದುರಿ ಬೀಳುತ್ತಿದ್ದರಿಂದ ಲೋಮಶನೆಂದು ಹೆಸರು. ಲೋಮಶರ ಹತ್ತಿರ ಪ್ರಜಾಜನರು ಪುರೋಹಿತರು, ಬ್ರಾಹ್ಮಣರು ವಂದಿಸಿ ಅರಸನಿಗೆ ಪುತ್ರ ಪ್ರಾಪ್ತಿ ಆಗದಿರುವುದಕ್ಕೆ ಕಾರಣವೇನು ಎಂದು ವಿನಂತಿಸಿದ್ದಕ್ಕೆ ಲೋಮಶರು ಎರಡು ಗಂಟೆ ಧ್ಯಾನಮಗ್ನನಾಗಿ ರಾಜನ ಜನ್ಮವೃತ್ತಾಂತವನ್ನರಿತು ಹೇಳತೊಡಗಿದನು.

ಮಹಿಜಿತ ರಾಜನು ಹಿಂದಿನ ಜನ್ಮದಲ್ಲಿ ಮಾನವರಿಗೆ ತ್ರಾಸ ಕೊಡುವ ಧನಹೀನ ವೈಶ್ಯನು. ಅವನು ಊರೂರಿಗೆ ತಿರುಗಿ ವ್ಯಾಪಾರ ಮಾಡುವಾಗ ಒಮ್ಮೆ ಜ್ಯೇಷ್ಠ ಶುದ್ಧ ದಶಮಿಯ ಮಧ್ಯಾಹ್ನ ವೇಳೆಯಲ್ಲಿ ನೀರಡಿಕೆಯಿಂದ ಬಳಲತೊಡಗಿದನು. ಅದೇ ಕಾಲಕ್ಕೆ ನೀರಿಗಾಗಿ ಬಂದ ಕರು ಸಹಿತ ಆಕಳನ್ನು ಹೊಡೆದು ಓಡಿಸಿ ಆಕಳು ಮತ್ತು ಕರುವಿಗೆ ನೀರು ಕೊಡದೆ ತಾನೇ ನೀರು ಕುಡಿದನು. ಇದೇ ಪಾಪಕರ್ಮದಿಂದ ಪುತ್ರಹೀನನಾದನು. ಯಾವುದೋ ಪುಣ್ಯಾಂಶದಿಂದ ರಾಜ್ಯವು ಲಭಿಸಿದೆ ಎಂದಾಗ ಪುತ್ರ ಪ್ರಾಪ್ತಿಗಾಗಿ ಉಪಾಯ ಕೇಳಿದಾಗ ಲೋಮಶರು ಶ್ರಾವಣದ ಶುಕ್ಲ ಏಕಾದಶಿ ಪುತ್ರದಾ ಏಕಾದಶಿಯ ಮಹಿಮೆ ತಿಳಿಸಿ ವ್ರತ ಆಚರಣೆಗೆ ತಿಳಿಸಿದರು.

ಈ ಮಾತನ್ನು ಕೇಳಿದ ಪ್ರಜಾಜನರು ವಿಧಿಯುಕ್ತವಾಗಿ ಪುತ್ರದಾ ಏಕಾದಶಿ



ವ್ರತಾನುಷ್ಠಾನ ಜಾಗರಣೆ ಮಾಡಿ ಅದರ ನಿರ್ಮಲ ಪುಣ್ಯವನ್ನು ಅರಸನಿಗೆ ಕೊಟ್ಟರು. ಆ ಮೇಲೆ ಮಹಾರಾಣಿಯು ಬಲಿಷ್ಠ ಪುತ್ರನನ್ನು ಪಡೆದುಕೊಂಡಳು. ಈ ವ್ರತ ಮಾಹತ್ಮ್ಯ ಕೇಳಿದರೆ ಮಾನವನಿಗೆ ಪಾಪಯುಕ್ತ ಇಹಸುಖ, ಪರಲೋಕದಲ್ಲಿ ಗತಿಯು ಪ್ರಾಪ್ತವಾಗುತ್ತದೆ.

## ಶ್ರಾವಣ ಕೃಷ್ಣದ ಅಜಾ ಏಕಾದಶಿ

ಶ್ರೀಕೃಷ್ಣನು ಯುಧಿಷ್ಠಿರನಿಗೆ ಅಜಾಏಕಾದಶಿಯ ಮಹಿಮೆಯನ್ನು ಹೀಗೆ ಹೇಳುತ್ತಾನೆ.

ಭಗವಾನ್ ಹೃಷಿಕೇಶನನ್ನು ಪೂಜಿಸಿ ಅಜಾಏಕಾದಶಿಯ ವ್ರತ ಮಾಡಿದರೆ ಸರ್ವಪಾಪ ನಾಶವಾಗುವುದು.

ಹಿಂದಕ್ಕೆ ಹರಿಶ್ಚಂದ್ರ ಎಂಬ ಚಕ್ರವರ್ತಿಯು ಸತ್ಯ ಪ್ರತಿಜ್ಞೆ ಪಾಲಕನಾಗಿದ್ದು ಸಮಸ್ತ ಭೂಮಂಡಲಕ್ಕೆ ಒಡೆಯನಾಗಿದ್ದನು ಒಮ್ಮೆ ಕರ್ಮಫಲ ಭೋಗದಿಂದ ಅವನು ರಾಜ್ಯಭ್ರಷ್ಟನಾಗಿ ತನ್ನ ಸತಿ ಸುತರನ್ನು ಮಾರಿದನು. ಬಳಿಕ ತನ್ನನ್ನು ತಾನು ಮಾರಿಕೊಂಡನು. ಪುಣ್ಯಾತ್ಮನಾದರೂ ಕೂಡ ಅವನು ಚಂಡಾಲನೊಬ್ಬನ ದಾಸ್ಯತ್ವ ಮಾಡುವ ಪ್ರಸಂಗ ಬಂದರೂ ಕೂಡ ರಾಜನು ವಿಚಲಿತನಾಗಲಿಲ್ಲ.

ಹೀಗೆ ಚಂಡಾಲದಾಸ್ಯತ್ವವನ್ನು ಮಾಡಿ ಅನೇಕ ವರ್ಷಗಳು ಕಳೆದವು. ಇದರಿಂದ ರಾಜನಿಗೆ ಚಿಂತೆಯಾಗಿ ಅತ್ಯಂತ ದುಃಖಿತನಾಗಿ "ನಾನು ಏನು ಮಾಡಲಿ, ಎಲ್ಲಿಗೆ ಹೋಗಲಿ? ನನ್ನ ಉದ್ಧಾರ ಹೇಗೆ ಆಗುವುದು? ಎಂಬುದನ್ನು ಯೋಚಿಸುತ್ತಾ ಶೋಕಸಾಗರದಲ್ಲಿ ಮುಳುಗಿದನು. ರಾಜನ ಚಿಂತೆ ಕಂಡು ಗೌತಮರು ಅರಮನೆಗೆ ಬಂದರು. ಗೌತಮರು ಬಂದದ್ದನ್ನು ಕಂಡು ಹರಿಶ್ಚಂದ್ರನು ಆತನ ಚರಣಗಳಲ್ಲಿ ವಂದಿಸಿ ತನ್ನೆರಡು ಕರಗಳನ್ನು ಜೋಡಿಸಿ ತನ್ನ ದುಃಖಮಯ ಬದುಕನ್ನು ನಿರೂಪಿಸಿದನು. ಇದನ್ನು ಕೇಳಿ ಗೌತಮರು "ಶ್ರಾವಣ ಕೃಷ್ಣ ಪಕ್ಷದಲ್ಲಿ ಕಲ್ಯಾಣಕರ ಅಜಾ ಏಕಾದಶಿ ವ್ರತ ಆಚರಿಸಬೇಕು" ಇದರಿಂದ ಪಾಪ ನಾಶವಾಗುವುದು. ನಿನ್ನ ಭಾಗ್ಯದಿಂದ ಇಂದಿನಿಂದ ಏಳನೆಯ ದಿನ ಏಕಾದಶಿಯಾಗಿದೆ ಆದಿನ ಉಪವಾಸ ಮಾಡಿ ರಾತ್ರಿಗೆ ಜಾಗರಣೆ ಮಾಡಬೇಕೆಂದು ಹೇಳಿ ಗೌತಮರು ಅದೃಶ್ಯರಾದರು.

ಗೌತಮರ ವಚನವನ್ನು ಕೇಳಿ ಹರಿಶ್ಚಂದ್ರನು ಉತ್ತಮ ವ್ರತಾನುಷ್ಠಾನ ಮಾಡಿದನು ವ್ರತದ ಪ್ರಭಾವದಿಂದ ಅರಸನ ಎಲ್ಲ ದುಃಖವು ನಾಶ ಹೊಂದಿತು. ಅವನಿಗೆ ಸತಿ ಸುತರ ಪ್ರಾಪ್ತಿಯಾಯಿತು. ಆಗಸದಲ್ಲಿ ದುಂದುಭಿಗಳು ಮೊಳಗ ಹತ್ತಿದವು. ದೇವಲೋಕದಿಂದ ಹೂಮಳೆಯಾಯಿತು. ಏಕಾದಶಿಯ ಪ್ರಭಾವದಿಂದ ರಾಜನಿಗೆ ಅಕಂಟಕ ರಾಜ್ಯವು ಲಭಿಸಿ ಕೊನೆಗೆ ಸ್ವರ್ಗಲಾಭವಾಯಿತು.

"ಎಲೈ ಯುಧಿಷ್ಠಿರ, ಯಾವನು ಈ ವ್ರತ ಮಾಡುವನೋ ಅವನು ಸರ್ವ ಪಾಪಗಳಿಂದ ಬಿಡುಗಡೆ ಹೊಂದಿ ಸ್ವರ್ಗ ಲೋಕವನ್ನು ಸೇರುತ್ತಾನೆ. ಈ ವ್ರತದ ಪಠಣ ಹಾಗೂ ಶ್ರವಣದಿಂದ ಅಶ್ವಮೇಧ ಯಜ್ಞದ ಫಲವು ಲಭಿಸುತ್ತದೆ.

# ಭಗವನ್ನಾಮಸ್ಮರಣೆಯ ಒಂದು ವೈಶಿಷ್ಟ್ಯ

**ಎಸ್. ಪಿ. ಶ್ರೀನಿವಾಸ ಭಟ್ಟಜಿ**

"ಸರ್ವೇಷು ಕಾಲೇಷು ಮಾಮನುಸ್ಮರ" ಇದು ಭಗವದ್ಗೀತೆಯಲ್ಲಿ ಗೀತಾಚಾರ್ಯ ಶ್ರೀಕೃಷ್ಣ ಹೇಳಿದ ಮಾತು. ಇಲ್ಲಿ ಒಂದು ವಿಚಿತ್ರ ಏನೆಂದರೆ, "ಯುದ್ಧರಂಗದಲ್ಲಿ ತನ್ನವರಾದ, ಭೀಷ್ಮ ದ್ರೋಣಾದಿ ಗುರುಹಿರಿಯರನ್ನು ಬಂಧು ಬಳಗದವರನ್ನು ಸಾಯಿಸಬೇಕಲ್ಲಾ! ಇದು ಮಹಾ ಪಾತಕವಲ್ಲವೇ!" ಈ ವ್ಯಥೆ ಬರಬೇಕಾಗಿತ್ತು ಧರ್ಮರಾಜನಿಗೆ. ಯಾಕೆಂದರೆ ಇವನು ಸತ್ಯಸಂಧ, ಅಜಾತಶತ್ರು, ಅಹಿಂಸಾವಾದಿ.

ಅರ್ಜುನನಾದರೂ ಇಂದ್ರ ಲೋಕಕ್ಕೂ ಹೋಗಿ, ಅಲ್ಲಿಂದ ಹಲವು ಲಾಭಗಳನ್ನು ಪಡೆದ. ಕಿರಾತ ವೇಷಧಾರೀ ಶಿವನೊಡನೆ ಯುದ್ಧಮಾಡಿ ಜಯಿಸಿ ಪಾಶುಪತಾಸ್ತ್ರವನ್ನು ಪಡೆದುಕೊಂಡ. ಹೀಗೆ ಹಲವು ಸಾಧನೆಗಳನ್ನು ಮಾಡಿ, ಕೌರವರ ಮೋಸ, ವಂಚನೆ, ಕಪಟದಿಂದ ಪಗಡೆಯಾಟದಲ್ಲಿ ಅಣ್ಣನಾದ ಧರ್ಮರಾಜ ಸೋತು ವನವಾಸ - ಅಜ್ಞಾತವಾಸವೆಲ್ಲವನ್ನೂ ಸಂಕಟದಿಂದಲೇ ಜಯಿಸಿ, ಕೊನೆಯಲ್ಲಿ ಯುದ್ಧವು ಅನಿವಾರ್ಯವೆಂದು ತೀರ್ಮಾನಿಸಿ ಯುದ್ಧ ರಂಗಕ್ಕೆ ಬಂದು ಶ್ರೀಕೃಷ್ಣನೊಡನೆ ಅರ್ಜುನ ಹೇಳುತ್ತಾನೆ. "ಕೃಷ್ಣ! ನಾನು ಯಾರ್‍ಯಾರೊಡನೆ ಯುದ್ಧ ಮಾಡಬೇಕಾಗಿದೆಯೋ ಅವರನ್ನು ಒಂದು ಸಲ ನಾನು ನೋಡುತ್ತೇನೆ. ನಮ್ಮ ಶತ್ರುಗಳನ್ನು ತೋರಿಸಿಕೊಡು".

ಆಗ ಉಭಯ ಸೈನ್ಯ ಮಧ್ಯದಲ್ಲಿ ಸಾರಥಿಯಾದ ಶ್ರೀಕೃಷ್ಣನು ರಥವನ್ನು ನಿಲ್ಲಿಸುತ್ತಾನೆ. ಅರ್ಜುನನು ಮಹಾಶೂರ, ಧೈರ್ಯಶಾಲಿ; ಕೌರವಾದಿಗಳನ್ನು ಪೂರ್ತಿಯಾಗಿ ನಾಶಮಾಡಲೆಂದೇ ಲೋಕಾಂತರಗಳಿಗೆ ಹೋಗಿ ಧನುರ್ವಿದ್ಯಾದಿ ಸಕಲ ಮಂತ್ರ ತಂತ್ರಾದಿ ಅಸ್ತ್ರಗಳನ್ನು ಅಭ್ಯಾಸ ಮಾಡಿ ಇನ್ನೇನು, ಯುದ್ಧಕ್ಕೆ ಸನ್ನದ್ಧನಾದಾಗ, ಗುರುಹಿರಿಯರನ್ನು ಕಂಡು ಒಮ್ಮಿಂದೊಮ್ಮೆಲೇ ಹೆದರಿ ವಿಷಣ್ಣನಾದ. "ಇಷ್ಟೊಂದು ಧೈರ್ಯ, ಇರುವವನಿಗೆ ಈ ಹೇಡಿ ಬುದ್ಧಿ ಎಲ್ಲಿಂದ ಬಂತು?" ಎಂದು ಕೇಳುತ್ತಾನೆ ಶ್ರೀಕೃಷ್ಣ. ಇದೊಂದು ವಿಚಿತ್ರ ಸಂಗತಿ ಅಲ್ಲವೇ? ಇದರಲ್ಲಿ ಏನಾದರೂ ಒಂದು ರಹಸ್ಯ ವಿರಲೇಬೇಕು. ಅದೇ ದೇವರಹಸ್ಯ.

ಪ್ರಪಂಚದಲ್ಲಿ ಹುಟ್ಟಿ ಬಂದ ಮೇಲೆ, ಸಕಲ ಜೀವರಾಶಿಗಳಿಗೂ ಸಮಸ್ಯೆಗಳು, ಸುಖ-ದುಃಖ, ಒಂದಲ್ಲ ಒಂದು ವ್ಯಸನ ಕಾಡುತ್ತಲೇ ಇರುತ್ತದೆ. ಆಗರ್ಭ ಶ್ರೀಮಂತನಾಗಲೀ, ಕೋಟ್ಯಧೀಶ್ವರನಾಗಿರಲಿ, ದೊಡ್ಡ ಹುದ್ದೆಯಲ್ಲಿರುವ ಅಧಿಕಾರಿಯಾಗಿರಲಿ, ಬಡವನಾಗಿರಲಿ, ಬಲ್ಲಿದವನಾಗಿರಲಿ, ಆಸ್ತಿಕನಾಗಿರಲಿ - ನಾಸ್ತಿಕನಾಗಿರಲಿ ಸಮಸ್ಯೆಗಳು, ವ್ಯಥೆ ಯಾರನ್ನೂ ಬಿಟ್ಟಿಲ್ಲ. ಇದಕ್ಕೆ ಉದಾಹರಣೆ ಅರ್ಜುನನನ್ನೇ ತೆಗೆದುಕೊಳ್ಳೋಣ. ಅರ್ಜುನನಂಥ ಒಬ್ಬ ವೀರ, ಅವನಿಗಿಂತಲೂ ಹಿಂದಿನ ಪುರಾಣ ಕಥೆಗಳಲ್ಲಿ ಎಲ್ಲಿಯಾದರೂ ಯಾರಾದರೂ ಇದ್ದಿರಬಹುದು. ಆದರೆ ಇನ್ನು ಮುಂದಿನ ಕಾಲಗಳಲ್ಲಿ ಅಂಥ ಒಬ್ಬ ವೀರನು ಹುಟ್ಟುವುದು ಎಂದರೆ ಅದು

**'ಶ್ರೀ ದತ್ತ ಮಂದಿರ', ನ್ಯೂ ಮಗ್‌ದಲ್ಲಾ, ಡುಮಾಸ್ ರೋಡ್, ಸೂರತ್ – 395 007**



ನಂಬಲು ಸಾಧ್ಯವಿಲ್ಲ.

ಶ್ರೀಕೃಷ್ಣ ಪರಮಾತ್ಮನನ್ನು, ಅರ್ಜುನನು ಸಾಮಾನ್ಯ ಮನುಷ್ಯನಾಗಿಯೂ, ನಂತರ ಶ್ರೀಕೃಷ್ಣನ ತಂಗಿಯಾದ ಸುಭದ್ರೆಯನ್ನು ಕೃಷ್ಣನ ಅನುಮತಿಯಿಂದಲೇ ಅಪಹರಿಸಿ, ಮದುವೆಯಾಗಿ, ಕೃಷ್ಣನೊಡನೆ ಸಂಬಂಧ ಬೆಳೆಸಿ, ಕೊನೆಗೆ ಯುದ್ಧ ರಂಗದಲ್ಲಿ ವಿಷಣ್ಣನಾದ ಸಂದರ್ಭದಲ್ಲಿ ಗುರುವಾಗಿ ಮಾಡಿಕೊಂಡು ಅವನ ವ್ಯಥೆಗೆ ಕಾರಣಗಳನ್ನು ಅದಕ್ಕೆ ಸರಿಯಾದ ಪರಿಹಾರವನ್ನೂ ಕಂಡುಕೊಂಡಿರುವನು ಶ್ರೀಕೃಷ್ಣ. ತನ್ನ ವಿಶ್ವರೂಪವನ್ನೇ ತೋರಿಸಿಕೊಟ್ಟಾಗಲೂ ಅರ್ಜುನ ಹೆದರಿ ಕಣ್ಣು ಮುಚ್ಚಿಕೊಂಡ. ವಿಶ್ವರೂಪವನ್ನು ನೋಡಲು ಶ್ರೀಕೃಷ್ಣನು ದಿವ್ಯ ದೃಷ್ಟಿಯನ್ನು ಕೊಟ್ಟಿದ್ದ. ಆದರೆ, ಆಗಲೂ ಶ್ರೀಕೃಷ್ಣನ ನಿಜ ಸ್ವರೂಪವನ್ನು ಕಂಡು ಸಂತೋಷವೂ ಧೈರ್ಯವೂ ಕುಂದಿಹೋಗಿ, "ಕೃಷ್ಣಾ! ಸಾಕು, ನಿನ್ನ ವಿಶ್ವರೂಪ ದರ್ಶನವನ್ನು ನಾನು ನೋಡಲಾರೆ! ನಿನ್ನ ಹಳೆಯ ಸ್ವರೂಪವನ್ನೇ ತೋರಿಸು" ಎಂದು ಬೇಡುತ್ತಾನೆ.

ಅರ್ಜುನನಂಥ ಮಹಾತ್ಮನಿಗೂ ವ್ಯಥೆ ಬಿಟ್ಟಿಲ್ಲ ಅಂದ ಮೇಲೆ ಮನುಷ್ಯನ ಪಾಡೇನು? ಇನ್ನು ಹೇಳುವುದಾದರೆ, ನಮಗಿಂತಲೂ ಹೆಚ್ಚು ಕಷ್ಟ, ದುಃಖ ಪಡುವವರು ಯಾರು? ಮನುಷ್ಯೇತರ ಪ್ರಾಣಿಗಳು. ಮನುಷ್ಯನಿಗೆ ಅವನ ಪೂರ್ವ ಪುಣ್ಯಕ್ಕೆ ತಕ್ಕಂತೆ 'ವಿವೇಕ'ವೆಂಬ ರತ್ನವು ಲಭ್ಯವಾಗಿದೆ. ಪ್ರಾಣಿಗಳಿಗೆ ಅದು ಲಭ್ಯವಾಗಿಲ್ಲ. ಆದ್ದರಿಂದ ಅವುಗಳು ತುಂಬಾ ಕಷ್ಟಪಡುತ್ತವೆ.

ಇದರಿಂದಾಗಿ ಮನುಷ್ಯೇತರ ಪ್ರಾಣಿಗಳು, ನಮಗೆ ಏನು ಪಾಠ ಕಲಿಸುತ್ತವೆ ಎಂದರೆ "ನಾವು ಏನೋ ಹಿಂದಿನ ಜನ್ಮದಲ್ಲಿ ಘೋರಪಾಪ ಮಾಡಿರಬೇಕು. ಆದ್ದರಿಂದಲೇ ಇಂಥ ಪ್ರಾಣಿಗಳ ಜನ್ಮಕ್ಕೆ ಬಂದಿದ್ದೇವೆ. ಮಾನವ ರೂಪವನ್ನೂ ತಕ್ಕ ವಿವೇಕವನ್ನೂ ಉಪಯೋಗಿಸಿ, ನೀವಾದರೂ ಮನುಷ್ಯತ್ವದಿಂದ ದೇವತ್ವಕ್ಕೆ ಸೇರುವ ಪ್ರಯತ್ನ ಮಾಡಿ" ಎಂದು.

ದುರ್ದೈವಿ, ಭಿಕ್ಷುಕ ಮನೆಗೆ ಬಂದಾಗ ಅವನನ್ನು ಕಡೆಗಣಿಸಬಾರದು. ಭಿಕ್ಷುಕನೂ ನಮಗೆ ಒಂದು ವಿಧದಲ್ಲಿ ಗುರುವಾಗಿರುತ್ತಾನೆ. ಏಕೆಂದರೆ, ಅವನು ಭಿಕ್ಷೆಗಾಗಿ ಮಾತ್ರ ಬರುತ್ತಿಲ್ಲ. ನಮಗೂ ಒಂದು ಪಾಠಹೇಳಿಕೊಡುತ್ತಿದ್ದಾನೆ. "ನಾನು ಕಳೆದ ಜನ್ಮದಲ್ಲಿ ದಾನ ಮಾಡಿಲ್ಲ ಧರ್ಮ ಮಾಡಿಲ್ಲ. ಹಣ ಸಂಪಾದನೆ ಮಾಡಿ, ಅದರ ಉಪಯೋಗವನ್ನು ಸರಿಯಾಗಿ ಮಾಡದೆ ಕೊನೆಗೆ ಪ್ರಾಣ ಬಿಟ್ಟೆ. ನನ್ನ ಗತಿ ಹೀಗಾಯಿತು" (ಹೀಗೆಂದು ಭಿಕ್ಷುಕ ಹೇಳುವುದಿಲ್ಲ. ಆದರೆ, ವಿವೇಕಿಯಾದವನು ಈ ರೀತಿ ಅರ್ಥ ಮಾಡಿಕೊಳ್ಳಬೇಕು ಎನ್ನುತ್ತಾರೆ ಹಿರಿಯರು)

**ವಿಪದೋ ನೈವ ವಿಪದಃ ಸಂಪದೋ ನೈವ ಸಂಪದಃ ।**

**ವಿಪದ್ವಿಸ್ಮರಣಂ ವಿಷ್ಣೋಃ ಸಂಪನ್ನಾರಾಯಣಸ್ಮೃತಿಃ ॥**

ಕಷ್ಟ - ದುಃಖ, ಅಪಘಾತ ಮುಂತಾದ ಸಮಯದಲ್ಲೂ ಕೂಡಾ ಭಗವಂತನ ಯಾವುದಾದರೊಂದು ರೂಪವನ್ನು ಸ್ಮರಣೆ ಮಾಡುವುದರಿಂದ ಭಗವಂತನ ಸ್ಮರಣೆಯ ಬಲದಿಂದ, ಶಕ್ತಿಯಿಂದ ವಿಪತ್ತುಗಳಿಂದ ಪಾರಾಗಿ ರಕ್ಷೆ ಪಡುತ್ತಾನೆ. ಸುಖ - ಸಂತೋಷ

ಹೆಚ್ಚಾಗಿ ಅನುಭವಿಸಿಕೊಂಡಿರುವಾಗ ಭಗವಂತನ ನಾಮಸ್ಮರಣೆ ಮಾಡಲು ಅವಕಾಶ ಸಿಗುವುದಿಲ್ಲ. ಅಂದರೆ ಅಂಥ ಸಮಯದಲ್ಲಿ ದೊಡ್ಡ ದೊಡ್ಡ ವ್ಯವಹಾರಗಳಲ್ಲಿ ತೊಡಗಿರುತ್ತಾನೆ. ಅಂಥ ವ್ಯವಹಾರವು ಕುಸಿದು ಬಿತ್ತು ಎಂದಾಗ ಮನುಷ್ಯ ದುಃಖ ಪಡುತ್ತಾನೆ. ಆ ದುಃಖದ ಸಂದರ್ಭದಲ್ಲಿ ಕಷ್ಟ ನಷ್ಟಗಳ ಬಗ್ಗೆ ಚಿಂತಿಸುತ್ತಾನೆಯೇ ಹೊರತು ಭಗವಂತನ ಸ್ಮರಣೆ ಮಾಡಲು ಸಾಧ್ಯವಾಗುವುದಿಲ್ಲ. ಇದಕ್ಕೇನು ಕಾರಣ? ಮಾಯಾ ಪ್ರಪಂಚವನ್ನು ಸತ್ಯವೆಂದು ವ್ಯವಹರಿಸಿದ್ದೇ ಇದಕ್ಕೆ ಕಾರಣ.

**ಶ್ರೀ ಕೃಷ್ಣ ಗೋವಿಂದ ಹರೇ ಮುರಾರೇ ಹೇ ನಾಥ ನಾರಾಯಣ ವಾಸುದೇವ ।**
**ಜಿಹ್ವೇ ಪಿಬ ಸ್ವಾಮೃತಮೇತದೇವ ಗೋವಿಂದ ದಾಮೋದರ ಮಾಧವೇತಿ ॥**

"ಹೇ ನಾಲಿಗೆಯೇ! ನೀನು ಕೃಷ್ಣ! ಗೋವಿಂದ, ಹರೇ, ಮುರಾರೇ, ಹೇನಾಥ! ನಾರಾಯಣ! ವಾಸುದೇವ! ಹಾಗೆಯೇ ಗೋವಿಂದ! ದಾಮೋದರ! ಮಾಧವ! ಈ ನಾಮಾಮೃತವನ್ನೇ ಪಾನ ಮಾಡು"

**ವಿಕ್ರೇತು ಕಾಮಾ ಕಿಲ ಗೋಪಕನ್ಯಾ ಮುರಾರಿಪಾದಾರ್ಪಿತ ಚಿತ್ತವೃತ್ತಿಃ ।**
**ದಧ್ಯಾದಿಕಂ ಮೋಹವಶಾದವೋಚತ್ ಗೋವಿಂದ ದಾಮೋದರ ಮಾಧವೇತಿ ॥**

ಹಾಲು ಮೊಸರು ಇತ್ಯಾದಿಗಳನ್ನು ಮಾರಾಟ ಮಾಡಲು ಹೊರಟ ಗೋಪ ಸ್ತ್ರೀಯರ ಮನಸ್ಸೆಲ್ಲಾ ಶ್ರೀಕೃಷ್ಣನಲ್ಲಿಯೇ ನೆಲೆ ನಿಂತಿತ್ತು. "ಮೊಸರು ತೆಕ್ಕೊಳ್ಳಿ, ಮೊಸರು" ಎನ್ನುವ ಬದಲು "ಗೋವಿಂದನನ್ನು ತೆಕ್ಕೊಳ್ಳಿ" ದಾಮೋದರನನ್ನು ತೆಕ್ಕೊಳ್ಳಿ , ಮಾಧವನನ್ನು ತೆಕ್ಕೊಳ್ಳಿ" ಅಂತ ಬೀದಿಯಲ್ಲಿ ಗಟ್ಟಿಯಾಗಿ ಕರೆದು ಹೀಗೆ ಹೇಳುತ್ತಿದ್ದರಂತೆ. ಭಕ್ತಿ ಎಂದರೆ ಗೋಪಿಯರ ಭಕ್ತಿ.

**ಸುಖಂ ಶಯನಾ ನಿಲಯೇ ನಿಜೇऽಪಿ ನಾಮಾನಿ ವಿಷ್ಣೋಃ ಪ್ರವದಂತಿ ಮರ್ತ್ಯಾಃ ।**
**ತೇನಿಶ್ಚಿತಂ ತನ್ಮಯತಾಂ ಪ್ರಜಂತಿ ಗೋವಿಂದ ದಾಮೋದರ ಮಾಧವೇತಿ ॥**

ತನ್ನ ಮನೆಯಲ್ಲೇ ಅದು ಕೂಡಾ ಸುಖವಾಗಿ ಶಯ್ಯೆಯಲ್ಲಿ ಮಲಗಿರುವಾಗಲೂ ಕೂಡಾ ಜನರು "ಹೇ ಗೋವಿಂದಾ, ಹೇ ದಾಮೋದರಾ! ಹೇ ಮಾಧವಾ ಎನ್ನುತ್ತಾ ಪವಿತ್ರವಾದ ನಾಮಸ್ಮರಣೆಯನ್ನು ಮಾಡುತ್ತಿದ್ದು ಜನರು ನಿಸ್ಸಂಶಯವಾಗಿ ಭಗವಂತನ ತನ್ಮಯತೆಯನ್ನೇ ಪ್ರಾಪ್ತ ಮಾಡಿಕೊಂಡಿದ್ದರು.

**ಜಿಹ್ವೇ ಸದೈವಂ ಭಜ ಸುಂದರಾಣಿ ನಾಮಾನಿ ಕೃಷ್ಣಸ್ಯ ಮನೋಹರಾಣಿ ।**
**ಸಮಸ್ತ ಭಕ್ತಾರ್ತಿವಿನಾಶನಾನಿ ಗೋವಿಂದ ದಾಮೋದರ ಮಾಧವೇತಿ ॥**

ಹೇ ನಾಲಿಗೆಯೇ! ನೀನು ಯಾವಾಗಲೂ ಶ್ರೀಕೃಷ್ಣನನ್ನು ಗೋವಿಂದಾ, ದಾಮೋದರ, ಮಾಧವಾ ಎಂದು ಮಂಜುಳ ಮನೋಹರವಾದ ನಾಮವನ್ನು ಉಚ್ಚರಿಸುತ್ತಲೇ ಇರು ಏಕೆಂದರೆ ಅದು ಭಕ್ತರ ಸಂಕಟಗಳನ್ನು ನಿವಾರಿಸುತ್ತದೆ.

**ಸುಖಾವಸಾನೇ ಇದಮೇವ ಸಾರಂ ದುಃಖಾವಸಾನೇ ಇದಮೇವ ಜ್ಞೇಯಂ ।**



**ದೇಹಾವಸಾನೇ ಇದಮೇವ ಜಾಪ್ಯಂ ಗೋವಿಂದ ದಾಮೋದರ ಮಾಧವೇತಿ ॥**

ಸುಖದ ಅಂತ್ಯದಲ್ಲಿಯೂ ಇದೇ ಸಾರವಾಗಿದೆ. ದುಃಖದ ಅಂತ್ಯದಲ್ಲೂ ಇದನ್ನೇ ತಿಳಿದು ಕೊಳ್ಳಬೇಕಾಗಿದೆ. ಮತ್ತು ಶರೀರದ ಅಂತ್ಯಕಾಲದಲ್ಲೂ ಇದೇ ಮಂತ್ರ ಜಪವೇ ಯೋಗ್ಯವಾಗಿದೆ. ಇದೇ "ಹೇ ಗೋವಿಂದ ! ಹೇ ದಾಮೋದರಾ ! ಹೇ ಮಾಧವ!"

**ಶ್ರೀಕೃಷ್ಣರಾಧಾವರ ಗೋಕುಲೇಶ ಗೋಪಾಲ ಗೋವರ್ಧನನಾಥ ವಿಷ್ಣೋ ।**
**ಜಿಹ್ವೇ ಪಿಬ ಸ್ವಾಮೃತಮೇತದೇವ ಗೋವಿಂದ ದಾಮೋದರ ಮಾಧವೇತಿ ॥**

"ಹೇ ನಾಲಿಗೆಯೇ! ನೀನು ಶ್ರೀಕೃಷ್ಣ! ರಾಧಾರಮಣ! ವ್ರಜರಾಜ! ಗೋಪಾಲ! ಗೋವರ್ಧನ! ವಿಷ್ಣೋ! ಗೋವಿಂದ! ದಾಮೋದರಾ! ಮಾಧವಾ! ಈ ನಾಮಾಮೃತವನ್ನು ಕುಡಿಯುತ್ತಾ ಇರು"

**ಜಿಹ್ವೇ ರಸಜ್ಞೇ ಮಧುರಪ್ರಿಯಾ ತ್ವಂ ಸತ್ಯಂ ಹಿತಂ ತ್ವಾಂ ಪರಮಂ ವದಾಮಿ ।**
**ಆವರ್ಣಯೇಥಾ ಮಧುರಾಕ್ಷರಾಣಿ ಗೋವಿಂದ ದಾಮೋದರ ಮಾಧವೇತಿ ॥**

"ರಸವನ್ನು ಅರಿಯುವ ಹೇ ನಾಲಿಗೆಯೇ! ನಿನಗೆ ಸಿಹಿಯಾದ ವಸ್ತುಗಳು ತುಂಬಾ ಪ್ರಿಯವಾಗಿದೆ. ಇದಕ್ಕೋಸ್ಕರ ನಾನು ನಿನ್ನ ಹಿತಕ್ಕಾಗಿ ಒಂದು ತುಂಬಾ ಸುಂದರವಾದ ಮತ್ತು ಸತ್ಯವಾದ ಮಾತು ಒಂದನ್ನು ಹೇಳುತ್ತೇನೆ. ನೀನು ನಿರಂತರವಾಗಿ ಹೇ ಗೋವಿಂದ! ಹೇ ದಾಮೋದರಾ। ಹೇ ಮಾಧವಾ। ಈ ಮಂಜುಳ ಮಧುರವಾದ ನಾಮವನ್ನು ಜಪಿಸುತ್ತಲೇ ಇರು.

**ತ್ವಾಮೇವ ಯಾಚೇ ಮಮ ದೇಹಿ ಜಿಹ್ವೇ ಸಮಾಗತೇ ದಂಡಧರೇ ಕೃತಾಂತೇ।**
**ವಕ್ತವ್ಯಮೇವಂ ಮಧುರಂ ಸುಭಕ್ತ್ಯಾ ಗೋವಿಂದ ದಾಮೋದರ ಮಾಧವೇತಿ ॥**

"ಹೇ ನಾಲಿಗೆಯೇ! ನಾನು ನಿನ್ನಲ್ಲಿ ಒಂದು ಭಿಕ್ಷೆಯನ್ನು ಬೇಡುತ್ತಿದ್ದೇನೆ. ಅದನ್ನು ನೀನೇ ನನಗೆ ಕೊಡಬೇಕು. ಅದೇ ಯಾವಾಗ ದಂಡಧಾರಿಯಾಗಿ ಯಮರಾಜನು ಈ ಶರೀರದ ಅಂತ್ಯದಲ್ಲಿ ಬರುವಾಗ, ತುಂಬಾ ಪ್ರೇಮದಿಂದಲೂ, ಭಕ್ತಿಯಿಂದಲೂ, ಗದ್ಗದ ಸ್ವರದಿಂದ ಹೇ ಗೋವಿಂದ! ಹೇ ಮಾಧವಾ! ಹೇ ದಾಮೋದರಾ ಎಂಬ ಈ ಮಹಾಮಂತ್ರವನ್ನು ಉಚ್ಚರಿಸುತ್ತಲೇ ಇರು.

(ಮುಂದುವರಿಯುವುದು)

ಸ್ಥಾಪನೆ : 1977 ದೂರವಾಣಿ : 2521607
**ಜನತಾ ಕೋ - ಆಪರೇಟಿವ್ ಬ್ಯಾಂಕ್ ಲಿ. ಉಡುಪಿ**
★ ಸಂಜೆ ಮತ್ತು ಭಾನುವಾರ ಬ್ಯಾಂಕಿಂಗ್ ಸೇವೆ
★ ಠೇವಣಿಗಳಿಗೆ 1% ಅಧಿಕ ಬಡ್ಡಿ
**ಸ್ನೇಹಮಯ ಸೌಹಾರ್ದ ಸೇವೆಯೇ ಬ್ಯಾಂಕಿನ ಧ್ಯೇಯ**



# ಶ್ರೀ ರಾಘವೇಂದ್ರ ತೀರ್ಥರು

**ಕಾಕೋಳು ಸರೋಜಮ್ಮ**



**ಭ**ಕುತರ ಪಾಲಿಗೆ ಗುರುವಿನ ಸ್ಥಾನ ಹಿರಿದಾದುದು. ತಂದೆ ತಾಯಿಗಳಾದರೋ ದೇಹಕ್ಕೆ ಕಾರಣರಾದವರು. ಗುರುಗಳು ಆತ್ಮೋದ್ಧಾರಕ್ಕೆ ಕಾರಣರಾಗುವರು. ಅಂತಲೇ ದಾಸ ಶ್ರೇಷ್ಠರಾದ ಪುರಂದರದಾಸರು **"ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ"** ಎಂದು ಸಾರಿದ್ದಾರೆ. ದೇವತೆಗಳು ಭೂಮಿಯಲ್ಲಿ ಅವತರಿಸಿ ಸಜ್ಜನರನ್ನು ರಕ್ಷಿಸಿ ಭಗವದನುಗ್ರಹಕ್ಕೆ ಪಾತ್ರರಾಗುವುದು ಶಾಸ್ತ್ರಗಳಲ್ಲಿ ಕಂಡುಬಂದಿರುವ ವಿಷಯ. ಕೆಲವು ಬಾರಿ ಭಗವಂತನು ತನ್ನ ಅಂಶವನ್ನು ಕೆಲವರಲ್ಲಿಟ್ಟು ತನ್ನ ನಿಯಮಿತ ಕಾರ್ಯಗಳಿಗೆ ನಿಯಮಿಸಿರುತ್ತಾನೆ. ಅಂಥವರು ವಿಭೂತಿಮಹತ್ವವನ್ನು ಪಡೆದ ಮಹಾಪುರುಷರಾಗಿ ಭಗವಂತನ ಕಾರ್ಯಸಾಧಕರಾಗಿ ಮೆರೆಯುತ್ತಾರೆ. ಹೀಗೆ ಅವತಾರ ಮಾಡಿದ ದೇವತೆಗಳಲ್ಲಿ ಒಬ್ಬರಾದ ಮಹನೀಯರು ಶ್ರೀ ಪ್ರಹ್ಲಾದರಾಜರು. ಶ್ರೀ ವ್ಯಾಸರಾಜರೇ ಶ್ರೀ ರಾಘವೇಂದ್ರ ಸ್ವಾಮಿಗಳೆಂದು ಪ್ರಸಿದ್ಧರಾಗಿರುವರು. ಇಂತಹ ದೇವಾಂಶಸಂಭೂತರನ್ನು ನಾವು ಸೇವಿಸಿ ಅವರ ಪರಮಾನುಗ್ರಹಕ್ಕೆ ಪಾತ್ರರಾಗುವುದು ಮುಕ್ತಿಯೋಗ್ಯರ ಕರ್ತವ್ಯದಲ್ಲಿ ಒಂದಾದ ವಿಷಯ.

## ವೆಂಕಟನಾಥರ ಜನನ – ಬಾಲ್ಯ

ಕದಂಬ, ರಾಷ್ಟ್ರಕೂಟ, ಚಾಲುಕ್ಯ, ದೇವಗಿರಿ, ವಿಜಯನಗರ ಸಾಮ್ರಾಜ್ಯದಲ್ಲಿ ಉನ್ನತ ಪದವಿಯಲ್ಲಿದ್ದು ಖ್ಯಾತಿಯ ಉತ್ತುಂಗಕ್ಕೇರಿದ ಅರವತ್ತೊಕ್ಕಲು ಮನೆತನದ ತಮ್ಮಣ್ಣ ಭಟ್ಟರು ಮತ್ತು ಗೋಪೀಕಾಂಬಾ ಇವರಿಗೆ ತಿರುಪತಿಯ ವೆಂಕಟೇಶ್ವರನ ವರಪುತ್ರನಾಗಿ ಜನಿಸಿದರು ವೆಂಕಟನಾಥರು. ಬಾಲ್ಯದಲ್ಲಿ ತಂದೆತಾಯಿಗಳನ್ನು ಕಳೆದುಕೊಂಡ ಅವರಿಗೆ ಅವರ ಭಾವನವರಾದ ಲಕ್ಷ್ಮೀನರಸಿಂಹಾಚಾರ್ಯರು ವಿದ್ಯೆ ಹೇಳತೊಡಗಿದರು. ಘನವಿದ್ವಾಂಸರಾದ

**ಚಂದ್ರಿಕಾ, 22, 16ನೇ ಅಡ್ಡರಸ್ತೆ, 6ನೇ ದೇವಾಲಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು – 03**
✆ : 23315812



ವೆಂಕಟನಾಥರ ನಾಲಗೆಯ ಮೇಲೆ ಶಾರದೆಯು ನಲಿದಾಡತೊಡಗಿದಳು. ಸರಸ್ವತಿಯ ಜೊತೆಯಲ್ಲಿ ಚತುರ್ಮುಖ ಬ್ರಹ್ಮದೇವರೂ ಬಂದು ನೆಲೆಸಿದರು. ವೆಂಕಟನಾಥರ ನೇತ್ರಗಳು ಶ್ರೀ ಹರಿಯ ಅವತಾರವೆನ್ನಿಸಿದ ಮತ್ಸ್ಯದಂತೆ ವಿಶಾಲವಾಗಿದ್ದು, ಶ್ರೀ ಹರಿಯೇ ವೇದಗಳನ್ನು ವೆಂಕಟನಾಥರಲ್ಲಿ ನೆಲೆಸಿದ ಬ್ರಹ್ಮನಿಗೆ ಮತ್ತು ಮೇಧಾವಿಯಾದ ವೆಂಕಟನಾಥರಿಗೂ ಬೋಧಿಸಲು ಮತ್ಸ್ಯರೂಪದಿ ಬಂದನೆಂಬಂತೆ ಭಾಸವಾದಂತಿತ್ತು. ಕಿವಿಗಳು ಓಂಕಾರದಂತೆ ಕಂಡು ಬರುತ್ತಿದ್ದವು. ಬಾಲ್ಯದಲ್ಲಿಯೇ ಜ್ಞಾನಾರ್ಜನೆಯನ್ನು ಮಾಡಿ ತಪೋನಿಷ್ಠಗರಿಷ್ಠನಾಗಲು ಬೇಕಾದ ಸಾಧನೆಗಳನ್ನು ಮಾಡಿಕೊಳ್ಳತೊಡಗಿದರು ವೆಂಕಟನಾಥರು. ಭಾವನವರ ಬಾಯಿಯಿಂದ ಬರುತ್ತಿದ್ದ ಬ್ರಹ್ಮಸೂತ್ರ, ಭಗವದ್ಗೀತಾ ಉಪನಿಷತ್ ಗ್ರಂಥಗಳಲ್ಲಿಯ ಜಟಿಲ ವಿಷಯಗಳನ್ನೆಲ್ಲಾ ಸ್ಫುಟವಾಗಿ ವಿಶದೀಕರಿಸಿ ಕೇಳತೊಡಗಿದರು. ಕ್ರಮೇಣ ವ್ಯಾಕರಣ, ಪಾಂಡಿತ್ಯ, ಮೀಮಾಂಸ ಪ್ರಭುತ್ವ, ನ್ಯಾಯನೈಪುಣ್ಯ, ವೇದ ವೈದುಷ್ಯಗಳಲ್ಲಿ ತಾನೇ ತಾನಾಗಿ ವಿಜೃಂಭಿಸತೊಡಗಿದಾಗ ಗುರುಗಳ ಅಂತಃಕರಣ, ಸಾರ್ಥಕತೆಯ ಭಾವನೆಯಿಂದ ತುಂಬಿ ಬಂದಿತ್ತು. ಅನಂತರದಲ್ಲಿ ಪ್ರಮಾಣ ಪದ್ಧತಿ ಮೊದಲು ಮಾಡಿ ಶ್ರೀ ಮನ್ನ್ಯಾಯಸುಧಾ ಅಭ್ಯಸಿಸಲು ಶ್ರೀ ಗುರುಗಳಾದ ಶ್ರೀ ಸುಧೀಂದ್ರತೀರ್ಥರಲ್ಲಿಗೆ ಬಂದರು.

ಶ್ರೀ ಸುಧೀಂದ್ರ ಸ್ವಾಮಿಗಳು ವಿಜಯೀಂದ್ರರ ಸಮಾರಾಧನೆಯ ಸಮಯದಲ್ಲಿ ಬಾಲಕ ವೆಂಕಟನಾಥನ ತೇಜಸ್ಸನ್ನು ಕಂಡು ಮನದಲ್ಲೇ ಸಂಕಲ್ಪಿಸಿದರು. ಅವರ ಸಂಕಲ್ಪಕಾರ್ಯೋನ್ಮುಖವಾಗುವ ಕಾಲ ಒದಗಿಬಂದಂತೆ ಶ್ರೀ ವೆಂಕಟನಾಥರೇ ಅವರಲ್ಲಿಗೆ ಬಂದರು. ಹಗಲು ಗುರುಗಳಿಂದ ಕೇಳಿದ ಶ್ರೀ ಮನ್ನ್ಯಾಯಸುಧಾ ಗ್ರಂಥದ ಪಾಠದ ಭಾಗವನ್ನು ರಾತ್ರಿಯವೇಳೆ ಮಂಟಪದಲ್ಲಿ ತರಗಲೆಗಳನ್ನು ಹತ್ತಿಸಿ ಅದರ ಬೆಳಕಿನಲ್ಲಿ ಬರೆದಿಡುತ್ತಿದ್ದ ವೆಂಕಟನಾಥರು ಜೊತೆಗೇ ಶ್ರೀ ಜಯತೀರ್ಥರ ಶ್ರೀ ಮನ್ನ್ಯಾಯಸುಧಾ ಗ್ರಂಥಕ್ಕೆ ಟಿಪ್ಪಣಿಯನ್ನೂ ಬರೆದಿಡುತ್ತಿದ್ದರು. ಈ ವಿಷಯ ಸುಧೀಂದ್ರತೀರ್ಥರಿಗೆ ತಿಳಿದು ಬಂದುದು ಹೀಗೆ.

## ವೆಂಕಟನಾಥರಿಗೆ ಸುಧೀಂದ್ರತೀರ್ಥರ ಅನುಗ್ರಹ

ಒಂದು ರಾತ್ರಿ ಶ್ರೀಗಳವರು ಕೈಕಾಲು ತೊಳೆಯಲು ವೆಂಕಟನಾಥರಿದ್ದ ಮಂಟಪದ ಬಳಿ ಇದ್ದ ಕಾವೇರಿ ನದಿಯ ಬಳಿಗೆ ಬಂದಾಗ ಮಂಟಪದಲ್ಲಿ ಮಂದವಾದ ಬೆಳಕು ಅವರ ಗಮನ ಸೆಳೆದಾಗ ಶ್ರೀಗಳು ಇಲ್ಲಿಗೇ ಬಂದರು. ಮೈಮೇಲೆ ಎಚ್ಚರವಿಲ್ಲದಂತೆ ಚಳಿಯಲ್ಲಿ ನಡುಗುತ್ತಾ ಮಲಗಿದ್ದ ವೆಂಕಟನಾಥರನ್ನೂ ಅವರ ಮಗ್ಗುಲಿಗೇ ಗಾಳಿಗೆ ಚಲ್ಲಾಪಿಲ್ಲಿಯಾಗಿದ್ದ ಸುಧಾ ಗ್ರಂಥದ ವ್ಯಾಖ್ಯಾನದ ಹಾಳೆಗಳನ್ನೂ ನೋಡಿ ಸಂಕಟದಿಂದ ತಮ್ಮ ಮೈ ಮೇಲಿನ ಶಾಲನ್ನು ವೆಂಕಟನಾಥರಿಗೆ ಹೊದ್ದಿಸಿ ಅಲ್ಲಿಂದ ಕದಲಿದರು. ಮರುದಿನ ವೆಂಕಟನಾಥರು ಶ್ರೀಗಳವರ ಶಾಲನ್ನು ತಮ್ಮ ಮೈ ಮೇಲೆ ಕಂಡು ಗಾಬರಿಯಿಂದ ಶ್ರೀಗಳವರ ಗಮನಕ್ಕೆ ಅದನ್ನು

ತರಲು, ಅಲ್ಲಿಗೆ ಬಂದಾಗ ವೆಂಕಟನಾಥರು ಶ್ರೀಗಳವರ ಶಾಲು ಕದ್ದಿದ್ದಾರೆ ಎಂಬ ಆರೋಪವನ್ನು ಅವರ ಮೇಲೆ ಹಾಕಲು ಅವರ ಸಹಪಾಠಿಗಳು ಕಾದಿದ್ದೂ ಆಯಿತು, ಶ್ರೀಗಳೇ ಹಿಂದಿನ ರಾತ್ರಿಯ ಪ್ರಕರಣವನ್ನು ಎಲ್ಲರಿಗೂ ವಿವರಿಸಿ, ತಾವೇ ಅವರಿಗೆ ಶಾಲು ಹೊದ್ದಿಸಿದುದಾಗಿ ನುಡಿದರಲ್ಲದೆ, ದಿವಾನರಿಂದ ಹೊಸ ಶಾಲೊಂದನ್ನು ತರಿಸಿ ಹೊದ್ದಿಸಿ ವೆಂಕಟನಾಥರನ್ನು ಕೊಂಡಾಡಿ ಅವರಿಗೆ **‘ಪರಿಮಳಾಚಾರ್ಯ’** ಎಂಬ ಅನ್ವರ್ಥ ಬಿರುದನ್ನು ಅನುಗ್ರಹಿಸಿದರು. ಗುರುಗಳ ಅನುಗ್ರಹ ಅವರ ಮೇಲೆ ಎಷ್ಟಿತ್ತೆಂಬುದನ್ನು ಈ ಪ್ರಸಂಗದಿಂದ ತಿಳಿಯಬಹುದು.

ಶ್ರೀ ಸುಧೀಂದ್ರತೀರ್ಥರಲ್ಲಿ ಸಚ್ಛಾಸ್ತ್ರವನ್ನು ಅಭ್ಯಾಸ ಮಾಡಿದ ವೆಂಕಟನಾಥರು, ಸಮಸ್ತ ಗ್ರಂಥಗಳ ಅಧ್ಯಯನ ಮಾಡಿದರು. ಜೊತೆಗೆ ಅನೇಕ ಶಿಷ್ಯರಿಗೆ ವೇದಾಂತ, ವ್ಯಾಕರಣ, ಕಾವ್ಯ ಸಾಹಿತ್ಯ, ಮೀಮಾಂಸ ಹಾಗೂ ತರ್ಕಶಾಸ್ತ್ರಗಳ ಪಾಠ ಹೇಳಿದರು. ಗುರುಗಳ ಅತ್ಯಾದರ ಪ್ರೀತಿಗೆ ಪಾತ್ರರಾಗಿ, ಗುರುಗಳಿಂದ **ಮಹಾಭಾಷ್ಯಾಚಾರ್ಯ** ಎಂಬ ಪ್ರಶಸ್ತಿಯನ್ನು ಪಡೆದರು. ವೆಂಕಟೇಶನ ವರಪ್ರಸಾದದಿಂದ ಜನಿಸಿದ ವೆಂಕಟನಾಥರು ವಿಶ್ವಪ್ರಾಜ್ಞತೈಜಸವೆಂಬ ಮಹಾವಿಷ್ಣುವಿನ ರೂಪಗಳನ್ನು ಹೊತ್ತು ಸಾಕ್ಷಾತ್ ಸರಸ್ವತಿಯೇ ಅವರಿಗೆ ಸ್ವಪ್ನರೂಪದಲ್ಲಿ ಗೋಚರಿಸಿ, ಶ್ರೀ ಸುಧೀಂದ್ರತೀರ್ಥರ ಆಶಯದಂತೆ ಆಶ್ರಮ ಸ್ವೀಕರಿಸು, ನಿನ್ನಿಂದ ಧರ್ಮ, ಸಂಸ್ಕೃತಿಗಳು ಬೆಳಗಬೇಕಾಗಿವೆ. ಜನತೆಗೆ ಶಾಂತಿ ಸುಖ ಸಮಾಧಾನಗಳನ್ನು ನೀಡಿ ಎಲ್ಲರ ಕಣ್ಣೊರೆಸಬೇಕಾಗಿರುವ ನಿನ್ನಿಂದ ಲೋಕಕಲ್ಯಾಣವಾಗಬೇಕಾಗಿದೆ ಎಂದ ಮೇಲೆ ವೆಂಕಟನಾಥರು ಸಾಕ್ಷಾತ್ ಶ್ರೀಹರಿಯ ಪರಮಾನುಗ್ರಹಕ್ಕೆ ಪಾತ್ರರಾದರು.

## ಕನಕದಾಸರ ಭೇಟಿ

ಶ್ರೀಪಾದಂಗಳವರು ಸಂಚಾರ ಮಾಡುತ್ತ ರಾಯಚೂರು ಜಿಲ್ಲೆ ಮಾನ್ವಿ ಹತ್ತಿರ ಪ್ರಾಣದೇವರ ಗುಡಿಗೆ ಬಂದರು. ಆಗ ಚಾತುರ್ಮಾಸ್ಯವ್ರತ ಆರಂಭವಾಗಿತ್ತು. ಅಲ್ಲಿ ಪ್ರಾತಃರಾಹ್ನಿಕಗಳು ಮುಗಿದ ತರುವಾಯ ಗ್ರಂಥರಚನೆಯಲ್ಲಿ ತೊಡಗಿದ್ದ ಶ್ರೀಗಳು ದೂರದಲ್ಲಿ ಗರುಡಗಂಬದ ಹತ್ತಿರ ನಿಂತಿದ್ದವನನ್ನು ನೋಡಿ ಮುಗುಳುನಗೆ ನಕ್ಕರು. ‘ಇದೇನು ಇಲ್ಲೆಲ್ಲಿ ಬಂದೆಯೋ’ ಎಂದರು. ‘ಹೌದು ಬುದ್ಧಿ, ಬುದ್ಯೋರು ಬಂದದ್ದು ಕೇಳಿ ಬಂದೆ, ಹಿಂದಿನಂತೆ ನನ್ನಗೊಂದಿಷ್ಟು ಗತಿಕಾಣಿಸಪ್ಪ’

‘ಆಗಲಿ ನಾಳೆ ದೇವರಿಗೇನಾದರೂ ಸೇವೆಮಾಡಿಹೋಗು’. ಅವನು ಸಂತೋಷದಿಂದ ಹೊರಟು ಹೋದ. ಮರುದಿನ ತನ್ನಲ್ಲಿದ್ದ ಒಂದು ಹಿಡಿ ಸಾಸಿವೆಯನ್ನು ತಂದು ಭಕ್ತಿಯಿಂದ ಶ್ರೀಗಳವರ ಮುಂದೆ ದೂರದಲ್ಲಿಟ್ಟು ಉದ್ಧರಿಸಬೇಕೆಂದು ಬೇಡಿಕೊಂಡ. ಅವನು ಭಕ್ತಿಯಿಂದ ತಂದಿತ್ತ ಸಾಸಿವೆ ಆಷಾಢ ಮಾಸ ವ್ರತಕಾಲವಾದರೂ ನಿಷಿದ್ಧವೆಂದು ತಿಳಿದೂ ಭಕ್ತವಾತ್ಸಲ್ಯದಿಂದ ಶ್ರೀಗಳವರು ಅದನ್ನು ಅಂದಿನ ನೈವೇದ್ಯಕ್ಕೆ ಉಪಯೋಗಿಸಲು ಆಜ್ಞೆ ಮಾಡಿದರು. ಎಲ್ಲರ ಊಟವಾದ ಮೇಲೆ ಪ್ರಸಾದ ಸ್ವೀಕರಿಸಿ, ಹರಿನಾಮ ಸ್ಮರಣೆ ಮಾಡುತ್ತ ದೇಹವನ್ನು ತ್ಯಜಿಸಿ ಸದ್ಗತಿಯನ್ನು ಪಡೆದರು. ಹಿಂದೆ ವ್ಯಾಸರಾಜರಾದಾಗ ಯಮಾಂಶ



ಸಂಭೂತರಾದ ಕನಕದಾಸರೇ ಈಗ ಮತ್ತೆ ಶ್ರೀಗಳವರ ದರ್ಶನ ಪ್ರಸಾದ ಭಾಗ್ಯ ಪಡೆದು ಮುಕ್ತರಾದರು.

## ಬೃಂದಾವನ ಪ್ರವೇಶ

ರಾಘವೇಂದ್ರ ಸ್ವಾಮಿಗಳು ಮರೆಯಾದ ರೀತಿ ಅಸಾಧಾರಣವಾಗಿದ್ದಿತು. ಆದರೆ ರಾಘವೇಂದ್ರಸ್ವಾಮಿಗಳು ದೇಹತ್ಯಜಿಸುವ ನಿರ್ಧಾರವನ್ನು ತಾವೇ ಮಾಡಿ, ಅದಕ್ಕೆ ತಕ್ಕ ವೇಳೆಯನ್ನೂ ತಾವೇ ನಿಶ್ಚಯಿಸಿ ಯೋಗ ಪದ್ಧತಿಯಿಂದ ಮರೆಯಾದುದೇ ವಿಶೇಷ. ಅವರ ದೇಹದಲ್ಲಿ ಮುಪ್ಪಿನ ಛಾಯೆ ಇರಲಿಲ್ಲ. ಯಾವ ಕಾಯಿಲೆಯೂ ಇರಲಿಲ್ಲ. ಭಗವಂತನ ಆದೇಶದಂತೆ ತಮ್ಮ ಕಾರ್ಯೋದ್ದೇಶ ಮುಗಿಯಿತೆಂದು ನಿರ್ಧರಿಸಿ ನಗುನಗುತ್ತಾ ಧ್ಯಾನದಲ್ಲಿ ಕುಳಿತು ಬೃಂದಾವನಸ್ಥರಾದರು. ಅಂದಿನಿಂದ ಮಂಚಾಲೆ ಮಂತ್ರಾಲಯವೆಂದು ಪ್ರಸಿದ್ಧವಾಯ್ತು. ಯಾರೂ ಕಾಣದ ಕುಗ್ರಾಮ ದೇಶದಲ್ಲೆಲ್ಲ ಪ್ರಸಿದ್ಧ ಯಾತ್ರಾ ಸ್ಥಳವಾಯಿತು. ಸಶರೀರ ಬೃಂದಾವನ ಪ್ರವೇಶ ಮಾಡಿದ ರಾಘವೇಂದ್ರ ಸ್ವಾಮಿಗಳ ಸನ್ನಿಧಾನವು ಅಲ್ಲಿ ಏಳುನೂರು ವರ್ಷಗಳ ಕಾಲ ಇರುವುದೆಂಬ ನಂಬಿಕೆ ಇದೆ. ಈಗಲೂ ಪ್ರಪಂಚದ ಮೂಲೆ ಮೂಲೆಗಳಿಂದ ಸಾವಿರಾರು ಮಂದಿ ಭಕ್ತರು ಮಂತ್ರಾಲಯಕ್ಕೆ ಬರುತ್ತಾರೆ.

ಈಗಿನ ಸಂದರ್ಭದಲ್ಲಿ ಅಂಥ ಮಹಾಪುರುಷರು ಏನು ಮಾಡಿದ್ದರು. ಎಂಥ ಬಾಳನ್ನು ಬಾಳಿದ್ದರು ಎಂದು ತಿಳಿಯುವ ಪ್ರಯತ್ನವಾದರೂ ನಡೆಯುವುದು ಮುಖ್ಯ. ಹಿರಿಯರು ಬಾಳಿದ ರೀತಿಯಲ್ಲೇ ಸಮಾಜಕ್ಕೊಂದು ನೀತಿಪಾಠ ಇರುತ್ತದೆ. ಕನಿಷ್ಠ ಆ ಮಹಾ ಆದರ್ಶದ, ಸಾತ್ವಿಕತೆಯ, ನಿಷ್ಠೆಯ ಪ್ರಭಾವವಾದರೂ ನಮ್ಮ ಮನಸ್ಸಿನಲ್ಲಿ ಅಚ್ಚಳಿಯದೆ ನಿಲ್ಲುವಂತಾದರೆ ಗುರಿ ತಪ್ಪಿದ ಜೀವನದಲ್ಲಿ ಹಾಯಿ ಸಾಗಿಸುವ ಈಗಿನ ನಾಗರಿಕತೆಯಲ್ಲಿ ಆಗೊಮ್ಮೆ ಈಗೊಮ್ಮೆಯಾದರೂ ನಮ್ಮ ಈ ಅತಂತ್ರತೆಯ ಬಗ್ಗೆ ನಾವು ನಿರ್ಮಲ ಮನಸ್ಸಿನಿಂದ ಯೋಚಿಸುವುದು ಸಾಧ್ಯವಾದೀತು. ಆತ್ಮ ನಿರೀಕ್ಷೆಗೆ ಎಡೆ ಮಾಡಿಕೊಳ್ಳುವ ಇಂಥ ಮಹಾನುಭಾವರ ಜೀವನ - ಹೆಜ್ಜೆ ಎಲ್ಲರ ಜೀವನಕ್ಕೆ ಒಂದು ಮಾರ್ಗದರ್ಶನವೂ ಹೌದು. ನಮ್ಮ ಒಳಿತಿಗಾಗಿ ನಾವು ಈ ಹಾದಿಯಲ್ಲಿ ನಡೆದು ಗುರುಗಳ ಪರಮಾನುಗ್ರಹಕ್ಕೆ ಪಾತ್ರರಾಗುವಂತೆ ಪ್ರಯತ್ನಿಸಬೇಕಾದುದು ನಮ್ಮ ಕರ್ತವ್ಯ.

MODERN INTERIORS & FURNITURE
Ph.: 2523504
Opp. : Sanskrit College, Maruthi Veethika, Udupi - 576 101
Specialists in :
• Interior Decoration work and Furnishings.
• Steel & Wooden Furniture. • Sofa sets of different designs
• Computer Furniture and chairs of different Designs
• Kurlon & Duroflex Mattress and many more.



# ಆಸಕ್ತಿ - ಯುಕ್ತಿ

ಎ. ಬಿ. ಕುಂಜಾರ್, ಬೆಂಗಳೂರು

ಆಸಕ್ತಿಯು ದ್ವೈತವಾಗಿದೆ - ಕರ್ಮಾಸಕ್ತಿ ಮತ್ತು ಕರ್ಮಫಲಾಸಕ್ತಿ ಎಂದು ಇಬ್ಬಗೆ ಇದೆ. ಕರ್ಮಾಸಕ್ತಿ ಅಂತರಂಗದ ಅನುಭೂತಿಗೆ ಅನುಕೂಲವಾಗಿದ್ದರೆ ಫಲಾಸಕ್ತಿಯು ಬಹಿರಂಗದ ಭೋಗ ಸುಖಕ್ಕೆ ಹೆಬ್ಬಾಗಿಲಾಗುತ್ತದೆ. ಒಳಗಿನ ಆನಂದ ಒಂದರಿಂದ, ಹೊರಗಿನ ಸುಖ ಇನ್ನೊಂದರಿಂದ. ಕರ್ಮಾಸಕ್ತಿ ಸದಾನಂದ ದರ್ಶನಕ್ಕೆ ದಾರಿ ಆಗಬಲ್ಲುದಾದರೆ ಫಲಾಸಕ್ತಿಯು ನೈರಾಶ್ಯಕ್ಕೆ ನೇರದಾರಿ ತೋರಬಲ್ಲುದು.

ಬಯಕೆಯ ತೀವ್ರತೆಯನ್ನು ಆಸಕ್ತಿ ಎನ್ನುವುದು, ಅದು ಕರ್ಮದಲ್ಲಿ ಅಥವಾ ಫಲದಲ್ಲಿ ರೂಢವಾದ ಗಾಢ ಅಭಿರುಚಿ ಎಂದರೂ ಸರಿ. ಕರ್ಮದ ಮುನ್ನಡೆಯಲ್ಲಿ ತೋರುವ ಉತ್ಸಾಹ ಮತ್ತು ಉದ್ದಕ್ಕೂ ಎದ್ದು ತೋರುವ ಲವಲವಿಕೆಯೂ ಹೌದು.

ಆಸಕ್ತಿ ಬೆಳಕು ಇದ್ದಂತೆ. ಕರ್ಮಪಥಕ್ಕೆ ನೆರವಾಗುವ ಕೈದೀಪ ಅದು. ಕರ್ಮೇಕಾಗ್ರತೆಯಲ್ಲಿ ಏರಿಕೆಯಾಗಲು ಅದು ಬಲು ಉಪಯುಕ್ತ. ನಿರಾಸಕ್ತಿ ಎಂದರೆ ಕತ್ತಲು. ಅದರಿಂದ ಎತ್ತಲೂ ಸುತ್ತಲಾಗದು. ಲಕ್ಷ್ಯಕ್ಕೆ ಲಗ್ಗೆ ಹಾಕಲಾಗದು. ಅಲ್ಪ ಎತ್ತರಕ್ಕೂ ಏರಲಾಗದು. ಬಯಕೆ ಇರುವುದು ಸಹಜ. ಆದರೆ ಅನ್ಯಥಾ ಬಯಕೆ ದೂರ ಇರಬೇಕಾದುದು ಅಷ್ಟೆ ನಿಜ. ಕರ್ತವ್ಯಕರ್ಮಕ್ಕೆ ವಿರುದ್ಧವಾದುದು ಅನ್ಯಥಾ ಬಯಕೆ - ರಾಜಕಾರಣಿಗೆ ಸನ್ಯಾಸಧರ್ಮ, ಸನ್ಯಾಸಿಗೆ ರಾಜಕರ್ಮ ಅನ್ಯಥಾ ಕರ್ಮವಾಗುತ್ತದೆ. ಅನ್ಯಥಾ ಕರ್ಮಕ್ಕೆ ಒತ್ತು ಎಂದರೆ ಕರ್ತವ್ಯ ಕರ್ಮಕ್ಕೆ ಕುತ್ತು - 'ಸ್ವಧರ್ಮೇ ನಿಧನಮ್ ಶ್ರೇಯಃ' ಎನ್ನುವ ಗೀತಾಚಾರ್ಯನ ನುಡಿಯ ಎಚ್ಚರ ಇಲ್ಲಿ ಅಗತ್ಯ.

ಬಯಕೆ ಕರ್ಮಪರವಾಗಿ ಉಳಿಯಬೇಕು. ಅದು ಕರ್ತವ್ಯದ ನೆಲೆಗೆ ಇಳಿಯಬೇಕು. ಕರ್ಮಫಲ ನಿರಪೇಕ್ಷವಾಗಿ ಆಸಕ್ತಿ ಬಲಿಯಬೇಕು. ಕರ್ತವ್ಯ ನಿರ್ವಹಣೆಯಲ್ಲಿ ಸಂತೃಪ್ತಿ ತಳೆಯಬೇಕು. ಪ್ರಾಪ್ತವಾಗುವ ಅನಿರ್ವಚನೀಯ ಆನಂದವನ್ನು ಚೆನ್ನಾಗಿ ಸವಿಯಬೇಕು.

ಅನೇಕರ ದೈಹಿಕ ಯೌವನ ಕಳೆದುಹೋಗುತ್ತಿದ್ದರೂ ಮಾನಸಯೌವನ ಉಳಿದುಕೊಳ್ಳುವುದುಂಟು. ಭೋಗ ಶಕ್ತಿ ಇಳಿದುಹೋಗಿದ್ದರೂ ಭೋಗಾಸಕ್ತಿಯನ್ನು ತಳೆದುಕೊಳ್ಳುವವರುಂಟು. ಆಸಕ್ತಿಯನ್ನು ಕಾಲೋಚಿತವಾಗಿ ನ್ಯಾಯೋಚಿತ ನೆಲೆಯಲ್ಲಿ ಬಳಕೆಯಾಗುವಂತೆ ಬೆಳೆಸಿಕೊಳ್ಳಬೇಕು; ಬೆಳೆಸಿದ್ದನ್ನು ಉಳಿಸಿಕೊಳ್ಳಲೂ ಬೇಕು.

ಅಶೋಭನದಲ್ಲಿ ಶೋಭನ ಕಾಣುವುದು ರಾಗ. ರಾಗಾವೇಶದಿಂದಲೂ ಆಸಕ್ತಿ ಸಶಕ್ತ

126/A, 1ನೇ ಮಹಡಿ, 1ನೇ ಕ್ರಾಸ್, ಕಾಳಪ್ಪ ಬ್ಲಾಕ್, ಶ್ರೀನಗರ, ಬೆಂಗಳೂರು – 560 050. ದೂ. 26601259



ಆಗುವುದಿದೆ. ಸದಭಿರುಚಿಯ ಸತ್ಕಾರ್ಯನಿರತರೂ ಪ್ರಸಿದ್ಧಿಯ ಬೆನ್ನು ಹತ್ತುವುದಿದೆ. ಪ್ರಸಿದ್ಧಿಗಾಗಿ ತೀವ್ರ ಆಸಕ್ತಿ ತೋರುವುದಿದೆ. ಸಿದ್ಧಿಯಿಂದ ಬರುವ ಆನಂದಕ್ಕಿಂತ ಪ್ರಸಿದ್ಧಿ ತರುವ ಆನಂದಕ್ಕೆ ಅಧಿಕ ತವಕಪಡುವುದಿದೆ.

ಅಶೋಭನದಲ್ಲಿ ಅಶೋಭನ ಗುರುತಿಸುವುದು ವಿರಾಗ. ಇದರ ಭಾವವೇ ವೈರಾಗ್ಯ. ಲೌಕಿಕ ಫಲದಲ್ಲಿ ಆನಂದ ಅನೇಕರಿಗೆ. ಕರ್ಮಾಚರಣೆಯಲ್ಲೇ ಸದಾನಂದ ಕೆಲವರಿಗೆ. ಲೌಕಿಕ ಫಲದಲ್ಲಿ ವೈರಾಗ್ಯ ಎಂದರೆ ಅದು ಸುತರಾಂ ಬೇಡವೆಂದಲ್ಲ; ಅದರಲ್ಲಿ ಆಸಕ್ತಿ ನಾಸ್ತಿ ಎಂದರ್ಥ. ಕೀರ್ತಿ ಆನಂದ ಒದಗಿಸುವುದು ಸಹಜ. ಬಂದುದನ್ನು ಉಣ್ಣುವುದು ಮಾನವ ಧರ್ಮ ಕೂಡ. ಆದರೆ ಕೀರ್ತಿ ಪ್ರಾಪ್ತಿಗಾಗಿ ಆಸಕ್ತಿವಹಿಸಿ ಪರದಾಡದೆ ಇರುವುದೇ ವೈರಾಗ್ಯ.

ಮನಸ್ಸು ಮರ್ಕಟನಂತೆ. ಕ್ಷಣಕ್ಷಣಕ್ಕೂ ಲಾಗ ಹಾಕಿ ಜಾಗ ಕದಲಿಸುವುದು ಅದರ ನಿಯತಿ. ಅವಿಶ್ರಾಂತ ಕರ್ಮಕ್ಕೆ ಇದು ಅಡ್ಡಿ. ಮನಸ್ಸನ್ನು ಒಂದೆಡೆ ಕೂಡಿಹಾಕುವ ಶಕ್ತಿ ಆಸಕ್ತಿಗಿದೆ. ಏಕಾಗ್ರತೆ ತಂದುಕೊಡುವ ಯುಕ್ತಿಯೂ ಅದಕ್ಕಿದೆ.

ನೆಲೆಯೊಂದರಲ್ಲಿ ಕೆಲಕಾಲ ಕದಲದಿರುವ ಮನೋಸ್ಥಿತಿಯನ್ನು ಏಕಾಗ್ರತೆ ಎನ್ನುವುದು. ಒಂದು ಕರ್ಮದಲ್ಲಿ ಓರ್ವ ನಿರತ. ಅನ್ಯ ಪ್ರಚೋದನೆಗಳಿಗೆ ಪ್ರತಿಕ್ರಿಯೆ ಕೊಡದವನು ಆತ. ಇಂತೆಂದರೆ ಅವನು ಏಕಾಗ್ರತೆಯಲ್ಲಿ ಇರುವಾತ ಎಂದರ್ಥ.

ಟೀವಿ ವೀಕ್ಷಣೆಯಲ್ಲಿರುವ ಮಾತೆಗೆ ಮಗುವಿನ ಅಳು ಅಥವಾ ಫೋನಿನ ರಿಂಗಣ ತಿಳಿಯಲಿಲ್ಲ ಎಂದರೆ ಅವಳದು ಏಕಾಗ್ರತೆಯ ಸ್ಥಿತಿ ಎನ್ನುವುದು ಇಲ್ಲಿ ಮುಖ್ಯ. ಧಾರಾವಾಹಿಯಲ್ಲಿ ನೆಲೆಗೊಂಡ ಆಸಕ್ತಿ ಅವಳ ಏಕಾಗ್ರತೆಯ ಶಕ್ತಿ.

ಆಸಕ್ತಿ ಮತ್ತು ಏಕಾಗ್ರತೆ ಭಗವದುಪಾಸನೆಯಲ್ಲಿ, ಧ್ಯಾನದಲ್ಲಿ, ಭಜನೆಯಲ್ಲಿ, ಅವನ ನಲ್ನುಡಿಯ ದರ್ಶನ ಗ್ರಂಥಗಳ ಪಾರಾಯಣದಲ್ಲಿ ಬೆಳೆದುಕೊಳ್ಳುವುದು ಹಾಗೂ ಧಾರ್ಮಿಕ ವಿಧಿ-ವಿಧಾನಗಳ ಆಚರಣೆಯಲ್ಲಿ ನೆಲೆಗೊಳ್ಳುವುದು ಅಧ್ಯಾತ್ಮಪರತೆಯಾಗುತ್ತದೆ. ಸಾರ್ಥಕ ಎಂದೆನಿಸುತ್ತದೆ.

ದುರ್ಗಾಪೂಜೆ ಮುಹೂರ್ತಕ್ಕೆಂದು ಸಂಕಲ್ಪ - ವಿಧಿ ಕರ್ತೃ ನೆರವೇರಿಸಿದ. ತತ್‌ಕ್ಷಣದಲ್ಲಿ ಜಾಗ ಕದಲಿಸಿದ. ಎಲ್ಲೆಲ್ಲೂ ಓಡಾಡಿ ಎಲ್ಲರೊಡನೆ ನಕ್ಕು ನಲಿದ. ಪೂಜಾ ಮುಕ್ತಾಯದ ಕೃಷ್ಣಾರ್ಪಣ - ವಿಧಿಗೆ ಹಾಜರಾದ. ಹೀಗಾದರೆ ಆಸಕ್ತಿ ಎಲ್ಲಿ ಬಂತು! ಏಕಾಗ್ರತೆ ಎಲ್ಲಿ ಉಳಿಯಿತು! ಫಲ ನಿರೀಕ್ಷೆಯಲ್ಲಿ ಕರ್ಮವಿಮುಖತೆ ಮರೆಯಿತಲ್ಲ!

ಸಂಕಲ್ಪ ಮಾತ್ರದಿಂದ ಫಲಪ್ರಾಪ್ತಿ ಎಂದಾದರೆ ಕರ್ಮಶ್ರಮ ಯಾಕಿರಬೇಕು? ಕರ್ಮ ಮಾಡಬೇಕು; ಶ್ರದ್ಧೆ ಕರ್ಮದಲ್ಲಿ ನೆಲೆ ನಿಲ್ಲಲೇಬೇಕು. ಇಹ-ಪರ ಎರಡಕ್ಕೂ ಪಕ್ಕಾಗುವಂತೆ ವ್ಯವಹರಿಸಬೇಕು.

ಭಗವದ್ಗೀತೆಯ ಪಠಣ ಪಾಪಕರ್ಮಗಳ ಉಪಶಮನ ಎಂಬ ನಂಬಿಕೆಯೊಂದಿದೆ. ಪುಣ್ಯ ಎಂದರೆ ಭಾವಾವೇಶ ಇಳಿದು ಹೋಗುವುದು, ಭಯ, ಆತಂಕ, ಅನಾಸಕ್ತಿ,

ದುಃಖಾದಿಗಳು ಕಳೆದು ಹೋಗುವುದು. ಶಾಂತಿ, ಸಮಾಧಾನ, ನೆಮ್ಮದಿ ಬೆಳೆದುಕೊಳ್ಳುವುದು ಎಂಬ ಅರಿವು ಇರಬೇಕು.

ತೀವ್ರ ಆಸಕ್ತಿ, ಅಚಲ ಏಕಾಗ್ರತೆ, ಪ್ರಶ್ನಾತೀತವಾದ ನಂಬುಗೆ ಮತ್ತು ಶ್ರದ್ಧೆಯಿಂದ ಪಾರಾಯಣ ಮಾಡಿದ್ದಾದರೆ ಪುಣ್ಯಾನುಭವ ಇಹದಲ್ಲೇ ಇದೆ ಎಂದು ತಿಳಿಯಬೇಕು.

ಆಸಕ್ತಿ, ಏಕಾಗ್ರತೆ, ಶ್ರದ್ಧೆಗಳಿಲ್ಲದ ಪಾರಾಯಣದಿಂದ ಪುಷ್ಕಳ ಪಾರಣೆಯ ಸವಿಯನ್ನು ದಕ್ಕಿಸಿಕೊಳ್ಳಬಹುದು. ಕೈತುಂಬಿ ಬರುವ ದಕ್ಷಿಣೆಯನ್ನು ಸೊಂಟಕ್ಕೆ ಸಿಕ್ಕಿಸಿಕೊಳ್ಳಬಹುದು. ವಿಷಯ ಭೋಗಗಳಿಗೆ ಇದನ್ನು ಬಳಸಿ ಸುಖದ ಸೆರೆಯಲ್ಲಿ ಸಿಕ್ಕಿಹಾಕಿಕೊಳ್ಳಬಹುದು. ಉನ್ನತ ವೇದಾಂತಿ ಎಂಬ ಹೆಗ್ಗಳಿಕೆಯನ್ನು ಉಕ್ಕಿಸಿಕೊಳ್ಳಬಹುದು; ಅಷ್ಟೆ; ಪುಣ್ಯವೂ ಇಲ್ಲ; ಪುರುಷಾರ್ಥವೂ ಇಲ್ಲ!

ಅರಿವು ಆಸಕ್ತಿಗಳಿಲ್ಲದ ಪಾರಾಯಣ ನಿರರ್ಥಕ. ಮಾಧವನ ಮಾಹಾತ್ಮ್ಯದ ಅರಿವು ಅವನಲ್ಲಿ ಸುದೃಢ ಸ್ನೇಹದ ಇರವು, ಏಕಾಗ್ರತೆಗೆ ಒಲವು, ಮನನದ ಕಡೆಗೆ ಆಸಕ್ತಿಯ ಹರಿವು, ನಡೆ - ನುಡಿಗಳಲ್ಲಿ ಹರಿದು ಬರುವ ಅನುಷ್ಠಾನದ ಚೆಲುವು ಪುಣ್ಯ ರೂಪವೆತ್ತು ಬರುತ್ತದೆ. ಪೂರ್ಣಾನಂದನ ದರ್ಶನಕ್ಕೆ ಎರವಾಗುತ್ತದೆ. ಅವನ ಸಾಯುಜ್ಯ ಪ್ರಾಪ್ತಿಯೋಗ ಕೈಗೂಡುತ್ತದೆ.

ಆಸಕ್ತಿ - ಯುಕ್ತಿಯು ವಿಷಾದಯೋಗ ಮುಕ್ತಿಗೆ ನೆರವಾಗುವ ಕೀಲಿಕೈ. ★

## ನೀತಿವಾಕ್ಯಗಳು

1. ಹೆತ್ತಯ್ಯನನ್ನು ಹಳಿಯುವವ ಮುತ್ತಯ್ಯನನ್ನು ಬಿಟ್ಟಾನೇ?
2. ಹೆತ್ತ ತಾಯಿಯನ್ನು ತಿನ್ನುವವಳು ಅತ್ತೆಯನ್ನು ಬಿಟ್ಟಾಳೆ?
3. ಹುಟ್ಟುವಾಗ ಅಣ್ಣ ತಮ್ಮಂದಿರು - ಬೆಳೆಯುವಾಗ ದಾಯಾದಿಗಳೆನ ಬೇಡ.
4. ತಾನುಂಟೊ ಮೂರು ಲೋಕವುಂಟೋ?
5. ಮಿತವರಿತು ನಡೆವವಗೆ ಔಷಧಿ ಯಾಕೆ?
6. ಹಿಡಿ ತುಂಬಾ ಹಣ ಕೊಟ್ಟರೂ ನುಡಿ ಚೆನ್ನಾಗಿರಬೇಕು.
7. ನವಿಲನ್ನು ನೋಡಿ ಕೆಂಬೂತ ಪುಕ್ಕ ತೆರೆದುಕೊಂಡಿತು.
8. ಕಂಕುಳಲ್ಲಿ ದೊಣ್ಣೆ ಕೈಯಲ್ಲಿ ಶರಣಾರ್ತಿ.
9. ಕಂಡರೆ ಸುಂಕ - ಕಾಣದಿದ್ದರೆ ಬಿಂಕ.
10. ಕಡುಕೋಪ ಬಂದಾಗ ತಡಕೊಂಡವನೆ ಜಾಣ.
11. ಸೋರುವ ಮನೆಯನ್ನು ಹೋರುವ ಹೆಂಡತಿಯನ್ನು ದೂರವಿಡು.
12. ನೀನು ನಾನು ಎಂಬುವ ಭೇದ ಜ್ಞಾನಿಗುಂಟೆ?
13. ಧ್ಯಾನವಿಲ್ಲದವ ಕಾನನಕ್ಕೆ ಹೋದರೇನು?
14. ಸಾಲವಿಲ್ಲದ ಮನುಜ ಸಾವಿರ ಆನೆಗಳೊಡೆಯ.
15. ದೇಹಿ ಎಂದವನಿಗೆ ನಾಸ್ತಿ ಎನಬೇಡ.

**- (ಸಂಗ್ರಹ) ಜಾಹ್ನವಿ ಆಚಾರ್ಯ**

ಶ್ರೀಮದನುವ್ಯಾಖ್ಯಾನ ಅನುಸಂಧಾನಪೂರ್ವಕ

# ಶ್ರೀ ಸುಧಾಸುವಚನ

ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು

ಲೇಖಾಂಕ -41 ಮೊಕ್ಕಾಂ : ಬೆಂಗಳೂರು

ಪರಮಮುಖ್ಯವಾಗಿ ಎಲ್ಲಾ ಶಬ್ದಗಳೂ, ವಾಕ್ಯಗಳೂ ಭಗವತ್‌ಪರಗಳೇ ಆದದ್ದರಿಂದ ಸಕಲಗಳೂ ಸುವಾಕ್ಯಗಳೇ ಆಗಿವೆ ಎಂಬ ವಸ್ತುತತ್ವಕೀರ್ತನೆಗಾಗಿ ಆಚಾರ್ಯರು ಸುವಾಕ್ಯೈಃ ಎಂದದ್ದು ಹೊರತು ದುರ್ವಾಕ್ಯಗಳನ್ನು ಹೊರದಬ್ಬಲು ಹೇಳಿದ್ದು ಅಲ್ಲ. ಯಾಕೆಂದರೆ ಲೋಕದಲ್ಲಿ ಎಲ್ಲಾ ವಾಕ್ಯಗಳೂ ಭಗವತ್‌ಪರಗಳೇ ಆಗಿವೆಯಾದ್ದರಿಂದ ದುರ್ವಾಕ್ಯಗಳೇ ಇಲ್ಲವಲ್ಲ ಎಂಬ ಒಂದು ಆಕೂತ ಇದರ ಹಿಂದೆ ಅಡಗಿದೆ. ಹೀಗೆ ಹೇಳಿದಾಗ ಬರುತ್ತಿರುವ ಮಗದೊಂದು ಪ್ರಶ್ನೆ ಹಾಗಿದ್ದರೆ ದುರ್ವಾಕ್ಯ ಎಂಬ ಪದಕ್ಕೆ ವಾಚ್ಯವಾದದ್ದು ಯಾವುದು ಎಂದು. ವಾಚ್ಯವಿಲ್ಲದೆನೂ ಒಂದು ಪದ ನಿಲ್ಲಲು ಬರುತ್ತದಾ ಎಂದು.

ಹೌದು ಈ ಪ್ರಶ್ನೆಗೆ ಉತ್ತರ ದುಸ್ತರವೆಂಬಂತೆ ಕಂಡರೂ ಉನ್ನತಸ್ತರದಲ್ಲಿ ಅರ್ಥವಿಸ್ತರವನ್ನು ಗುರುತಿಸಿದಾಗ ಮಾತ್ರ ದುರ್ವಾಕ್ಯವೆಂಬುದಕ್ಕೂ ಸುವಾಕ್ಯವೇ ಪರಮವಾಚ್ಯವೆಂದೆನ್ನಬಹುದೆಂದದ್ದು ಹೊಳೆಯುತ್ತದೆ ಹೊರತು ನಿಮ್ನಸ್ತರದಲ್ಲಲ್ಲ. ಹಾಗೇನಿದ್ದರೂ ಕಲ್ಪಿತದುರ್ವಾಕ್ಯಗಳಿಗಂತೂ ತೊಂದರೆ ಇಲ್ಲವಲ್ಲ? ಹಾಗಿದ್ದರೆ ಅದರಂತೆ ಖರವಿಷಾಣಾದಿಗಳೂ ಅವಾಚ್ಯಪದಗಳೇ? ಅವಾಚ್ಯಪದಗಳೂ ಅವಾಚ್ಯನೇ? ಕಲ್ಪಿತ ದುರ್ವಾಕ್ಯಪದವೂ ಅವಾಚ್ಯನೇ? ಎಂಬ ಪ್ರಶ್ನೆ ಪರಂಪರೆಗಳೇ ಬಂದೊದಗಬಲ್ಲಬಹುದಲ್ಲವೇ? ಆದರೆ ಎಲ್ಲೂ ಪದಗಳಿಗೆ ಆವಾವ ವಾಚ್ಯಗಳು ಇಲ್ಲವೆಂದಿಲ್ಲವಲ್ಲ. ಪರಂತು ಅವು ಪರಮವಾಚ್ಯವಲ್ಲವೆಂದದ್ದು ಮಾತ್ರ. ಇದನ್ನು ಗಮನಿಸಿದಾಗ ಈ ಪ್ರಶ್ನೆಗಳೆಲ್ಲಾ ತಣ್ಣಗಾಗುತ್ತದಲ್ಲವೇ?

ಅದಿರಲಿ, ಸರಿ ಇದೀಗ ಆಪ್ಯತಮಮಿತ್ಯನೇನ ವೇದಾದಿಮುಖ್ಯಾರ್ಥತ್ವ ಮತ್ತು ಅಖಿಲವೇದಾದ್ಯರ್ಥತ್ವ ಎಂಬ ಎರಡು ಲಕ್ಷಣಗಳು ಹೊರಹೊಮ್ಮುತ್ತವೆ ಎನ್ನುವ ಟೀಕಾಕೃತ್‌ಪಾದರ ಹತ್ತಿರ ಪ್ರಶ್ನೆಯೇನೆಂದರೆ ಅದು ಯಾಕೆ ಎರಡೇ ಲಕ್ಷಣಗಳನ್ನು ಸಂಗ್ರಹಿಸಿದಿರಿ? ಎಂದು. ಅನನ್ಯಾರ್ಥತಯಾ ವೇದಪ್ರತಿಪಾದ್ಯತ್ವ ಎಂಬ ಮೂರನೇ ಲಕ್ಷಣವೂ ಅಶೇಷವಿಶೇಷತೋಽಪಿ ಎಂಬುದರಿಂದ ಪ್ರಾಪ್ತವಾಗಲು ಸಾಧ್ಯವಿರುವಾಗ ಅದನ್ನು ಬಿಟ್ಟದ್ದು ಏಕೆ ಎಂದು.

ಉತ್ತರ - ನಿಖಿಲಗುಣತ್ವ, ಪೂರ್ಣಗುಣತ್ವಕ್ಕೆ ನೇರವಾಗಿ ಸಾಧಕವಿರುವ ಲಕ್ಷಣಗಳನ್ನು ಹೇಳುವ ಉದ್ದೇಶವನ್ನು ಆಚಾರ್ಯರು ಒಳಗಿಟ್ಟುಕೊಂಡಿದ್ದಾರೆ ಎಂಬುದನ್ನು ಟೀಕಾಕೃತ್‌ಪಾದರು ತಿಳಿದುಕೊಂಡಿದ್ದಾರೆ. ವೇದಾದಿಮುಖ್ಯಾರ್ಥತ್ವವು ಮತ್ತು ಅಖಿಲವೇದಾದ್ಯರ್ಥತ್ವವು ಹೇಗೆ ನೇರವಾಗಿ ನಿಖಿಲಗುಣವತ್ವ ಪೂರ್ಣಗುಣತ್ವಕ್ಕೆ ಸಾಧಕವಾಗುತ್ತದೋ ನ ತಥಾ ಅನನ್ಯಾರ್ಥತಯಾ ವೇದಪ್ರತಿಪಾದ್ಯತ್ವವಾಗುವುದಿಲ್ಲವಲ್ಲ. ಆದ್ದರಿಂದ ವಿಭವಾತ್ ಸೇರಿಸಬಹುದಾದರೂ ಅದೇನಿದ್ದರೂ ನಿಖಿಲಗುಣತ್ವ ಪೂರ್ಣಗುಣತ್ವದಂತೆ ಸಾಧಕವಾಗಿ ಮುಖ್ಯಕಾರ್ಯಕರ್ತೃ ಅಲ್ಲ ಎಂದು ಬಿಟ್ಟಿರಬೇಕು ಎಂದು ತಿಳಕೊಳ್ಳತಕ್ಕದ್ದಾಗಿದೆ.

ವೇದಮುಖ್ಯಾರ್ಥತ್ವವೆಂದರೆ ಮಹಾಯೋಗವೃತ್ತಿಯಿಂದ ವೇದಪ್ರತಿಪಾದ್ಯತ್ವ ಎಂದರ್ಥ. ಮಹಾಯೋಗವೃತ್ತಿ ಎಂಬುದು ಅವಯವಶಕ್ತಿಯಿಂದ ಲಭ್ಯವಾದ ನಿರವಧಿಕವಾದ ಪ್ರವೃತ್ತಿನಿಮಿತ್ತವತ್ವ ಪ್ರಯುಕ್ತ ಅರ್ಥಪ್ರತಿಪಾದಕತ್ವವಾದದ್ದು. ಪ್ರವೃತ್ತಿನಿಮಿತ್ತದಲ್ಲಿ ನಿರವಧಿಕತ್ವವನ್ನು ಹೇಳಿದ್ದರಿಂದ ಪೂರ್ಣತ್ವವು ಹೇಳಲ್ಪಟ್ಟಿತು. ತಥಾ ಚ ವೇದಮುಖ್ಯಾರ್ಥತ್ವವು ನಿರವಧಿಕಪ್ರವೃತ್ತಿನಿಮಿತ್ತ ಜ್ಞಾಪಕವಾಗಿ ಪೂರ್ಣಗುಣವತ್ವಕ್ಕೆ ಸಾಧಕವಾಯಿತು.

ಅದರಂತೆ ಅಖಿಲವೇದಾರ್ಥತ್ವವೆಂದರೆ ಅನಂತವೇದಗತಅನಂತಪದಸಮನ್ವಯ ವಿಷಯತ್ವ ಎಂದರ್ಥ. ಒಂದೊಂದು ಪದಸಮನ್ವಯದಿಂದ ಒಂದೊಂದು ಗುಣ ಸಿದ್ಧವಾಗುತ್ತಾ ಅನಂತಪದ ಸಮನ್ವಯದಿಂದ ಅನಂತಗುಣವತ್ವವು ನಿಖಿಲಗುಣವತ್ವವು ಸಿದ್ಧವಾಗುತ್ತೆ. ಹೀಗೆ ಅಖಿಲವೇದಾರ್ಥವು ಅಖಿಲಗುಣವತ್ವಕ್ಕೆ ನೇರವಾಗಿ ಸಾಧಕವಾಯ್ತಾಗುತ್ತದೆಯಾದ್ದರಿಂದ ಈ ರೀತಿ ದ್ವಯಗ್ರಹಣ ಮಾಡಿರಬೇಕು.

ಹಾಗೆ ಶಂಕೆ ಮಾಡುವುದಿದ್ದರೆ ವೇದಾಹ್ಯೇವೈನಂ ವೇದಯಂತಿ ಎಂಬಿತ್ಯಾದಿಯಾಗಿ ವೇದೈಕಸಮಧಿಗಮ್ಯತ್ವವನ್ನೂ ಸೇರಿಸಬಹುದಿತ್ತು ಎಂಬ ಶಂಕೆಯನ್ನೂ ಮಾಡಬಹುದಿತ್ತು. ಅದಕ್ಕೋಸ್ಕರ ಇರಬೇಕು ಟೀಕಾರ್ಯರು ಚೇತಿ ದ್ವಯಂ ಎಂದದ್ದು. ಇತಿ ದ್ವಯಂ ಚ ಎಂದು. ದ್ವಯಮೇವ ಎನ್ನದೆ ಪರಿಹಾರಗೊತ್ತಿದ್ದರೆ ಶಂಕೆ ಎಷ್ಟು ಬೇಕಾದರೂ ಇಟ್ಟುಕೊಳ್ಳಿ ಎಂದಿರಬೇಕು ಕಾಣುತ್ತೆ.

ಅದರಂತೆ ಅಸ್ಯೇತ್ಯನೇನ ಅಷ್ಟೌ ಎಂಬಲ್ಲಿ ಅಷ್ಟಲಕ್ಷಣವಾಚಕಾಃ ಶಬ್ದಾಃ ಕಥಿತಾಃ ಎಂದು ಅಂದುಕೊಳ್ಳಬೇಕು. ಇಲ್ಲದಿದ್ದರೆ ಇಲ್ಲೂ ಸ್ವಲ್ಪ ಎಡವಟ್ಟಾಗುವ ಸಂಭವ ಬರಹುದು.

ಇಲ್ಲಿ ಅಸ್ಯ ಎಂಬುದಕ್ಕೆ ಮಮ ಎಂದೂ ಅರ್ಥ ಮಾಡಬಹುದು. ಅಂದರೆ ಅಸ್ಯ ಎಂದರೆ ಇವನಿಗೆ ಅರ್ಥಾತ್ ನನಗೆ ಅಂದರೆ ಮಮ ಉದ್‌ಭವಾದಿದಂ ಎಂದೂ ಅರ್ಥೈಸಬಹುದು. ಯಾಕೆಂದರೆ ಮುಂದೆ ಮಮ ಅಶೇಷವಿಶೇಷತೋಽಪಿ, ಮಮ ಸದಾಪ್ರಿಯತಮಂ ಎಂದು ಹೇಳಿದಂತೆ ಮಮ ಉದ್‌ಭವಾದಿದಂ ಎಂದು ಹೇಳಿದರೆ ಅದು ಹೆಚ್ಚು ಅರ್ಥಪೂರ್ಣವಾಗುತ್ತದೆ. ಆವಾಗ ಉದ್‌ಭವಾದಿಗಳಲ್ಲಿ ಜ್ಞಾನಾಜ್ಞಾನಪ್ರದತ್ವವೂ ಸೇರಿರುವುದರಿಂದ ಗ್ರಂಥಾರಂಭದಲ್ಲಿ ಜ್ಞಾನೇಶನ, ಜ್ಞಾನಾಜ್ಞಾನಪ್ರದನ ಸಂಸ್ಮರಣೆಯೂ ಅರ್ಥಪೂರ್ಣವಾಗುತ್ತದೆ.

ಇನ್ನು ಅಶೇಷೇತ್ಯನೇನ ಮುಖ್ಯವಂದ್ಯತ್ವಮುಕ್ತಮ್ ಎಂದು ಟೀಕಾರ್ಯರು ಹೇಳುತ್ತಾ ಪುನಃ ಅಶೇಷಾದ್ವಿಶೇಷೇಣ ಎಂದು ವಿಗ್ರಹವನ್ನೂ ತೋರಿಸುತ್ತಾರೆ. ಇದು ಯಾಕೆಂದರೆ ಸಹಜವಾಗಿ ಅಶೇಷ ವಿಶೇಷತೋಽಪಿ ವಂದ್ಯಂ ಎಂಬುದಕ್ಕೆ ನೀವು ಅಶೇಷರಿಂದಲೂ ವಿಶೇಷವಾಗಿ ವಂದ್ಯ ಎಂದು ಅರ್ಥಮಾಡುತ್ತೀರೆಂದು ಟೀಕಾರ್ಯರಿಗೆ ಮೊದಲೇ ಗೊತ್ತಾಗಿ ಬಿಟ್ಟಿದ್ದು ಅದು ಅಲ್ಲ ಎನ್ನುವುದಕ್ಕೋಸ್ಕರ.

ಅಲ್ಲಾ ಅಶೇಷರಿಂದಲೂ ವಿಶೇಷವಾಗಿ ವಂದ್ಯ ಎಂಬ ಸಹಜಾರ್ಥವನ್ನೇ ಇಟ್ಟುಕೊಂಡು ಅದನ್ನೇ ಲಕ್ಷಣವೆಂದು ಯಾಕೆ ಪರಿಗಣಿಸಬಾರದಿತ್ತು ಎಂಬ ಶಂಕೆ ಇಲ್ಲಿ ಬಂದೇ ಬರುತ್ತದಲ್ಲಾ ಎಂದು ನೀವು ಶಂಕಿಸಬಹುದು.

ಹೌದು ಈ ಸಹಜಾರ್ಥವನ್ನೇ ಲಕ್ಷಣವನ್ನಾಗಿ ಇಟ್ಟುಕೊಂಡರೆ ಸ್ವಲ್ಪ ತಾಪತ್ರಯ ಬರಬಹುದೆಂಬುದಕ್ಕೋಸ್ಕರವೋ ಏನೋ ಟೀಕಾಚಾರ್ಯರು ಮುಖ್ಯವಂದ್ಯತ್ವವನ್ನೇ ಇಟ್ಟುಕೊಳ್ಳಿ ಎಂದು ಸೂಚಿಸಲು ಪುನಃ ಅಶೇಷಾತ್ ವಿಶೇಷೇಣ ಎಂದು ವಿಗ್ರಹಪ್ರದರ್ಶನ ಮಾಡಿರಬೇಕು.

ಯಾಕೆಂದರೆ ಇದೀಗ ನೀವು ನಾರಾಯಣ ಎಲ್ಲರಿಂದಲೂ ವಿಶೇಷವಾಗಿ ವಂದ್ಯ ಎಂದರೆ ದುಷ್ಟರಿಂದಲೂ ಪಶುಪಕ್ಷಿಗಳಿಂದಲೂ ವಂದ್ಯ ಎಂದ ಹಾಗೆ ಆಗುತ್ತದಲ್ವಾ? ಒಂದನೆಯದಾಗಿ ದುಷ್ಟರು, ಪಶುಪಕ್ಷಿಗಳು ಅಜ್ಞಾನವಿಪರೀತಜ್ಞಾನಗಳಿಂದಾಗಿ ನಾರಾಯಣನಿಗೆ ವಂದನೆಯನ್ನೇ ಮಾಡುವುದಿಲ್ಲವಲ್ಲಾ? ಹಾಗಿರುವಾಗ ಅವನು ಅಶೇಷರಿಂದ ವಂದ್ಯನೇ ಆಗದಿರುವಾಗ ವಿಶೇಷವಂದ್ಯನಾಗುವುದಾದರೂ ಹೇಗೆ ಎಂಬ ಶಂಕಾಶೂಕ ಎದ್ದೇಳಬಹುದು.

ಮತ್ತೂ ಕೂಡ ಒಂದು ವೇಳೆ ಅಲ್ಲಾ ದುಷ್ಟರೂ ಸಮಸ್ತರೂ ನಾರಾಯಣನಿಗೆ ವಂದನೆ ಮಾಡಿಯೇ ಮಾಡುತ್ತಾರೆ. ಮಾಡದೆ ಎಲ್ಲಿ ಹೋಗುತ್ತಾರೆ? ವಂದ್ಯಂ ಸುರಾಸುರಗಣೈಃ ಎಂದು ಹೇಳಿಲ್ಲವೇ ಎಂದು ವಾದಿಸುವುದಾದರೂ, ಸರಿ ಪರಮದುಷ್ಟರೂ ಪರಮನೀಚರೂ ಬಂದು ಈ ನಾರಾಯಣನಿಗೆ ನಮಸ್ಕರಿಸುತ್ತಾರೆಂದರೆ ಈ ನಾರಾಯಣ ಎಂತವನಿರಬೇಕು ಎಂಬ ಮತ್ತೊಂದು ಕುಸ್ಕುಂಡಿ ಮಾಡುವವರು ಎದ್ದೇಳಬಹುದಲ್ವಾ? ಅದಕ್ಕೋಸ್ಕರ ಇರಬೇಕು ಈ ತಾಪತ್ರಯನೇ ಬೇಡ ಎಂದು ಟೀಕಾಚಾರ್ಯರು ನೇರ ಅಶೇಷಾತ್ ಎಂದು ಬಾಯಿಬಿಟ್ಟು ಹೇಳುತ್ತಾ ಮುಖ್ಯವಂದ್ಯತ್ವಕ್ಕೇ ಹೋಗಿರಬೇಕು.

ಯಾವುದಾದರೂ ಕೆಲಸ ಆಗುವುದಕ್ಕೋಸ್ಕರ ಕೆಲವೊಮ್ಮೆ ದುಷ್ಟರಲ್ಲಿಯೂ ಚಿಕ್ಕವಂದ್ಯತ್ವ ಬರಬಹುದಾದರೂ ವಾಸ್ತವಿಕವಾಗಿ ಮುಖ್ಯವಂದ್ಯತ್ವ, ಮುಖ್ಯರಿಂದ ವಂದ್ಯತ್ವ, ಅಶೇಷಾತ್ ವಿಶೇಷಣ ವಂದ್ಯತ್ವ, ಪರಮಮುಖ್ಯವಂದ್ಯತ್ವ ಅದು ನಾರಾಯಣನಲ್ಲೇ ಬರಬೇಕು. ಬೇರೆಲ್ಲಿ ಬರುತ್ತೆ ಎಂಬ ಧ್ವನಿಯ ವರ್ಧನೆಗೋಸ್ಕರ ಟೀಕಾರ್ಯರು ಅಶೇಷಾತ್ ಎಂದು ಬಿಡಿಸಿ ಹೇಳಿರಬೇಕು. ಇಲ್ಲದಿದ್ದರೆ ಟೀಕಾರ್ಯರು ಇಲ್ಲಿ ಶ್ರೀ ಮನ್ನ್ಯಾಯಸುಧಾದಲ್ಲಿ ಸಮಾಸವಿಗ್ರಹದರ್ಶನ ಮಾಡಿಸುವ ಜರೂರಾದರೂ ಏನಿರುತ್ತಿತ್ತು ಹೇಳಿ.

(ಮುಂದುವರಿಯುವುದು)



# ಶ್ರೀ ಜಯತೀರ್ಥರು

ಚಿಪ್ಪಗಿರಿ ನಾಗೇಂದ್ರಾಚಾರ್ಯ



ಗುಣಗಣ ನಿಲಯ ಭಗವಂತ ನನ್ನ ತಿಳಿಸುವುದೇ ಸಕಲ ಶೃತಿಸಾರವು. ಸಮಸ್ತ ಶೃತಿಗಳೂ ಆ ಪರದೇವತೆಯನ್ನ ಅನೇಕ ತೆರನಾಗಿ ತಿಳಿಸಿಕೊಡುವುವು. ಒಂದೊಂದು ವಾಕ್ಯಗಳೂ ಕೂಡಾ ಭಗವಂತನ ಒಂದೊಂದು ಗುಣಗಳನ್ನ (attributes) ಪ್ರತಿಪಾದಿಸುತ್ತಿರುವುವು.

ಹೀಗೆನ್ನಬಾರದು - ವೇದಗಳ ಕೆಲವು ಮಾತುಗಳು ಭಗವಂತನ ಕೆಲವು ಗುಣಗಳನ್ನ ಕೊಂಡಾಡಿವೆ. ಕೆಲವು ಮಾತುಗಳು ಆ ಭಗವಂತನಲ್ಲಿ ಯಾವ ಗುಣಗಳೂ ಇಲ್ಲ ಎನ್ನುತ್ತಿವೆ. ಹೀಗೆ ವೇದಗಳು ತತ್ವವನ್ನ ತಿಳಿಸುವ, ಕೆಲವು ಅತತ್ವವನ್ನ ತಿಳಿಸುವ ವಾಕ್ಯಗಳ ಸಮೂಹವು. ಸರ್ವಂಖಲ್ವಿದಂ ಬ್ರಹ್ಮ, ಯತೋವಾಚೋಽನಿವರ್ತಂತೇ। ಹೀಗೆ ಕೆಲವು ಮಾತುಗಳಷ್ಟೇ ಪ್ರಾಮಾಣಿಕವು, ಎಂದು.

ಹೀಗೇ ವೇದ ಮಾತುಗಳಿಗೆ (ದ್ವೈವಿಧ್ಯೇನ ಅರ್ಥಕಲ್ಪನಾ) ಇದು ಸಗುಣ ಬ್ರಹ್ಮ, ಇದು ನಿರ್ಗುಣ ಬ್ರಹ್ಮ, ಎಂದೆಲ್ಲಾ ಅರ್ಥಕಲ್ಪಿಸಿದರೆ ಅದು ವೇದಚೌರ್ಯವೇ ಸರಿ. ಅಂಥವರು ವೇದಗಳನ್ನ ಅಪಹರಿಸುವ ಕಳ್ಳರು. (ತಸ್ಕರಾಃ ಏವ) ಅವರು ವೇದವನ್ನ ಕೊಲ್ಲುವವರು. (ವೇದಂ ಭಿಂದಂತಿ)

ಸಮಸ್ತ ವೇದ ಮಾತುಗಳೂ ಅಸಂಖ್ಯೇಯ ಕಲ್ಯಾಣ ಗುಣಗಣ ನಿಲಯ, ಸಕಲ ದೋಷ ದೂರ ಪರಬ್ರಹ್ಮನನ್ನ ವಿಧವಿಧವಾಗಿ ತಿಳಿಸುತ್ತವೆ. ಅಲ್ಲಿ ಕೆಲವು ಮಾತುಗಳು ಗುಣಪೂರ್ಣನೆಂದರೆ ಸರ್ವಜ್ಞ, ಸರ್ವೇಶ್ವರ, ಸರ್ವಾಂತರ್ಯಾಮಿ, ಸೌಂದರ್ಯಾದಿ ಗುಣಗಳಿಂದ ಮೈದಾಳಿ ನಿಂತವನೆಂದೂ (ಗುಣವಿಶಿಷ್ಟತಯಾ) ಕೆಲವು ಮಾತುಗಳು ದುಃಖ, ಪ್ರಾಕೃತ, ಭೌತಿಕ ರೂಪ ಮೊದಲಾದ ದೋಷಗಳಿಂದ ಅತೀತನೆಂದೂ (ದೋಷಾಭಾವ ವಿಶಿಷ್ಟತಯಾ) ಕೆಲವು ಮಾತುಗಳು, ಮಾತು, ಮನಸ್ಸು, ತರ್ಕ, ನಿಲುವಿಗೆ ನಿಲುಕದವನೆಂದೂ (ವಾಙ್ಮನಸಾಽಗೋಚರತ್ವಾಕಾರೇಣ) ಕೆಲವು ಮಾತುಗಳು - ಉಳಿದೆಲ್ಲವುಗಳನ್ನೂ ಬಿಟ್ಟು ಮೊರಹೊಕ್ಕತಕ್ಕ ಒಂದೇ ಒಂದು ವಸ್ತು ಆ ಪರದೈವ ಎಂದೂ (ಅದ್ವಿತೀಯತ್ವೇನ) ಕೆಲವು ಮಾತುಗಳು, ಜಗದ ಎಲ್ಲಕ್ಕೂ ಇವನೊಬ್ಬನೇ ಆಶ್ರಯ, ಕಾರಣ, ಇರುವಿಕೆಯ ಎಚ್ಚರವನ್ನಿತ್ತು ಸಲಹುವವನೆಂದೂ, (ಸರ್ವಾತ್ಮಕತ್ವೇನ) ಹೀಗೆ ಆ ಭಗವಂತನನ್ನ ಅನೇಕತೆರನಾಗಿ ತಿಳಿಸಲು ಹೊರಟಂತವುಗಳು. ಭಗವಂತನಲ್ಲಿ ಗುಣಗಳು ಉಂಟೆಂದೂ ಗುಣಗಳು ಇಲ್ಲೆಂದು, ಇರುವುದು ಒಂದೇ ಎಂದೂ ಎಲ್ಲವೂ ಆ ಒಂದೇ ಎಂದೂ, ಈ ತೆರನಾಗಿ ಅಸಂಬದ್ಧವಾಗಿ ವಿವರಿಸುತ್ತಿಲ್ಲವು.

ಹೀಗೇ ವೇದ ವಾಕ್ಯಗಳಿಗೆ ಸ್ಪಷ್ಟವಾಗಿ ವಿವರಣೆಯನ್ನ ಕೊಟ್ಟು ಏಕಸೂತ್ರತೆಯನ್ನ ಹಿಡಿದಿಟ್ಟು, ಸಮಸ್ತ ವೇದಗಳ ಹೃದಯ ಭಗವಂತನೇ ಎಂಬುದನ್ನ ತಿಳಿಸಿದವರೇ ಶ್ರೀ ಜಯತೀರ್ಥರು. ಅವರ ಮೇರುಕೃತಿ ಸುಧೆಯಸಾರವಿದು. ಆಷಾಢ ಬಹುಳ ಪಂಚಮಿ ಶ್ರೀ ಜಯತೀರ್ಥ ಪುಣ್ಯ ದಿನವು. ಅದಕ್ಕೆಂದೇ ಈ ಸ್ಮರಣಿಯ.

'ವೈಶಾಲಿ', ಅದಮಾರು ಮಠದ ರಸ್ತೆ, ಉಡುಪಿ



# ಈಶಾವಾಸ್ಯೋಪನಿಷತ್

( ಆಚಾರ್ಯ ಮಧ್ವರ ಭಾಷ್ಯಾನುಸಾರಿಯಾಗಿ)

ಲೇಖಾಂಕ ೫

ಬಿಂದು ಮಾಧವಾಚಾರ್ಯ ನಾಗಸಂಪಿಗೆ, ಬಾಗಲಕೋಟೆ

ಉಪನಿಷತ್ತುಗಳ ಅರ್ಥಲೋಕ

### ಪೂರ್ವಚಿಂತನೆ :

ಸಾಧಕನಿಗೆ ಅವಶ್ಯವಾದ ವಿಷಯಭೋಗತ್ಯಾಗ ಹಾಗೂ ವಿಹಿತಸತ್ಕರ್ಮಾನುಷ್ಠಾನಗಳನ್ನು ಹಿಂದಿನ ಎರಡು ಮಂತ್ರಗಳಿಂದ ಹೇಳಿ ಆಯಿತು. ಇದೀಗ ಅಧಿಕಾರಿಯಾದವನಿಗೆ ಭಗವತ್ತತ್ವಜ್ಞಾನದ ಮಹತ್ವ ಮತ್ತು ಅದರಲ್ಲಿ ಅಭಿರುಚಿಯನ್ನು ಹುಟ್ಟಿಸುವುದಕ್ಕಾಗಿ ಅದಕ್ಕೆ ವಿರುದ್ಧವಾದ ಅನ್ಯಥಾ ಜ್ಞಾನವು ಪ್ರಯೋಜನಕಾರಿಯಲ್ಲ ಎಂದು ಉಪನಿಷತ್ತು ತಿಳಿಸುತ್ತದೆ.

### ಮಂತ್ರ - 3

**ಅಸುರ್ಯಾ ನಾಮ ತೇ ಲೋಕಾ ಅಂಧೇನ ತಮಸಾವೃತಾಃ ।**
**ತಾಂಸ್ತೇ ಪ್ರೇತ್ಯಾಭಿಗಚ್ಛಂತಿ ಯೇ ಕೇ ಚ ಆತ್ಮಹನೋ ಜನಾಃ ॥ ೩ ॥**

### ಅನ್ವಯಾರ್ಥ

ಯೇ ಕೇ ಚ = ಯಾವ ಕೆಲವರು ಆತ್ಮಹನಃ = ಭಗವಂತನನ್ನು ಸರಿಯಾಗಿ ತಿಳಿಯದೇ ವಿಪರೀತವಾಗಿ ತಿಳಿಯುತ್ತಾರೋ ತೇ (ಸರ್ವೇಽಪಿ) ಅವರೆಲ್ಲರೂ ಪ್ರೇತ್ಯ = ಮರಣಾನಂತರ ಅಸುರ್ಯಾಃ= ಅಸುರರು ಹೊಂದಲು ಯೋಗ್ಯವಾದ ಮತ್ತು ಮಹಾದುಃಖಮಯವಾದಂತಹ ಅಂಧೇನ = ನಿಬಿಡವಾದ ತಮಸಾ = ಕತ್ತಲೆಯಿಂದ ಆವೃತಾಃ= ಆವರಿಸಲ್ಪಟ್ಟಂತಹ ತೇ = ಪ್ರಸಿದ್ಧಗಳಾದ ಯೇ ಲೋಕಾಃ = ಯಾವ ಲೋಕಗಳು ಇವೆಯೋ ತಾನ್ = ಅಂತಹ ಲೋಕಗಳನ್ನು ಅಭಿಗಚ್ಛಂತಿ = ಹೊಂದುತ್ತಾರೆ. ನಾಮ = ಇದು ನಿಶ್ಚಯ.

### ಅನುವಾದ

ಯಾರು ಪರಮಾತ್ಮನ ಸ್ವರೂಪವನ್ನು ಸರಿಯಾಗಿತಿಳಿದುಕೊಳ್ಳದೇ ವಿಪರೀತವಾಗಿ ತಿಳಿದುಕೊಳ್ಳುವರೋ ಅವರೆಲ್ಲರೂ ಮೃತರಾದ ಮೇಲೆ ಈ ಅಸದುಪಾಸನೆಯ ಫಲವಾಗಿ ಮಹಾದುಃಖದಿಂದ ಕೂಡಿದ ಮತ್ತು ಸ್ವಲ್ಪವೂ ಸುಖವಿಲ್ಲದ ಗಾಢಾಂಧಕಾರದಿಂದ ಅಸುರರು ಹೊಂದುವಂತಹ ಲೋಕಗಳಿಗೆ ಹೋಗುತ್ತಾರೆ.

### ವಿವರಣೆ

ಯಾರು ಭಗವಂತನನ್ನು ಮರೆಯುವರೋ ಅಥವಾ ವಿಪರೀತವಾಗಿ ತಿಳಿಯುತ್ತಾರೋ

ಶ್ರೀರಾಘವೇಂದ್ರ ಸ್ವಾಮಿಗಳ ಮಠ, 50ನೇ ಸೆಕ್ಟರ್, ಪ್ಲಾಟ್ ನಂ.81, ನವನಗರ, ಬಾಗಲಕೋಟೆ. ✆: 08354-237234



ಅವರಿಗೆ ವಿನಾಶವು ನಿಶ್ಚಿತ. ಭಗವಂತನು ಅನಂತಗುಣಪೂರ್ಣ. ಸರ್ವೋತ್ತಮ. ಜಗಜ್ಜನ್ಮಾದಿಕಾರಣ ಮತ್ತು ಸರ್ವಾಂತರ್ಯಾಮಿ. ಇದು ಭಗವಂತನ ನಿಜ ಸ್ವರೂಪ. ಅವನ ನಿಜ ಸ್ವರೂಪಕ್ಕಿಂತ ವಿಪರೀತವಾಗಿ ತಿಳಿದುಕೊಳ್ಳುವುದೆಂದರೆ ಭಗವಂತನ ಹತ್ಯೆಮಾಡಿದಂತೆ ಎಂದು ಉಪನಿಷತ್ತು ಹೇಳುತ್ತದೆ. ಸತ್ಯ ಸನಾತನವಾದ ಭಗವಂತನ ಹತ್ಯೆಯನ್ನು ಯಾರೂ ಮಾಡಲಾರರು. ಆದರೆ ಅವನನ್ನು ವಿಪರೀತವಾಗಿ ತಿಳಿದರೆ ಒಂದು ರೀತಿಯ ಹತ್ಯೆ ಮಾಡಿದಂತೆ ಅಪಚಾರವೇ ಆಗುವುದು. ಈ ರೀತಿ ಅಸದುಪಾಸಕರು ತಾವು ನಿಂತ ಕೊಂಬೆಯ ಬುಡವನ್ನೇ ಕತ್ತರಿಸಹೊರಟಂತಾಗುತ್ತದೆ. ಜಗತ್ತಿನ ತಾಯಿಬೇರು ಎನಿಸಿದ ಭಗವಂತನ ಇರವನ್ನು ಅಥವಾ ಆತನ ಹಿರಿಮೆಯನ್ನು ಅಲ್ಲಗಳೆಯುವವರು ಆತ್ಮಘಾತಿಗಳು. ಆತ್ಮಘಾತಿಗಳಾದ ಇವರು 'ಆತ್ಮಹನಃ' ಎನಿಸುತ್ತಾರೆ. ಇಂಥವರು ಬದುಕಿನಲ್ಲಿ ದೊರೆತ ಅವಕಾಶಗಳನ್ನು ಭಗವಂತನ ದ್ವೇಷದಲ್ಲೇ ಕಳೆಯುತ್ತಾರೆ. ಬಾಳುತೀರಿದ ಬಳಿಕ ತಮಸ್ಸಿನಲ್ಲಿ ಕೊಳೆಯುತ್ತಾರೆ. ಭಗವಂತನಿಗೆ ಬೆನ್ನುಹಾಕಿ ಬಾಳುಬಯಸುವ ಇವರು ಎಂದಿಗೂ ಮರಳಿಬಾರದ ತಮಸ್ಸಿನ ದಾರಿಯನ್ನೇ ಹಿಡಿಯುತ್ತಾರೆ. ಆದ್ದರಿಂದ ಎಂದಿಗೂ ಅಸದುಪಾಸನೆಯನ್ನು ಮಾಡಬಾರದು ಎಂದು ಉಪನಿಷತ್ತು ಈ ಮೂಲಕ ಎಚ್ಚರಿಸುತ್ತಿದೆ.

ಪ್ರಕೃತ ಮಂತ್ರದಲ್ಲಿ ಅಸುರ್ಯಾಂಬ ಪದವನ್ನು ವಿವರಿಸುತ್ತ ಕೆಲವರು ಈ ಪದಕ್ಕೆ ಸೂರ್ಯನಿಲ್ಲದ ಅಥವಾ ಸೂರ್ಯನ ಬೆಳಕಿಲ್ಲದ ಲೋಕವೆಂದು ಅರ್ಥಮಾಡಿದ್ದಾರೆ. ಆದರೆ 'ಅಂಧೇನ ತಮಸಾವೃತಾಃ' ಎಂದು ಮುಂದಿನ ವಾಕ್ಯದಲ್ಲಿ ಕತ್ತಲೆ ತುಂಬಿದ ಲೋಕವೆಂದು ಹೇಳಿರುವುದರಿಂದ ಸೂರ್ಯನ ಬೆಳಕಿಲ್ಲವೆಂಬುದು ಸ್ಪಷ್ಟವಾಗುವಾಗ ಪುನಃ ಅದನ್ನು ಹೇಳುವ ಅವಶ್ಯಕತೆಯಿಲ್ಲ. ಹಾಗಾದರೆ ಅಸುರ್ಯಾ ಎಂಬ ಪದಕ್ಕೆ ಅರ್ಥವೇನು ಎಂಬ ಪ್ರಶ್ನೆ ಎಂದರೆ ಆಚಾರ್ಯರು ತಮ್ಮ ಭಾಷ್ಯದಲ್ಲಿ 'ಆನಂದವಿರೋಧಿ' ಮತ್ತು ಅಸುರರಿಗೆ ಉಚಿತ (ಯೋಗ್ಯವಾದುದು) ಎಂದು ಅರ್ಥೈಸಿದ್ದಾರೆ. ಈ ವಿಷಯವನ್ನು ಸ್ಪಷ್ಟ ಪಡಿಸಲು ಭಾಗವತ ಹಾಗೂ ವಾಮನ ಪುರಾಣಗಳ ಆಧಾರ ನೀಡುತ್ತ

**ಅಸುರ್ಯಾ ನಾಮ ತೇ ಲೋಕಾಸ್ತಾನ್ ಯಾಂತಿ ವಿಮುಖಾಹರೌ ।**
**ನ ಚ ರಮಂತ್ಯಹೋ ಅಸದುಪಾಸನಯಾಽತ್ಮಹನ ॥ (ಭಾ. ಪು. 10-94-23)**

ಅಸದುಪಾಸಕರಿಗೆ ಆನಂದವೇ ದೊರೆಯುವುದಿಲ್ಲ. ಅವರು ಸ್ವಲ್ಪವೂ ಸುಖವನ್ನು ಪಡೆಯದೇ ಮಹಾದುಃಖವನ್ನೇ ಪಡೆಯುವರು ಎಂದು ನಿರೂಪಿಸಿದ್ದಾರೆ.

ಅಂತೂ ಭಗವದ್ವಿಮುಖರಾದ ಆಸುರೀ ಪ್ರವೃತ್ತಿಯ ಜನರಿಗೆ ಕತ್ತಲಕೋಣೆಯಿಂದ ಬಿಡುಗಡೆಯಿಲ್ಲ. ಅದುವೇ ಅವರಿಗೆ ಶಾಶ್ವತಧಾಮ. ಆದ್ದರಿಂದ ಸಾಧಕರು ಎಂದೂ ಈ ಮಾರ್ಗವನ್ನು ಅನುಸರಿಸುವುದು ಸರಿಯಲ್ಲ.

ಲೌಕಿಕ ಜೀವನದಲ್ಲಿ, ಮನೆಯ ಹಿರಿಯ ಕಚೇರಿಯ ಅಧಿಕಾರಿ ಮುಂತಾದವರ ಬಗ್ಗೆ ವಿಪರೀತವಾಗಿ ನಡೆದುಕೊಂಡಲ್ಲಿ ಜೀವನದಲ್ಲಿ ಅನೇಕ ಕಷ್ಟ ಹಾಗೂ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ. ಹೀಗಿರುವಾಗ ಸರ್ವೋತ್ತಮನಾದ ಭಗವಂತನ ವಿಷಯವಾಗಿ ವಿಪರೀತಜ್ಞಾನವನ್ನು ಹೊಂದಿದಲ್ಲಿ ಪುಣ್ಯಲೋಕಗಳನ್ನು ಪಡೆಯಲು ಸಾಧ್ಯವೇ ಇಲ್ಲ.

**(ಮುಂದುವರಿಯುವುದು)**

# ಸುಗುಣಾಂತರಂಗ

ಸಂಪುಟ : 20 ಕರ್ಕಾಟಕ ಮಾಸ ಸಂಚಿಕೆ : 8 ಆಗಸ್ಟ್ 2005



## ಸುಗುಣ ಬಳಗ

**ಸಂಸ್ಥಾಪಕರು :**

**ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು**

**ನಿರ್ದೇಶಕ** : ಬನ್ನಂಜೆ ಗೋವಿಂದಾಚಾರ್ಯ

**ಸಂಪಾದಕ** : ಎಂ. ರಾಧಾಕೃಷ್ಣ ರಾವ್

**ಪ್ರಕಾಶಕ** : ಪ್ರಸನ್ನಾಚಾರ್ಯ

**ಮುದ್ರಕ** : ಬಿ.ಜಿ. ಸುಬ್ಬರಾವ್

**ಸಲಹಾ ಮಂಡಳಿ**

ಬನ್ನಂಜೆ ರಾಮಾಚಾರ್ಯ

ಮಳಗಿ ಜಯತೀರ್ಥಾಚಾರ್ಯ

ಡಾ। ಯು. ಪಿ. ಉಪಾಧ್ಯಾಯ

ಬಿಂದು ಮಾಧವಾಚಾರ್ಯ ನಾಗಸಂಪಿಗೆ

ಸಗ್ರಿ ರಾಘವೇಂದ್ರ ಉಪಾಧ್ಯಾಯ

ಡಾ। ಎನ್. ವೆಂಕಟೇಶ ರಾವ್

ಚಿಪ್ಪಗಿರಿ ನಾಗೇಂದ್ರಾಚಾರ್ಯ

ಗಂಜೀಫಾ ರಘುಪತಿ ಭಟ್

ಕಡೆಕಾರು ಶ್ರೀಶ ಭಟ್

ಉಡುಪಿ ರಾಮನಾಥಾಚಾರ್ಯ

ಬಿ. ಜಿ. ರವಿಕುಮಾರ್



**ಸಂಪರ್ಕವಿಳಾಸ :**

ಸಂಚಾಲಕ, ಸುಗುಣಮಾಲಾ ಮಾಸಪತ್ರಿಕೆ

ರಥಬೀದಿ, ಉಡುಪಿ - 576 101, ಉಡುಪಿ ಜಿಲ್ಲೆ, ಕರ್ನಾಟಕ

ದೂರವಾಣಿ : **(0820) 2522222, 2531047**

Tel Fax : 0820-2521272

E-Mail:mprasannaacharya@yahoo.com

Website:http://WWW.shreeputhige.org



**ಚಂದಾವಿವರ**

**ವಾರ್ಷಿಕ: ರೂ. 80/- 15 ವರ್ಷ ರೂ. 1000/-**

**ಜಾಹೀರಾತು ವಿವರ :**

ಅರ್ಧಪುಟಕ್ಕೆರೂ.750/- ಒಂದುಪುಟಕ್ಕೆರೂ.1500/-



| | |
|---|---|
| **ಮರ್ಮಮೀಮಾಂಸೆ** - ಸುಶ್ರೀ | 4 |
| **ಶ್ರೀ ಸುಧಾ ಸುವಚನ** ಲೇಖಾಂಕ - 40<br>ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರು. | 41 |
| **ಆಸಕ್ತಿ - ಯುಕ್ತಿ**<br>ಎ. ಬಿ. ಕುಂಜಾರ್, ಬೆಂಗಳೂರು | 9 |
| **ಶ್ರೀ ಜಯತೀರ್ಥರು**<br>ಚಿಪ್ಪಗಿರಿ ನಾಗೇಂದ್ರಾಚಾರ್ಯ | 45 |
| **ಈಶಾವಾಸ್ಯೋಪನಿಷತ್**<br>ಬಿಂದುಮಾಧವಾಚಾರ್ಯ, ನಾಗಸಂಪಿಗೆ | 46 |
| **ವೇದವ್ಯಾಸರು ನಿರ್ದೇಶಿದ ಗಾಯತ್ರಿ ಜಪ**<br>ಕೋಟೇಶ್ವರ ಸೂರ್ಯನಾರಾಯಣ ರಾವ್ | 12 |
| **ಏಕಾದಶಿ ಮಹಿಮೆ**<br>ಅಚಿಂತ್ಯೋ ಬಿಣಗಾ | 15 |
| **ನಿಸರ್ಗೋಪಚಾರ ಚಿಕಿತ್ಸಾ**<br>ಡಾ। 'ಜೀವಿ' ಕುಲಕರ್ಣಿ | 17 |
| **ಮಾಯಾವಾದಖಂಡನ**<br>ಪ್ರೊ। ಎಸ್. ವೆಂಕಟೇಶ ಮೂರ್ತಿ | 21 |
| **ಚಿಂಚೋಳಿ ವೆಂಕಣ್ಣಾಚಾರ್ಯ**<br>ಸಗ್ರಿ ರಾಘವೇಂದ್ರ ಉಪಾಧ್ಯಾಯ | 25 |
| **ಶಬ್ದ ವ್ಯಾಖ್ಯೆ**<br>ಮ. ಗೋ. ಹೆಗಡೆ | 27 |


## 2005 ಸೆಪ್ಟಂಬರ್ ತಿಂಗಳ ವಿಶೇಷಗಳು

3 ಅಮಾವಾಸ್ಯೆ

6 ಗೌರಿತೃತೀಯಾ - ಸಾಮೋಪಾಕರ್ಮ

7 ಗಣೇಶ ಚತುರ್ಥಿ

8 ಋಷಿಪಂಚಮೀ - ಭೂವರಾಹ ಜಯಂತಿ

13 ಉತ್ತರಾರ್ಕಃ

14 ಸರ್ವೈಕಾದಶೀ

15 ಶ್ರವಣೋಪವಾಸ, ಕ್ಷಿರವ್ರತಾರಂಭ, ದಧಿ ವಾಮನ ಜಯಂತಿ

16 ಕನ್ಯಾಸಂಕ್ರಮಣ

17 ಅನಂತವ್ರತಂ (ಮೊಂಪು)

18 ಪೂರ್ಣಿಮಾ - ಮಹಾಲಯ ಆರಂಭ

21 ಸಂಕಷ್ಟ ಚತುರ್ಥಿ ಚಂ. ಉ. ಘಂ. 9-09

26 ಹಸ್ತಾರ್ಕಃ

29 ಸರ್ವೈಕಾದಶಿ






# ಸಮುದ್ರಶಯನಸಂದೇಶ

ಸಮುದ್ರ ಶಯನನ ಶಯನಾಯನದ ಸಂದರ್ಭ ಶಯನೀಏಕಾದಶೀ ದಿನ ಭಕ್ತರೆಲ್ಲಾ ಸಮುದ್ರರಾಗುವುದರಲ್ಲಿ ಅರ್ಥಾತ್ ಮುದ್ರಾಸಹಿತರಾಗುವುದರಲ್ಲಿ ಸನ್ಮುದ್ರಾಂಕಿತರಾಗುವುದರಲ್ಲಿ, ಜಗದ್ವ್ಯಾಪ್ತನು ಸುಪ್ತನಾಗುವ ಸಂದರ್ಭ ತಪ್ತಮುದ್ರಾಂಕಿತರಾಗುವುದರಲ್ಲಿ ಸುಪ್ತ ಸಂದೇಶವಿದೆ. ಗುಪ್ತ ಸಂದೇಶವಿದೆ.

ಸುಪ್ತ ಸಂದೇಶದ ಸುತ್ತ ಹುತ್ತ ಆವರಿಸಿದಂತಿದೆ. ಚಿನ್ಮುದ್ರೆಯ ಸುತ್ತ ಬೇಲಿ ಬೆಸೆದಂತಿದೆ.

ಮುದ್ರೆ ಅಂದರೆ ಚಿಹ್ನೆ, ಜ್ಞಾಪಕ. ರಾಷ್ಟ್ರಮುದ್ರೆ ಇತ್ಯಾದಿ.

ಮುದ್ರೆ ಅಂದರೆ ಭಾವ, ಅಭಿಭಾವ, ಮುಖಮುದ್ರೆ ಇತ್ಯಾದಿ.

ಮುದ್ರೆ ಅಂದರೆ ಅರ್ಪಣೆ, ಅರ್ಪಿತ, ಅಧಿಕೃತ ಇತ್ಯಾದಿಯೂ.

ಮುದ್ರೆಗೆ ಮಗದೊಂದರ್ಥ, ಮೂಲಾರ್ಥ - ಮುದಜನಕ, ಮೋದಜನಕ, ಮೋಜು ಎಂದೂ.

ಮುದಂ ರಾತೀತಿ.

ಮುದ್ರಣ ಶಬ್ದವೂ ಮುದ್ರಾಶಬ್ದದ ಅರ್ಥವನ್ನೇ ನೀಡಬಹುದಾದರೂ ಮೂಲತಃ ಮುದ್ರೆಯನ್ನು ನೀಡುವಂತಹದ್ದು ಎಂಬರ್ಥವನ್ನೇ ಮುಖ್ಯವಾಗಿ ಮೂಡಿಸುತ್ತದೆ. ಇನ್ನು ಮುದ್ರಾಶಬ್ದಕ್ಕೆ ಅಕ್ಷರವೆಂಬ ಅರ್ಥವಂತೂ ಪ್ರಚಲಿತವೇ. ಮುದ್ರಾರಾಕ್ಷಸ, ಮುದ್ರಕ ಎಂಬಿತ್ಯಾದಿ.

ಹೀಗೆ ಮುದ್ರಾಶಬ್ದಕ್ಕೆ ಇನ್ನಷ್ಟು ಅರ್ಥಗಳಿರುವ ವಿಪುಲಸಾಧ್ಯತೆಯೊಂದಿಗೇ ಮುದ್ರಾಧಾರಣೆಯಲ್ಲಿ ಮುದ್ರಾಶಬ್ದ ಇವಿಷ್ಟೂ ಅರ್ಥವನ್ನು ಮುಗುಳುಗೊಳಿಸುತ್ತದೆ. ಮುಕ್ತೀಕರಿಸುತ್ತದೆ.

ಮುದ್ರಾಧಾರಣೆ ವಿಷ್ಣು ಚಿಹ್ನೆಗಳ ಧಾರಣರೂಪವಾಗಿ ಚಿಹ್ನಾರ್ಥಕವಾಗಿದ್ದರೆ



'ಮುದ್ರೆಯವರು' ಎಂದು ಮಾಧ್ವಮತಾನುಯಾಯಿಗಳ ಚಿಹ್ನೆಯಾಗಿಯೂ, ಅದು ತನ್ನಿಂದ ತಾನೇ ಮಾರ್ಪಾಟಾಗಿದೆ.

ಮುದ್ರಾಧಾರಣೆ ವಿಷ್ಣುಭಕ್ತಿಭಾವದ ದ್ಯೋತಕವಾಗಿ ಭಾವಾರ್ಥಕವೂ ಆಗಿದ್ದು ಅಧಿಕೃತ ವ್ಯಕ್ತಿಯ ಮುಖಾಂತರ ಮುದ್ರೀಕರಿಸಲ್ಪಡುವ ಮೂಲಕ ಅಧಿಕೃತಾರ್ಥವನ್ನೂ ಅರ್ಪಣಾರ್ಥವನ್ನೂ ಹೊರಹೊಮ್ಮಿಸುತ್ತಾ ತದರ್ಥಕವೂ ಆಗಿದೆ.

ಕೆಲವೊಮ್ಮೆ ಮುದ್ರಾಧಾರಣೆ ಮೋಜು ಮೂಡಿಸುವಂತಹದ್ದು ಗೊತ್ತೇ ಇದ್ದರೂ ಪರಮಾರ್ಥತಃ ಸಂಸಾರತಾಪತ್ರಯದಿಂದ ಸಂತ್ರಸ್ತರಾದವರಿಗೆ ದುರಿತಕ್ಷಯಕಾರಕವಾಗಿ, ಡಾಕುವಿನಂತೆ ರಕ್ಷಾಜನಕವಾಗಿ ಭದ್ರತಾ ಜನಕವಾಗಿ ಸಾಂತ್ವನಾರ್ಥಕವಾಗಿಯೂ ಒಡಮೂಡಿದೆ. ತಪ್ತ ಮುದ್ರೆಯ ಅಚ್ಚು ಹೆಚ್ಚು ಸಮಯ ಉಳಿಯುವುದರೊಂದಿಗೆ ಕ್ಷರವಲ್ಲವೆಂಬ ಭಾವದಲ್ಲಿ ಅಕ್ಷರಾರ್ಥಕವೂ ಆಗಿದೆ ಅನ್ನುವುದರಲ್ಲಿ ಅಡ್ಡಿಯಿಲ್ಲ.

ಹೀಗೆ ಮುದ್ರಾಧಾರಣೆಯ ಮುದ್ರೆ ತನ್ನೆಲ್ಲಾ ಅರ್ಥಗಳನ್ನು ಪ್ರತಿನಿಧಿಸುವುದರೊಂದಿಗೆ ಶಯನಾತ್ಪೂರ್ವದಲ್ಲಿ ನಮ್ಮೆಲ್ಲಾ ಕ್ರಿಯೆಗಳನ್ನು ಮುಕುಲೀಕರಿಸಿ ಮುದ್ರೆ ಹಚ್ಚಿ ಮುಚ್ಚಿ ಸಮುದ್ರಶಯನನಿಗೆ ಅರ್ಪಣ ಮಾಡಿ ಮಲಗಬೇಕು ಎಂಬ ಸಂದೇಶವನ್ನು ವ್ಯಕ್ತಗೊಳಿಸುತ್ತದೆ.

ಸೈನ್ ಹಾಕಿ ಸೀಲು ಒತ್ತಿ ಅಕೌಂಟ್ ಕ್ಲೋಸ್ ಮಾಡಿ ಸಮುದ್ರ ಶಯನಿಗೆ ಗುರುಮುಖಾಂತರ ಅರ್ಪಿಸಿ ಮಗುಮ್ಮಾಗಿ ಮಲಗಿ ಮತ್ತೆ ಪುನಃ ಶಯನೋತ್ತರದಲ್ಲೂ ಅದೇ ರೀತಿ ಪ್ರಾರಂಭಿಸಿ ಎಂಬ ಮುದ್ರೆಯನ್ನು ಅರ್ಪಣ ಸಂಜ್ಞೆಯನ್ನು ಮುದ್ರಾಧಾರಣೆ ನೀಡುತ್ತದೆ.

**ಪ್ರಾತಃ ಪ್ರಭೃತಿ ಸಾಯಾಂತಂ ಸಾಯಾದಿಪ್ರಾತರಂತತಃ**

**ಯತ್ ಕರೋಮಿ ಜಗನ್ನಾಥ ತತ್ ಸರ್ವಂ ತವಪೂಜನಮ್** ಎಂಬ ಸಂದೇಶವನ್ನು ಜ್ಞಾಪಿಸಲೋಸುಗವೇ ಚಾತುರ್ಮಾಸ್ಯದ ಆರಂಭದಲ್ಲೊಮ್ಮೆ ಮತ್ತೆ ಚಾತುರ್ಮಾಸ್ಯದ ಮುಕ್ತಾಯದಲ್ಲೊಮ್ಮೆ ದೇವತೆಗಳ ಶಯನಾದಿಯಲ್ಲೊಮ್ಮೆ ಶಯನಾಂತ್ಯದಲ್ಲೊಮ್ಮೆ ತಪ್ತಮುದ್ರಾಧಾರಣೆಯ ಮುಖಾಂತರ ಭಗವದರ್ಪಣಾ ಸಂಕಲ್ಪ ಮಾಡಿ ಎಂಬ ಸಂದೇಶವನ್ನು ತಪ್ತಮುದ್ರಾಧಾರಣೆ ಗುಪ್ತವಾಗಿ ಮೂಡಿಸುತ್ತದೆ.

**ಉಡುಪಿ ಶ್ರೀ ಪುತ್ತಿಗೆ ಮಠದ ಬೆಂಗಳೂರು ಶಾಖೆ, ಗೋವರ್ಧನ ಶ್ರೀಕೃಷ್ಣಕ್ಷೇತ್ರದಲ್ಲಿ ಇತ್ತೀಚೆ ಸಂಪನ್ನವಾದ ತಪ್ತಮುದ್ರಾಧಾರಣ ಸಂದರ್ಭದಲ್ಲಿ ಶ್ರೀ ಪುತ್ತಿಗೆ ಮಠಾಧೀಶರಾದ**

## ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರ

**ಸಂದೇಶ.**

# ಮಮ್ಮೀಕರಣ?

ಅಲ್ಲಾ ಈ ಇಂಗ್ಲೀಷ್ ಲೇಡಿ ಬಂದು ನಮ್ಮ ಕನ್ನಡಮ್ಮನನ್ನು ಮನೆಯಿಂದ ಹೊರದಬ್ಬುವ ದರ್ದು ತಂದದ್ದೆಂದರೇನು? ಹೆಂಡತಿ ಬಂದ ಮೇಲೆ ಅಮ್ಮ ಬೇಡಲಾದಳೇ? ಕೇಸರೀಕರಣ ಒಮ್ಮೆ ಮಾತ್ರ ನಡೆದುಹೋದರೆ ಈ ಫಾರಿನೀಕರಣ, ಆಂಗ್ಲೀಕರಣ, ಮಮ್ಮೀಕರಣ ನಿರಂತರ ಸಾಂಗೋಪಾಂಗವಾಗಿ ಸಾಗುತ್ತಿದ್ದು ಇದೀಗ ನಮ್ಮ ಕನ್ನಡಮ್ಮನ ಕತ್ತಿಗೆ ಕೈಹಾಕಿ ಮನೆಯಿಂದ ಡಿಬಾರ್ ಮಾಡುವ, ಗಡೀಪಾರ್ ಮಾಡುವ, ಅನಾಥಾಶ್ರಮಕ್ಕೆ ಅಟ್ಟುವ ಹಂತಕ್ಕೆ ಬಂದಿದೆಯೆಂದರೆ ನಮಗೆ ಕನ್ನಡಿಗರಿಗೆ ನಮ್ಮ ಭಾಷೆ, ನಮ್ಮ ಸಂಸ್ಕೃತಿಯೆಂಬ ಅಭಿಮಾನ ಸ್ವಲ್ಪನಾದರೂ ಬೇಡನಾ? ಇಂತಹ ದುಃಸ್ಥಿತಿ ತಮಿಳಮ್ಮ, ತೆಲುಗಮ್ಮ, ಮರಾಠಿಯಮ್ಮಂದಿರಿಗೆ ಕನಸಿನಲ್ಲಾದರೂ ಬರಲಿಕ್ಕೆ ಸಾಧ್ಯನಾ? ಇದನ್ನು ನಾವು ಬಿಲ್‌ಕುಲ್ ಸಹಿಸಲಿಕ್ಕಿಲ್ಲ. ನಾವೆಲ್ಲಾ ಸಾಹಿತಿಗಳು ಇದನ್ನು ಸ್ಟ್ರಾಂಗಾಗಿ ಪ್ರೊಟೆಸ್ಟ್ ಮಾಡುತ್ತೇವೆ ಎನ್ನುತ್ತಾ ಹಿರಿಯ ಸಾಹಿತಿಗಳೊಬ್ಬರು ಮೇಜು ಕುಟ್ಟಿ ಏರಿದ ಧ್ವನಿಯಲ್ಲಿ ಘರ್ಜಿಸಿ ತಮ್ಮ ಮಾತನ್ನು ಮುಗಿಸುತ್ತಾ ಧೊಪ್ಪನೆ ಕುರ್ಚಿಗೆ ಎರಗಿದರು.

ಟ್ರಾಫಿಕ್ ಜಾಮಿನಿಂದಾಗಿ ತಡವಾಗಿಯಲ್ಲದಿದ್ದರೂ ಸ್ವಲ್ಪ ಲೇಟಾಗಿ ಸೀಯಮ್ ಮೀಟಿಂಗ್‌ಗೆ ಬಂದ ನಾನು ಇನ್ನೇನು ಪೂರ್ವ ವೃತ್ತಾಂತಗಳನ್ನೆಲ್ಲಾ ಕ್ರೋಢೀಕರಿಸೋಣವೆನ್ನುವಾಗಲೇ ಮತ್ತೊಬ್ಬ ಯುವ ಪೇರೆಂಟ್ ಎದ್ದು ನಿತ್ತು ಆ ಸಾಹಿತಿಗಳನ್ನು ಸಮಾಧಾನ ಪಡಿಸುತ್ತಾ

ಅಲ್ಲಾ ಸಾಹಿತಿಗಳೇ ಫಾರಿನ್ನಿನ ಹಾಗೆ ಅಮ್ಮನನ್ನು ನಾವೀಗ ಮನೆಯಿಂದ ಹೊರ ಹೋಗಲಿಕ್ಕೆ ಹೇಳುವುದಿಲ್ಲ. ಅಮ್ಮ ಇಡೀ ಮನೆ ಸುತ್ತಾಡಿಕೊಂಡಿರುವುದು ಬೇಡ. ಅವಳು ಒಂದೇ ಕೋಣೆಯಲ್ಲಿರಲಿ. ಅವಳನ್ನೂ ಒಂದು ಸಬ್ಜೆಕ್ಟೂಂತ ಮಾಡುವುದರಲ್ಲಿ ನಾವೇನೂ ಈಗ ಆಕ್ಷೇಪಮಾಡುತ್ತಿಲ್ಲ. ಎಷ್ಟೆಂದರೂ ಅಮ್ಮನಿಗೂ ಕೂಡುವುದಿಲ್ಲವಲ್ಲ? ಜಾಬು ಮಾಡಲು, ಜೇಬು ತುಂಬಿಸಲು ಬರುವುದಿಲ್ಲವಲ್ಲ? ಮನೆಯಿಡೀ ಅವಳು ಯಾಕೆ ಸುತ್ತಾಡಬೇಕು? ನೀವು ಮುದಿಯಾಗಿ ಯೋಚಿಸುವುದಕ್ಕಿಂತ ಸ್ವಲ್ಪ ಯಂಗಾಗಿ ಯೋಚಿಸಿ ನೋಡಿ ಎಂದು ರಿಕ್ವೆಸ್ಟ್ ಮಾಡಿದಾಗ -

ಅಲ್ಲರೀ, ನೀವು ಮೊದಲು ಕನ್ನಡ ಮಾಧ್ಯಮ ಶಾಲೆಯನ್ನು ತೆರೆದು ಅದನ್ನು ಕನ್ನಡ ಮೀಡಿಯಂ ಶಾಲೆಗೊಳಿಸಿ ಮತ್ತೆ ಅದನ್ನೂ ಬದಲಿಸಿ ಕನ್ನಡ ಮೀಡಿಯಂ ಸ್ಕೂಲ್ ಮಾಡಿದಿರಿ. ಇದೀಗ ಅದನ್ನೂ ಬದಲಿಸಿ ಇಂಗ್ಲೀಷ್ ಮೀಡಿಯಂ ಸ್ಕೂಲ್ ಮಾಡಿ, ಬರೇ ಇಸ್ಕೂಲ್ ಮಾಡಿ ಕೂಲಾಗಿ ಕರ್ನಾಟಕದಲ್ಲೇ ಕನ್ನಡವನ್ನು ಕನ್ನಡಿಯ ಗಂಟು, ನಿಘಂಟು ಮಾಡುತ್ತಿದ್ದೀರಲ್ಲಾ? ಕೊನೇಗೆ ಆ ಅಮ್ಮನನ್ನು ಆ ಒಂದು ಕೋಣೆಯಿಂದಲೂ ಹೊರ ಹಾಕುವ ಹುನ್ನಾರವಲ್ಲವಾ ಇದು? ಅದೇನು ನಿಮಗೆ ಆಂಗ್ಲ ಹೆಂಡತಿ ಹೆಂಡ ತಿನ್ನಿಸಿದ್ದಾಳಾ? ಅದ್ಯಾಕ್ರೀ ನಿಮಗೆ ಆ ಇಂಗ್ಲೀಷ್ ಹೆಂಡತಿ ಮೇಲೆ





ಹೆಂಡದಷ್ಟು ಪ್ರೀತಿ? ಮೂರನೇ ಕ್ಲಾಸಿನ ಮೇಲೆ ಅವಳು ಬಂದರೆ ಸಾಲದಾ? ಅದು ಲೇಟಾಗುತ್ತಾ? ಎಂದು ಪೂರ್ವಸಾಹಿತಿಗಳು ಪುನಃ ಗುಟುಕಿಸಿದರು.

ಅಷ್ಟರಲ್ಲಿ ಹಿಂದಿನ ಬೆಂಚಿನಲ್ಲಿದ್ದ ಮತ್ತೊಬ್ಬ ಯುವ ಪೇರೆಂಟ್ ಎದ್ದು ನಿತ್ತು ಸರ್ ಸಬ್ಜೆಕ್ಟ್ ಎಲ್ಲೆಲ್ಲೋ ಹೋಗುತ್ತಿದೆ. ಸಾಹಿತಿಗಳೇ ಈಗ ಪಾಯಿಂಟ್ ನೋಡಿ. ಆದೇನಾಗುತ್ತದೆಯೆಂದರೆ ನಮ್ಮ ಮಕ್ಕಳು ಕೆಲವೊಮ್ಮೆ ಈ ಮಕ್ಕಳ ಸಮ್ಮೇಳನ ಮತ್ತು ಅದು ಇದಕ್ಕೆಲ್ಲಾ ಜೊತೆ ಸೇರಿದಾಗ ಕೆಲವೊಮ್ಮೆ ನಮ್ಮ ಮಕ್ಕಳೂ ಮುಂದುಳಿದವರ ಮಕ್ಕಳೂ ಮಾತಾಡುವಾಗ ಅಥವಾ ಜಗಳವಾಡುವಾಗ ಆ ಪುಟ್ಟ ಮಕ್ಕಳು ತಮ್ಮ ತಂದೆ ತಾಯಿಗಳನ್ನು ಮಮ್ಮಿ ಡ್ಯಾಡಿ ಅನ್ನುತ್ತಿರುವಾಗ ನಮ್ಮ ಮಕ್ಕಳು ಬರೇ ಅಪ್ಪ ಅಮ್ಮ ಅನ್ನುತ್ತಿದ್ದರೆ ನಮಗೆ ಅದು ತುಂಬಲಾರದ ಅವಮಾನವಲ್ಲವಾ? ನಮ್ಮ ಮನೆಯವರಿಗಂತೂ ಗಸಕ್ಕೆಂದು ಹೊಟ್ಟೆಗೆ ಚೂರಿ ಹಾಕಿದಂತಾಗುವುದಿಲ್ಲವಾ? ಹಾಗೆಯೇ ಫಾರಿನಿನಿಂದ ಬಂದವರು ನಮ್ಮ ಕಾಲೋನಿಗೆ ಭೇಟಿಕೊಟ್ಟಾಗ ಅವರು ನಮ್ಮ ಮಕ್ಕಳ ಬಳಿ ಹೌಆರ್ಯೂ ಎಂದು ಕೇಳಿದರೆ ನಮ್ಮ ಮಕ್ಕಳು ಹೌ ಹಾರಬೇಕಾ?

ಅದಕ್ಕೋಸ್ಕರ ನಾವು ಹೇಳೋದೇನೆಂದರೆ ಇಷ್ಟರತನಕ ನಮ್ಮನ್ನು ಹಿಂದುಳಿಸಿದ್ದಾಯ್ತು. ಇನ್ನು ಮುಂದೆಯಾದರೂ ಮುಂದುಳಿದವರಂತೆ ನಮ್ಮನ್ನು ಮುಂದೆ ಮಾಡಿ. ನಮಗೆ ಮುಂದುಳಿದವರಂತೆ ಮಕ್ಕಳಿಗೆ ಷೂ ಟೈ ಸಿಕ್ಕಿಸಿ ಡೊನೇಷನ್ ಕೊಟ್ಟು ಇಂಗ್ಲೀಷ್ ಇಸ್ಕೂಲಿಗಳಿಗೆ ಕಳುಹಿಸಲಾಗುವುದಿಲ್ಲವಾದ್ದರಿಂದ ಮತ್ತು ಕನ್ನಡ ಶಾಲೆಗಳನ್ನೆಲ್ಲಾ ಮುಂದೆ ಮುಚ್ಚಲೇ ಬೇಕಾಗುವುದರಿಂದಲೂ ಈಗಲೇ ಕನ್ನಡ ಶಾಲೆಗಳಲ್ಲಿ ಒಂದನೇ ಇಯತ್ತೆಯಿಂದಲೇ ನಮ್ಮ ಹಿಂದುಳಿದ ಮಕ್ಕಳಿಗೂ ಮಮ್ಮೀ ಡ್ಯಾಡಿ ಕಲಿಸಿಕೊಡಿ. ಒಂದನೇ ತರಗತಿಯಿಂದಲೇ ನಮ್ಮ ಮಕ್ಕಳಿಗೆ ಟೈ ಷೂ ವಿತರಿಸಿ. ಇಲ್ಲದೇ ಹೋದರೆ ಕನ್ನಡ ಹಿಂದುಳಿದವರ ಭಾಷೆ, ಇಂಗ್ಲೀಷ್ ಬ್ರಾಹ್ಮಣರ ಭಾಷೆಯಾಗಿ ಇಂಗ್ಲೀಷಿಗೇ ಕುತ್ತು ಬರುವ ಸಂಭವವಿದ್ದು ಈಗಿಂದೀಗಲೇ ಈ ಇಂಗ್ಲೀಷನ್ನು ಉಳಿಸಲಿಕ್ಕೆ ಮತ್ತು ಜಾತೀವಾದ ತಡೆಯಲಿಕ್ಕೆ ನಮ್ಮ ಮಕ್ಕಳಿಗೂ ಒಂದನೇ ಇಯತ್ತೆಯಿಂದಲೇ ಇಂಗ್ಲೀಷ್ ಕಲಿಸಿಕೊಡಿ ಅನ್ನುವುದು ಸಾರ್. ಹಿಂದೆ ಕೂತವರು ಹಂಪ್ ಜಂಪ್‌ಗಳಲ್ಲಿ ಕಷ್ಟಪಡುವುದು ಮುಂದೆ ಕೂತವರಿಗೆ ಅದ್ಹೇಗೆ ಗೊತ್ತು ಸರ್? ಅದಕ್ಕೋಸ್ಕರ ಬಸ್ಸುಗಳಲ್ಲೂ ಹಿಂದುಳಿದವರಿಗೆ ಮುಂದಿನ ಸೀಟು ಮೀಸಲಿಡಬೇಕು ಸಾರ್. ಸ್ವಲ್ಪ ಯೋಚಿಸಿ ಸಾರ್ ಎನ್ನುತ್ತಿರಲು

ಕಿಡಿಗೇಡಿ ಸಾಹಿತಿಯೊಬ್ಬರು ಎದ್ದು ನಿತ್ತು ಹಾಗಿದ್ದರೆ ಒಂದು ಉಪಾಯ ಮಾಡೋಣ, ಎಲ್ಲಾ ಇಂಗ್ಲೀಷ್ ಸ್ಕೂಲ್‌ಗಳಲ್ಲೂ ಕೂಡಾ ಮೂರನೇ ಕ್ಲಾಸಿನಿಂದಲೇ ಇಂಗ್ಲೀಷ್ ಶುರು ಮಾಡೋಣ. ಎಲ್ಲರೂ ಮೂರನೇ ಕ್ಲಾಸಿನ ನಂತರವೇ ಮಮ್ಮಿ ಡ್ಯಾಡಿ ಎಂದರೆ ಸಾಕು. ಅಷ್ಟರತನಕ ಪೂರ್ತಿ ಕನ್ನಡವನ್ನೇ ಓದಲಿ ಎಂದು ತನ್ನ ಸಲಹೆಯ ಎರಡು ವಾಕ್ಯಗಳನ್ನು ಉದುರಿಸಿದ್ದೇ ತಡ ಮುಂದುಳಿದ ಪೇರೆಂಟ್‌ಗಳೆಲ್ಲಾ ಎದ್ದು ಬಂದು ಮುಗಿಬಿದ್ದು ಏನು ಹೇಳುತ್ತೀರಿ, ನಮ್ಮ ಮಕ್ಕಳನ್ನು ಹಾಳು ಮಾಡ್ಲಿಕ್ಕೆ ಹೊರಟಿದ್ದೀರಾ, ನಾವು ಬಿಡುವುದಿಲ್ಲ ಎಂದು ಬೊಬ್ಬಿಡುತ್ತಾ ಕಿಡಿಗೇಡಿ ಸಾಹಿತಿಯ

ಭುಜ ಒತ್ತಿ ಕೂರಿಸಿ ನಿಮ್ಮಂತಹ ಶಿಲಾಯುಗದ ಸಾಹಿತಿಗಳು ಇಲ್ಲಿಗೆ ಬರಬಾರದಿತ್ತು ಎಂದು ಉದ್ಗರಿಸಿದಾಗ ಸಾಹಿತಿಗಳು ಮೌನವೇ ಮಾಣಿಕ್ಯ ಎನ್ನುತ್ತಾ ಶಿಲಾಮೂರ್ತಿಯಂತಾದರು.

ಅಷ್ಟಾಗುವಾಗ ಪಕ್ಕದಲ್ಲಿದ್ದ ಸದ್ವಿತೀಯಸಮಾನಮನಸ್ಕ ಸಾಹಿತಿಗಳೊಬ್ಬರು ಅವರನ್ನು ಸಮಾಧಾನ ಪಡಿಸುತ್ತಾ ಸಾರ್ ಎಳೇ ಮಕ್ಕಳ ಹತ್ತಿರ ಮುಂದೇನಾಗುತ್ತೀಯಾ ಎಂದು ಕೇಳಿದಾಗ ಟೀವಿಯಲ್ಲಿ ನಿರಂತರ ನೋಡುವ ಪೋಲೀಸ್‌ಗಳನ್ನು ನೋಡಿ ನಾನು ಪೊಲೀಸ್ ಆಗುತ್ತೇನೆ ಎಂದಂತೆ ಈ ನಮ್ಮ ಜನಗಳಿಗೆ ನಿರಂತರ ನೂರೈವತ್ತು ವರ್ಷ ಸೂಟುಬೂಟು ಧರಿಸಿದ ಆ ಇಂಗ್ಲೀಷರನ್ನು ನೋಡಿ ನೋಡಿ ಅವರೇ ಆದರ್ಶ ಪುರುಷರು ಅವರಂತೆನೇ ನಮ್ಮ ಮಕ್ಕಳು ಆಗಬೇಕೂಂತ ರಕ್ತದಲ್ಲಿ ಕೂತುಬಿಟ್ಟಿದೆ ಸಾರ್. ಅವರು ಬಿಟ್ಟುಹೋದ ಮೇಲಂತೂ ಅಮ್ಮ ಹೋದ ಮೇಲೆ ಅಮ್ಮನ ನೆನಪು ಉಕ್ಕಿ ಬರುವಂತೆ ಅವರ ನೆನಪೇ ನಮ್ಮ ಜನಗಳಿಗೆ ಕಾಡುವುದು ಸಹಜ ಸಾರ್. ಅವರು ಹೋದರೂ ಈಗಂತೂ ಟೀವಿಯಲ್ಲೂ ಅವರೇ ಪುನಃ ಕಾಣಿಸುವುದರಿಂದ ಅದಕ್ಕೇನು ಮಾಡಲೂ ಬರುವುದಿಲ್ಲ ಸಾರ್. ಆದ್ದರಿಂದಲೇ ಸಾರ್ ನಮ್ಮ ಆಧುನಿಕ ಅಪ್ಪಂದಿರಿಗೆ ತಮ್ಮ ಮಕ್ಕಳು ವೈದ್ಯರಾಗುತ್ತೇವೆ ಎಂದಾಗ ಸಿಟ್ಟು ಬಂದು ಡಾಕ್ಟರ್ ಆಗುತ್ತೇವೆ ಎಂದಾಗ ಸಂತೋಷವಾಗುವುದು ಸಾರ್. ತಮ್ಮ ಮನೆ ಹ್ಯೊಗೆ ಗುಡ್ಡೆಯಲ್ಲಿ ಇದೆ ಎನ್ನುವಾಗ ಸಿಟ್ಟು ಬಂದು ಸ್ಯಾಂಡ್‌ಹಿಲ್‌ನಲ್ಲಿ ವುಡ್‌ಬ್ರಿಜ್‌ನಲ್ಲಿ ಇದೆ ಅನ್ನುವಾಗ ಬೀಗುವುದು ಸಾರ್. ಕನ್ಯೆಯರು ಕೂಡಾ ಪುರೋಹಿತರೆಂದರೆ ಒಪ್ಪುವುದಿಲ್ಲ ಸಾರ್. ಪ್ರೀಸ್ಟ್ ಎಂದರೆ ಒಪ್ಪುತ್ತಾರೆ ಸಾರ್. ಆದ್ದರಿಂದ ಇಂದಿಗೆ ಈ ಇಂಗ್ಲೀಷೀಕರಣವನ್ನು ಯಾರಿಗೂ ತಡೆಯಲಿಕ್ಕೆ ಸಾಧ್ಯವಿಲ್ಲ ಸಾರ್ ಎಂದು ಪಿಸುಗುಟ್ಟುತ್ತಾ ಸಮಾಧಾನಿಸುತ್ತಿರಲು

ಇತ್ತ ಶಿಕ್ಷಕರೊಬ್ಬರು ಎದ್ದು ನಿತ್ತು ಈ ಜಾತಿಗೀತಿ, ಹಿಂದುಳಿದ ಮುಂದುಳಿದ ಇತ್ಯಾದಿ ಮಿತಿಮೀರಿ ಹೋಗುತ್ತಿದೆ. ಪ್ರತಿಯೊಂದರಲ್ಲೂ ಆ ಜಾತಿ ಈ ಜಾತಿ ಹಿಂದುಳಿದ ಮುಂದುಳಿದ ಇತ್ಯಾದಿ ಪರಿಗಣನೆ ಅಪರಿಮಿತಗೊಳ್ಳುತ್ತಿದೆ. ಹಿಂದುಳಿದಶಾಹೀ, ಮುಂದುಳಿದ ಶಾಹೀ ಬೆಳೆಯುತ್ತಿದೆ. ಇದು ಹೀಗೇ ಇದೇ ವೇಗದಲ್ಲಿ ಮುಂದುವರಿದರೆ ಮುಂದೆ ಪ್ರತಿಬೀದಿಯಲ್ಲೂ ಜಾತಿಜಗಳ ಬೀದಿಜಗಳ ನಿರಂತರವಾಗುತ್ತದೆ. ಅದಕ್ಕೋಸ್ಕರ ಈ ಸ್ಕೂಲುಗಳಲ್ಲಿ ಭರ್ತಿಮಾಡಬೇಕಾಗಿರುವ ಜಾತಿಕಲಂಗಳನ್ನೇ ಕಥಂ ಮಾಡಬೇಕು. ಅಲ್ಲಿಂದಲೇ ಈ ಸಮಸ್ಯೆಗಳೆಲ್ಲಾ ಉದ್‌ಭವವಾಗುವುದು. ಯಾರೂ ತಮ್ಮ ಹೆಸರಿನಲ್ಲಿ ಜಾತಿಸೂಚಕ ಪದಗಳನ್ನಿಡಬಾರದು ಎಂದು ರೂಲು ಮಾಡಬೇಕು. ಆಗ ನಿಜವಾಗಿಯೂ ಈ ದೇಶ ಸುಂದರವಾಗುತ್ತದೆ ಎಂದು ಹೇಳಿದ್ದೇ ತಡ ಅಷ್ಟರ ತನಕ ಜಗಳ ಕೇಳುತ್ತಾ ಮೋಜು ನೋಡುತ್ತಿದ್ದ ರಾಜಕಾರಣಿಗಳೊಬ್ಬರು ಎದ್ದು ನಿತ್ತು ಈ ಕೋಮುವಾದಿಯನ್ನು, ಈ ಮೂಲಪ್ರೇತವಾದಿಯನ್ನು ಈ ಪುರೋಹಿತ ಶಾಹಿಯನ್ನು ಈ ಕೂಡಲೇ ಹೊರದಬ್ಬಬೇಕು. ವಿಷಯಾಂತರ ಮಾಡಿ ಇಲ್ಲೂ ಕೋಮುವಾದವನ್ನು ಬಿತ್ತಲಿಕ್ಕೆ ಆ ಪಾರ್ಟಿಯವರು ಇವರನ್ನು ಕಳುಹಿಸಿದ್ದಾರೆ. ಈ ದೇಶ ಹಾಳು ಮಾಡಲಿಕ್ಕೆ ಹೊರಟಿದ್ದಾರೆ. ನಿಮ್ಮ ಮಾತನ್ನು ಇಲ್ಲಿಗೇ ಸಾಕು ಮಾಡಿ





ಎಂದು ಆರ್ಭಟಿಸುವಷ್ಟರಲ್ಲಿ ಭಟ್ರಮಗ ಆ ಮೇಸ್ಟ್ರನ್ನು ಎಲ್ಲರೂ ಭುಜ ಒತ್ತಿ ಕುರ್ಚಿಯಲ್ಲಿ ಕೂರಿಸಿ ಹೂಳಿಬಿಟ್ಟದ್ದಾಯ್ತು.

ಅಷ್ಟರಲ್ಲಿ ಪರಿಸ್ಥಿತಿಯನ್ನು ತಿಳಿಗೊಳಿಸಲು ಸಾಹಿತಿಯೊಬ್ಬರು ನಗೆಚಟಾಕಿ ಹಾರಿಸುತ್ತಾ ತಮ್ಮ ಮನೆಯಲ್ಲಿ ತಮ್ಮ ಮಗ ಇಂಗ್ಲೀಷ್ ಕಲಿಯುತ್ತಿರುವಾಗ ಐ ಹಾವು ಏ ಪೆನ್ನು ಎಂದು ಜೋರಾಗಿ ಉರು ಹೊಡೆಯುತ್ತಿರುವಾಗ ತಮ್ಮ ಅಮ್ಮ ಹಾವು ಕೇಳಿ ಬೆಚ್ಚಿ ಬಿದ್ದ ಕಥೆಯನ್ನು ವಿವರಿಸಿದಾಗ ಮತ್ತು ತಮ್ಮ ವಿದೇಶೀ ಮೊಮ್ಮಗ ಹೋಳಿಗೆಯನ್ನು ನ್ಯಾಪ್‌ಕಿನ್ ಎಂದು ಮುಖಕ್ಕೆ ಒರೆಸಿಕೊಂಡ ಕಥೆಯನ್ನು ವಿವರಿಸಿದಾಗ ಸಭೆ ನಗೆಗಡಲಲ್ಲಿ ಮುಳುಗಿ ಹೋಗದಿದ್ದರೂ ಸ್ವಲ್ಪ ಮಟ್ಟಿಗೆ ತೇಲಿ ಬಿಟ್ಟಿತು.

ಇಷ್ಟಾದಾಗ ಶಿಕ್ಷಣ ತಜ್ಞ, ವಿಜ್ಞಾನ ಮೇಸ್ಟ್ರೊಬ್ಬರು ಎದ್ದು ನಿತ್ತು ಭಾಷೆಗೂ ಮಣ್ಣಿಗೂ ಸಂಬಂಧವಿದೆ. ಭಾಷೆಗೂ ಸಂಸ್ಕೃತಿಗೂ ಸಂಬಂಧವಿದೆ. ಆ ಆ ಮಣ್ಣಿನ ಭಾಷೆಯನ್ನೇ ಆ ಆ ಮಣ್ಣಿನ ಮಕ್ಕಳು ಕಲಿತರೆ ಅದರಿಂದ ಹೃದಯದ ಆರೋಗ್ಯ ಹೆಚ್ಚುತ್ತದೆ. ಅದರಂತೆ ತಾಯಿಯ ಗರ್ಭದಲ್ಲಿರುವಾಗಲೇ ಮಗು ತಾಯಿಯ ಭಾಷೆಯನ್ನು, ತಾಯಿಯ ನಾಲಿಗೆಯನ್ನು ಅನುಕರಿಸುವುದು ಅದೇ ರೈಮ್‌ನಲ್ಲಿ ಹೊಟ್ಟೆಯಲ್ಲಿರುವಾಗಲೇ ತುಟಿ ಹಂದಾಡಿಸುವುದು ಅಭಿಮನ್ಯು ಪ್ರಹ್ಲಾದರುಗಳ ಕಥೆ ಇದೀಗ ವೈಜ್ಞಾನಿಕವಾಗಿ ಸ್ಕ್ಯಾನಿಂಗ್‌ನಿಂದ ಸಾಬೀತಾಗಿದೆ. ಆದ್ದರಿಂದ ಮಾತೃಭಾಷೆಯಲ್ಲೇ ಶಿಕ್ಷಣ ಕೊಡುವುದು ಅತ್ಯಂತ ವೈಜ್ಞಾನಿಕ ಮತ್ತು ಮಗುವಿನ ಆರೋಗ್ಯಕ್ಕೆ ಒಳ್ಳೇದು. ಇಂಗ್ಲೀಷ್ ಎಂಬುದು ಜಾಗತಿಕ ಭಾಷೆ ಎಂಬುದು ಬರೇ ಜಾಹೀರಾತು ಮಾತ್ರ. ಇಂಗ್ಲೀಷ್ ನಾಡುಗಳಾದ ಅಮೇರಿಕ ಮತ್ತು ಬ್ರಿಟನ್‌ಗಳ ಜಂಟೀ ಕುತಂತ್ರ ಇದು.

ಅತ್ಯಂತ ಮುಂದುವರಿದ ಜಪಾನ್, ಚೀನಾ, ಅಷ್ಟೇಕೆ ಯೂರೋಪಿನಲ್ಲೇ ಎಷ್ಟೋ ಕಡೆ ಇಂಗ್ಲೀಷೇ ಇಲ್ಲ. ಭಾರತದಲ್ಲೂ ಕಾನ್ವೆಂಟಿಗೆ ಹೋಗದ ಅದೆಷ್ಟೋ ಮಂದಿ ನೋಬೆಲ್ ಪ್ರಶಸ್ತಿ, ರಾಷ್ಟ್ರಾಧ್ಯಕ್ಷತನ ಮೊದಲಾದ ಉನ್ನತ ಪದವಿಯನ್ನು ಪಡೆಯಲಿಲ್ಲವೇ? ನಮ್ಮ ಪ್ರಧಾನಿಗಳೆಲ್ಲಾ ಕಾನ್ವೆಂಟಿನಲ್ಲಿ, ಡೂನ್‌ಸ್ಕೂಲ್‌ಗಳಲ್ಲೇ ಓದಿದ್ದೇ? ಇನ್‌ಫೋಸಿಸ್, ರಿಲಯನ್ಸ್, ವಿಪ್ರೋ ಮೊದಲಾದ ಅರ್ಥ ಪ್ರಪಂಚದ ಮಹಾಕಂಪೆನಿಗಳ ಪ್ರವರ್ತಕರಾದ ಅತಿರಥ ಮಹಾರಥರೆಲ್ಲಾ ಒಂದನೇ ಕ್ಲಾಸ್‌ನಿಂದಲೇ ಇಂಗ್ಲೀಷ್ ಕಲಿತವರೇ? ಹೆಚ್ಚು ಹೇಳಿದರೆ ಆ ಮಹಾನ್ ಅಮೇರಿಕದ ಮಹಾಧ್ಯಕ್ಷ ಒಂದು ರೀತಿಯಲ್ಲಿ ಜಗದಧ್ಯಕ್ಷರಾದ ಭುಷ್ ಸಾಹೇಬರಿಗೇ ಇಂಗ್ಲೀಷ್ ಸರಿ ಬರುವುದಿಲ್ಲವೆಂಬ ಪುಕಾರಿದೆ. ಹಾಗಿರುವಾಗ ಒಂದನೇ ಇಯತ್ತೆಯಿಂದಲೇ ಟಿಂಕ್‌ಲ್ ಟಿಂಕ್‌ಲ್ ಕಲಿಸಿಕೊಡುವ ನೆಸೆಸಿಟಿ ಏನೂ ಇಲ್ಲ. ಇದ್ದರೂ ಅದು ಪೊಲಿಟಿಕಲ್ ನೆಸೆಸಿಟಿ ಮಾತ್ರ. ಭಾರತೀಯರಿಗೆ ಇಂಗ್ಲೀಷ್ ಬಗ್ಗೆ ವೈಜ್ಞಾನಿಕ ಮೂಢನಂಬಿಕೆ ಹೆಚ್ಚಾಗುತ್ತಿದೆ. ಇಂಗ್ಲೀಷ್ ಸಂಸ್ಕೃತಿಯ ಅತಿಯಾದ ಮೋಹದಿಂದ ಇಸ್ಪೀಟ್ ಸಂಸ್ಕೃತಿ, ಪಬ್‌ಸಂಸ್ಕೃತಿಗಳು ಹರಡುತ್ತವೆ. ಆದ್ದರಿಂದ

ಹಾಗೇನಾದರೂ ಬೇಕಿದ್ದರೆ ಸಂಸ್ಕೃತವನ್ನು ಮೊದಲಿನ ತರಗತಿಯಿಂದಲೇ ಕಲಿಸಿದರೆ ಇಂಗ್ಲೀಷ್ ಆದಿಯಾಗಿ ಕರ್ನಾಟಕದ ರಾಜಧಾನಿ ಬೆಂಗಳೂರಿಗೆ ಅತ್ಯಂತ ಬೇಕಾಗಿರುವ ತಮಿಳ್ ಮೊದಲಾದ ಎಲ್ಲ ಭಾಷೆಗಳೂ ಬೇಗನೆ ಬರುತ್ತವೆ. ಸಂಸ್ಕೃತ ಸರ್ವಭಾಷಾ ಮೂಲ ಭಾಷೆ ಎನ್ನುತ್ತಾ, ಇನ್ನೂ ಉಸಿರು ಪೂರ್ತಿ ಹೊರಬಿಡಲಿಲ್ಲ ಅಷ್ಟರಲ್ಲೇ ಪುರೋಹಿತರ ಮಗನಾದ ಈ ಸಾಯನ್ಸ್ ಮೇಸ್ಟ್ರನ್ನು ಸಾಯಿಸಿ ಬಿಡುವಷ್ಟು ಗಲಾಟೆ ಭುಗಿಲೆದ್ದು ಯಾರು ಏನು ಮಾತಾಡುತ್ತಿದ್ದಾರೆಂದೇ ಕೇಳದಂತಾಗಿ ಇಡೀ ವಾತಾವರಣವೇ ವಿಧಾನಸಭೆಯಂತಾದಾಗ ಹಿಂದುಳಿದ ಪೇರೆಂಟ್‌ಗಳೆಲ್ಲಾ ಒಟ್ಟಾಗಿ ಎದ್ದು ನಿತ್ತು

ನೋಡಿ ಇದಕ್ಕೇ ಹೇಳುವುದು ಜಾತೀಯತೆ ಎಂದು. ಇಷ್ಟೆಲ್ಲಾ ಹೇಳುತ್ತಾರಲ್ಲಾ ನೋಡಿ ಈ ಸಾಹಿತಿಗಳು, ಈ ಮೇಸ್ಟ್ರುಗಳು, ಈ ಪುರೋಹಿತರುಗಳು. ಅವರು ತಮ್ಮ ಮಕ್ಕಳನ್ನು ಯಾವ ಸ್ಕೂಲ್‌ಗಳಲ್ಲಿ ಓದಿಸುತ್ತಿದ್ದಾರೆಂದು ಕೇಳಿದಿರಾ? ತಮ್ಮ ಮಕ್ಕಳನ್ನೆಲ್ಲಾ ಇಂಗ್ಲೀಷ್ ಮೀಡಿಯಂ ಸ್ಕೂಲುಗಳಲ್ಲಿ ಓದಿಸಿ, ನಮ್ಮ ಮಕ್ಕಳು ಮಾತ್ರ ಫಾರಿನ್ನಿಗೆ ಹೋಗಬಾರದೆಂದು ಈ ರೀತಿ ಉಪನ್ಯಾಸ ನೀಡುತ್ತಾರೆ. ಇವರ ಮಕ್ಕಳನ್ನೆಲ್ಲಾ ಅಂಡಮಾನಿಗೆ ಕಳುಹಿಸಬೇಕು. ನಾವು ಬಿಡುವುದಿಲ್ಲ. ಧರಣಿ ಕೂರುತ್ತೇವೆ. ಹರತಾಳ ಹೊಡೆಯುತ್ತೇವೆ. ಇನ್ನು ಮುಂದೆ ಇದನ್ನು ಸಹಿಸಲಿಕ್ಕಾಗುವುದಿಲ್ಲ ಎಂದು ಒಟ್ಟಾಗಿ ತ್ಸುನಾಮಿ ಎಬ್ಬಿಸಿದಾಗ ಅಧ್ಯಕ್ಷತೆ ವಹಿಸಿದ ಸೀಯಮ್ಮು ಸಾಹೇಬರಿಗೆ ತಮ್ಮ ಮಕ್ಕಳನ್ನು ಯಾವ ಸ್ಕೂಲಿಗೆ ಸೇರಿಸಿದ್ದಾರೆಂದು ಕೇಳದೇ ಹೋದದ್ದರಿಂದ ತಾವು ಬಚಾವಾದವೆಂದನಿಸಿದರೂ ಈಗ ಏನು ನಿರ್ಧಾರ ಮಾಡಬೇಕು, ಸಭೆ ಹೇಗೆ ಮುಗಿಸಬೇಕೆಂದು ಗೊತ್ತಾಗದೆ ಮೆಲ್ಲನೆ ಸೆಕ್ರೆಟ್ರಿ ಕಿಟ್ಟಣ್ಣನನ್ನು ಕರೆದು ಅಡ್ವೈಸ್ ಕೇಳಿದಾಗ ಕಿಟ್ಟಣ್ಣ ಹೇಳುತ್ತಾನೆ –

ಸಾರ್ ಪರಿಹಾರ ತಮ್ಮ ಹೆಸರಲ್ಲೇ ಇದೆ ಸಾರ್. ಆದಕ್ಕೇನೇ ತಮಗೆ ಸೀಯಮ್ ಎಂದು ಹೆಸರಿಟ್ಟದ್ದು ಸಾರ್. ಇದು ಎರಡೂ ಬೀಜಾಕ್ಷರ ಸಾರ್. ಇಂಗ್ಲೀಷ್ ಕಲಿತವರಿಗೇ ಇದು ಅರ್ಥಾಗೋದು ಸಾರ್. ತಮ್ಮ ಸೀಯಮ್ ಹೆಸರಲ್ಲೇ ಎಲ್ಲಾ ಇದೆ ಸಾರ್. ಎಮ್ ಎಂದರೆ ಮನಿ, ಮೈನಾರಿಟಿ, ಮೆರಿಟ್, ಮೆಜಾರಿಟಿ, ಮಸ್ಲ್, ಮತ ಮುಂತಾದ ಮೆನಿಮ್ಯಾಟರ್ ಮೂಡುತ್ತದೆ ಸಾರ್ ಇದರಲ್ಲಿ. ಅವುಗಳ ಸಮುದ್ರ ಸಾರ್ ಸೀ ಯಮ್ ಅಂದರೆ. ನೋಡಿ ಸಾರ್ ಒಂದು ಕೆಲಸ ಮಾಡಿ ಸಾರ್. ಇಂಗ್ಲೀಷ್ ಜಾರಿ ಮಾಡಿ ಸಾರಿ. ತಕ್ಷಣ ದರಿದ್ರ ಕನ್ನಡ ಸಮ್ಮೇಳನ ದೊಡ್ಡದಾಗಿ ಮಾಡಿ ಸಾರ್. ನೋಡಿ ಸಾರ್ ತಮಗೆ ಸೀಯಮ್ ಸಾಹೇಬರು ಎಂದು ಕರೆಯುವಾಗ ಆಗುವ ಆನಂದ ಮುಖ್ಯಮಂತ್ರಿಗಳು ಎಂದು ಕರೆದಾಗ ಆಗುತ್ತದಾ ಸಾರ್? ಎಂದನ್ನುತ್ತಿರುವಾಗಲೇ ಮಹಾಬುದ್ಧಿವಂತರಾದ ಸೀಯಮ್ಮು ಸಾಹೇಬರಿಗೆ ತಮ್ಮ ಯಮ್ಮಿಗೆ ಮುನ್ನೋಡು, ಮುಂದೂಡು, ಮುಂದೋಡು ಎಂದು ಅರ್ಥತ್ರಯ ಫ್ಲ್ಯಾಷ್ ಆಗಿ ಮುನಿಯಂತೆ ನೋಡಿ ಸಭೆಯನ್ನು ಮುಂದೂಡಿದರು. ಮುಂದೋಡಿದರು. ಎಲ್ಲರನ್ನೂ ಪುಷ್ಕಳ ಭೋಜನದಲ್ಲಿ ಮೂರು ಮೊಳ ಮುಳುಗಿಸಿದರು.

– ಸುಶ್ರೀ



# ಡಾ। ಬಿ. ಎನ್. ಕೆ. ಶರ್ಮಾ ಅವರ ನಿಧನಕ್ಕೆ

## ಪುತ್ತಿಗೆ ಶ್ರೀಗಳ ಸಂತಾಪ



ಫ್ಲೋರಿಡಾ : ಮಧ್ವಶಾಸ್ತ್ರ ಸಂಪನ್ನ, ಮಹಾಮಹೋಪಧ್ಯಾಯ ಸಂಸ್ಕೃತ ಹಾಗೂ ಆಂಗ್ಲ ಭಾಷಾ ವಿದ್ವಾಂಸ ಡಾ। ಬಿ. ಎನ್. ಕೆ. ಶರ್ಮಾ ಅವರ ನಿಧನಕ್ಕೆ ಪುತ್ತಿಗೆ ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು ತಮ್ಮ ವಿಷಾಧವನ್ನು ವ್ಯಕ್ತ ಪಡಿಸಿದ್ದಾರೆ.

ಅಮೇರಿಕಾದ ಸಂಚಾರದಲ್ಲಿರುವ ಶ್ರೀಗಳು ತಮ್ಮ ಸಂದೇಶದಲ್ಲಿ ಡಾ। ಬಿ. ಎನ್. ಕೆ. ಶರ್ಮಾರವರು ಮಧ್ವಶಾಸ್ತ್ರದ ಪ್ರಸಾರಕ್ಕಾಗಿ ಸಲ್ಲಿಸಿದ ವಿಶೇಷ ಸೇವೆಯನ್ನು ಸ್ಮರಿಸಿ, ಆಚಾರ್ಯ ಮಧ್ವರ ಗ್ರಂಥಗಳನ್ನು ಆಂಗ್ಲ ಭಾಷೆಯಲ್ಲಿ ಸಮರ್ಪಕವಾಗಿ ಅನುವಾದಿಸಿ ವಿದೇಶಗಳಲ್ಲಿಯೂ ಮಧ್ವರ ತತ್ವಶಾಸ್ತ್ರದ ಅಧ್ಯಯನದ ಆಸಕ್ತಿಯನ್ನು ಹೆಚ್ಚಿಸಿ, ಆಂಗ್ಲ ಭಾಷೆಯ ಮುಖಾಂತರ ಅವರು ನಡೆಸಿದ ಮಧ್ವಶಾಸ್ತ್ರದ ಪ್ರಚಾರದ ಸೇವೆಯನ್ನು ಮುಕ್ತಕಂಠದಿಂದ ಪ್ರಶಂಸಿಸಿದ್ದಾರೆ.

96ರ ಇಳಿ ವಯಸ್ಸಿನಲ್ಲಿಯೂ ನಿರಂತರ ಅಧ್ಯಯನ ಶೀಲರಾಗಿದ್ದ ಶರ್ಮಾರು ಸುಗುಣಮಾಲಾ ಆಂಗ್ಲ ಪತ್ರಿಕೆಯಲ್ಲಿಯೂ ನಿರಂತರ ಲೇಖನಗಳನ್ನು ನೀಡುತ್ತಲಿದ್ದರು. ಗೀತಾ ಲೇಖನ ಯಜ್ಞದ ಸೇವಾರ್ಥಿಗಳಿಗಾಗಿ ಸಮಗ್ರ ಗೀತೆಯನ್ನು ಆಂಗ್ಲ ಬಾಷೆಯಲ್ಲಿ ಅನುವಾದಿಸಿದ್ದರು. ಅನೇಕ ರಾಜ್ಯ ಹಾಗೂ ಕೇಂದ್ರ ಸರಕಾರದ ಪ್ರಶಸ್ತಿಗಳನ್ನೂ ಪಡೆದೂ ಸರಳ ಸಜ್ಜನಿಕೆಯ ಓರ್ವ ವಿದ್ವಾಂಸರಾಗಿದ್ದ ಶರ್ಮಾರ ನಿಧನದಿಂದ ಮಾಧ್ವ ಶಾಸ್ತ್ರದ ಪ್ರಸಾರಕ್ಕೆ ಬಹಳಷ್ಟು ನಷ್ಟವಾಗಿರುವುದು. ಶ್ರೀ ಶರ್ಮಾರ ನಿಧನದಿಂದ ಪ್ರಾಚೀನ ಪರಂಪರೆಯ ಓರ್ವ ವಿದ್ವಾಂಸರನ್ನು ಕಳೆದುಕೊಂಡಂತಾಗಿದೆ. ಅವರ ಅಸಾಧಾರಣ ಅನೇಕ ಶಾಸ್ತ್ರಗಳ ಪಾಂಡಿತ್ಯ ನಮಗೆಲ್ಲಾ ಸ್ಫೂರ್ತಿಯನ್ನು ನೀಡಿತ್ತು. ನಮ್ಮ ಆರಾಧ್ಯ ದೇವ ಶ್ರೀ ಪಾಂಡುರಂಗ ವಿಠಲ ಅವರ ಆತ್ಮಕ್ಕೆ ಸದ್ಗತಿಯನ್ನೂ ಅವರ ಕುಟುಂಬಕ್ಕೆ ದುಃಖ ಸೈರಿಸುವ ಶಕ್ತಿಯನ್ನು ನೀಡಲಿ ಎಂದು ಪೂಜ್ಯ ಶ್ರೀಪಾದರು ತಮ್ಮ ಸಂದೇಶದಲ್ಲಿ ತಿಳಿಸಿರುತ್ತಾರೆ.

ಈಶಾನ್ಯ ಭಾರತದ ಮುಖ್ಯ ಸ್ಥಳವಾದ ಕೋಲ್ಕತ್ತ ಮಹಾನಗರದಲ್ಲಿ
**ಶ್ರೀಕೃಷ್ಣ ಆಂಜನೇಯ ಶ್ರೀ ಗುರುರಾಘವೇಂದ್ರ ಸ್ವಾಮಿಗಳವರ ಸನ್ನಿಧಿ ಸಹಿತವಾದ**
**ಉಡುಪಿ ಶ್ರೀ ಪುತ್ತಿಗೆ ಮಠವು**
**ಶ್ರೀ ಪುತ್ತಿಗೆ ಮಠಾಧೀಶರಾದ**

## ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರ

ನೇತೃತ್ವದಲ್ಲಿ ಇದೀಗ ಸುಂದರವಾಗಿ ನವೀಕೃತಗೊಂಡಿದ್ದು ಈಶಾನ್ಯ ಭಾರತಕ್ಕೆ ಆಗಮಿಸುವ ಯತ್ರಾರ್ಥಿಗಳಿಗೆ ಗಂಗಾಸಾಗರ ಸಂಗಮವನ್ನು ಸಂದರ್ಶಿಸುವ ಯಾತ್ರಿಗಳಿಗೆ ಮುಖ್ಯ ತಾಣವಾಗಿ ರೂಪಿತಗೊಂಡಿದ್ದು,

## ಯಾತ್ರಾರ್ಥಿಗಳು ತಮ್ಮ ಯಾತ್ರಾನುಕೂಲ್ಯಕ್ಕಾಗಿ

ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಬಹುದು.

**ಉಡುಪಿ ಶ್ರೀ ಪುತ್ತಿಗೆ ಮಠ,**

**49ಏ, ಪ್ರತಾಪಾದಿತ್ಯ ರೋಡ್, ಕೋಲ್ಕತ್ತ, 700 026**

ದೂರವಾಣಿ : 033 - 24665520

**ಮುಖಪುಟದಲ್ಲಿರುವ ಚಿತ್ರ ಶ್ರೀ ಪುತ್ತಿಗೆ ಮಠಾಧೀಶರಿಂದ ಅಮೆರಿಕಾದ ನ್ಯೂಜೆರ್ಸಿಯ ಶ್ರೀಕೃಷ್ಣ ಬೃಂದಾವನದಲ್ಲಿ ಪ್ರತಿಷ್ಠಾಪಿಸಲ್ಪಟ್ಟು ಕಳೆದೆರಡೂವರೆ ವರ್ಷಗಳಿಂದ ಪೂಜೆಗೊಳ್ಳುತ್ತಿರುವ**

## ಕಡೆಗೋಲುಧಾರಿ ಶ್ರೀಕೃಷ್ಣ.

**ನಿತ್ಯಾನ್ನದಾನ, ಪಾಠ - ಪ್ರವಚನ, ಸಾವಿರಾರು ಮಂದಿ ಭಕ್ತರ ಪಾಲ್ಗೊಳ್ಳುವಿಕೆಯೊಂದಿಗೆ ಗುರುಶ್ರೀರಾಘವೇಂದ್ರರ ಆರಾಧನೆ, ಕೃಷ್ಣಲೀಲೋತ್ಸವ ಇತ್ಯಾದಿಗಳು ಇಲ್ಲಿನ ವೈಶಿಷ್ಟ್ಯ.**

## ಶ್ರೀ ರಾಘವೇಂದ್ರ ಸ್ವಾಮಿ ಆರಾಧನಾ ಮಹೋತ್ಸವ

1. ಶ್ರೀ ವಿಠ್ಠಲಾಂಜನೇಯ ಶ್ರೀ ರಾಘವೇಂದ್ರ ಮಠ, ಹಬ್ಬುವಾಡ, ಕಾರವಾರ, ಉ.ಕ.
2. ಹೊಸನಗರದ ಶ್ರೀ ಪುತ್ತಿಗೆ ಮಠದ ಶಾಖೆಯ ಶ್ರೀ ರಾಘವೇಂದ್ರ ಮಠ.
3. ಕಲ್ಕತ್ತಾದಲ್ಲಿರುವ ಶ್ರೀ ಪುತ್ತಿಗೆ ಮಠದ ಶಾಖೆ ಶ್ರೀ ರಾಘವೇಂದ್ರ ಮಠ.
4. ಧರ್ಮಪುರಿಯಲ್ಲಿರುವ ಶ್ರೀ ಪುತ್ತಿಗೆ ಮಠದ ಶಾಖೆ ಶ್ರೀ ರಾಘವೇಂದ್ರ ಮಠದಲ್ಲಿ

## ಶ್ರೀ ರಾಘವೇಂದ್ರ ಗುರುಗಳ ಆರಾಧನಾ ಮಹೋತ್ಸವವು

ದಿನಾಂಕ 21-8-2005ನೇ ಆದಿತ್ಯವಾರ ಜರಗಲಿದ್ದು, ಭಕ್ತಾದಿಗಳು ಈ ಆರಾಧನಾ ಮಹೋತ್ಸವದಲ್ಲಿ ಭಾಗವಹಿಸಿ ಶ್ರೀ ಹರಿವಾಯುಗುರುಗಳ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ.



**ಶ್ರೀ ಪುತ್ತಿಗೆ, ಭೀಮನಕಟ್ಟೆ ಶ್ರೀ ಶ್ರೀಗಳ ನೇತೃತ್ವದಲ್ಲಿ ಪುತ್ತಿಗೆ ಮತ್ತು ಬೆಂಗಳೂರುಗಳಲ್ಲಿ ಶ್ರೀಪುತ್ತಿಗೆ ಮಠದಲ್ಲಿ ಪ್ರತಿವರ್ಷದಂತೆ ಮುದ್ರಾಧಾರಣ ಕಾರ್ಯಕ್ರಮ ಸಾಂಗವಾಗಿ ನೆರವೇರಿತು.**

**ಶ್ರೀ ಪುತ್ತಿಗೆ ವಿದ್ಯಾಪೀಠದ ನವೀಕೃತ ಗ್ರಂಥಾಲಯದ ಉದ್ಘಾಟನಾ ಸಮಾರಂಭವನ್ನು ಶ್ರೀಪುತ್ತಿಗೆ, ಭೀಮಸೇನ ಮುನಿವೃಂದ ಮಠಾಧೀಶರುಗಳು ಹರಸಿದರು.**






**ಶ್ರೀಪುತ್ತಿಗೆ ವಿದ್ಯಾಪೀಠದಲ್ಲಿ ಶ್ರೀ ಶ್ರೀ ಸುಗುಣೇಂದ್ರತೀರ್ಥ ಶ್ರೀಪಾದರು ನೂತನ ವಿದ್ಯಾರ್ಥಿಗಳಿಗೆ ಶ್ರೀಕೃಷ್ಣ ಮಂತ್ರ ಉಪದೇಶಿಸುತ್ತಿರುವುದು.**